# ಕೆಂಧೂಳಿ

ಹೊಸ ಸವಾಲುಗಳ ಕನಸು

ಪ್ರಧಾನ ಸಂಪಾದಕ: ತುರುವನೂರು ಮಂಜುನಾಥ

**KENDHOOLI** *Kannada Weekly*

kendhooli.com/e-paper/


**ರೈತನ ಬೆತ್ತಲೆ ಮಾಡಿ ಪುಟಗೋಸಿ ಎಸೆವ ಪ್ರಧಾನಿ**



ಡಿ.ಉಮಾಪತಿ
ಅವರ ಅಂಕಣದಲ್ಲಿ...


ಸಂಪುಟ - 02 । ಸಂಚಿಕೆ - 54 । ಪುಟ - 16 । ರೂ. 16/- । ನವೆಂಬರ್ 25 ರಿಂದ ಡಿಸೆಂಬರ್ 1, 2021 MAG(2)Npp/49/2020-21






# ರೈತರ ಗೋಳು ಕೇಳುವವರ್ಯಾರು..?


## ಮೋದಿ ಕ್ಷಮಾಯಾಚನೆ ಹಿಂದೆ ಮುಂದೆ

ಎಂ.ಕೆ. ಭಾಸ್ಕರ ರಾವ್
ಅವರ ಅಂಕಣದಲ್ಲಿ...

## ರೈತರ ನಂಬಿಕೆ ಕಳೆದುಕೊಂಡ ಸರಕಾರ

## ಡೆಡ್ಲಿ ಚಂಡಮಾರುತಕ್ಕೆ ದಕ್ಷಿಣ ಭಾರತ ತತ್ತರ, ವಿಜ್ಞಾನಿಗಳಿಗೆ ಸಿಗುತ್ತಿಲ್ಲ ಉತ್ತರ..!

# ಅಕಾಲಿಕ ಮಳೆಯಂತ ಪಕೃತಿ ವಿಕೋಪಕ್ಕೆ ನಾವೂ ಕಾರಣ..



## ಮನ ಮಿಡಿತ



ತುರುವನೂರು ಮಂಜುನಾಥ
ಪ್ರಧಾನ ಸಂಪಾದಕ

"ಹವಾಮಾನ ಬದಲಾವಣೆಗೆ ತುತ್ತಾಗಿರುವ ಅತ್ಯಂತ ದುರ್ಬಲ ದೇಶಗಳಲ್ಲಿ ಭಾರತ ಕೂಡ ಒಂದಾಗಿದೆ. ಮುಂಬರುವ ವರ್ಷಗಳಲ್ಲಿ ಪ್ರವಾಹ, ಚಂಡಮಾರುತ, ಶಾಖದ ಅಲೆಗಳು, ಕಾಡ್ಗಿಚ್ಚು, ಬರಗಾಲದಂಥ ಹವಾಮಾನ ಘಟನೆಗಳ ತೀವ್ರತೆ ಹೆಚ್ಚಳವಾಗಲಿದೆ "ಎಂದು ಕ್ಲೈಮೇಟ್ ಚೇಂಜ್ ಅಂಡ್ ಎನರ್ಜಿ ಪ್ರೋಗ್ರಾಮ್ ನಿರ್ದೇಶಕ ಎಸ್ ಪನ್ವಾರ್ ಅವರು ಕಳೆದ ಆಗಸ್ಟ್ ತಿಂಗಳಲ್ಲಿ  ಈ ವಿಷಯವನ್ನು ತಿಳಿಸಿದ್ದರು ಅದರ ಪ್ರಕಾರವಾಗಿಯೇ ಈಗ ದೇಶದಲ್ಲಿ  ಒಂದಲ್ಲಾ ಒಂದು ಘಟನೆಗಳು ಸಂಭವಿಸುತ್ತಿವೆ.

ಮುಂಬರುವ ವರ್ಷಗಳಲ್ಲಿ ಹವಾಮಾನ ಬದಲಾವಣೆಯ ಪ್ರಬಲ ಪರಿಣಾಮಗಳು ಎದುರಾಗಲಿದ್ದು, ಭಾರತ ಈಗಲೇ ಕಾರ್ಯೋನ್ಮುಖವಾಗಬೇಕು ಎಂದು ಕಳೆದ ಆಗಸ್ಟ್ 10 ರಂದು ಪರಿಸರ ತಜ್ಞರು ಎಚ್ಚರಿಕೆ ನೀಡಿದ್ದರು ತುರ್ತಾಗಿ, ಹಸಿರುಮನೆ ಅನಿಲ ಹೊರಸೂಸುವಿಕೆಯ ನಿಯಂತ್ರಣ ಸೇರಿದಂತೆ ಹವಾಮಾನ ಬದಲಾವಣೆ ಎದುರಿಸಲು ಸ್ಥಿತಿಸ್ಥಾಪಕ ಮೂಲಸೌಕರ್ಯ ಅಭಿವೃದ್ಧಿಪಡಿಸುವತ್ತ ಗಮನ ಹರಿಸಬೇಕು ಎಂದು ಐಪಿಸಿಸಿ ವರದಿಯಲ್ಲಿ ಎಚ್ಚರಿಸಿತ್ತು.

ಇಂಟರ್‌ಗವರ್ನಮೆಂಟಲ್ ಪ್ಯಾನೆಲ್ ಆನ್ ಕ್ಲೈಮೇಟ್ ಚೇಂಜ್  ತನ್ನ ಆರನೇ ಮೌಲ್ಯಮಾಪನ ವರದಿಯಲ್ಲಿ ಈ ಎಚ್ಚರಿಕೆಯನ್ನು ನೀಡಿದೆ. ಭೂಮಿಯ ಪ್ರತಿ ಭಾಗವು ಮುಂಬರುವ ವರ್ಷಗಳಲ್ಲಿ ಹವಾಮಾನ ಬದಲಾವಣೆಯ ಗಂಭೀರ ಪರಿಣಾಮವನ್ನು ಎದುರಿಸಲಿವೆ. ಸಮುದ್ರ ಮಟ್ಟದ ಏರಿಕೆ ಸೇರಿದಂತೆ ಶಾಖದ ಅಲೆಗಳು, ಭಾರೀ ಮಳೆ, ಬರ, ಕಾಡ್ಗಿಚ್ಚು ಹಾಗೂ ಪ್ರವಾಹಗಳಂಥ ಹವಾಮಾನ ಬದಲಾವಣೆಯ ಕೆಟ್ಟ ಪರಿಣಾಮಗಳಿಗೆ ಭೂಮಿಯು ಸಾಕ್ಷಿಯಾಗಲಿದೆ ಎಂದು ತಿಳಿಸಿದೆ.

ತುರ್ತಾಗಿ ಇಂಗಾಲದ ಹೊರಸೂಸುವಿಕೆಯನ್ನು ಶೇ 50ರಷ್ಟು ಕಡಿಮೆ ಮಾಡುವುದು ಬಹಳ ಮುಖ್ಯ ಎಂದು ವಿಜ್ಞಾನಿಗಳು ಹೇಳಿದ್ದಾರೆ. ಹಸಿರುಮನೆ ಅನಿಲ ಹೊರಸೂಸುವಿಕೆ ಶೂನ್ಯವಾಗುವವರೆಗೂ ಭೂಮಿ ಮೇಲಿನ ಈ ಪರಿಣಾಮಗಳು ಮುಂದುವರೆಯುತ್ತವೆ ಎಂದು ತಜ್ಞರು ಎಚ್ಚರಿಸಿದ್ದರು.

ನಾವು ಈಗಾಗಲೇ ಹವಾಮಾನ ಬದಲಾವಣೆಯ ಪರಿಣಾಮಗಳನ್ನು ಅನುಭವಿಸುತ್ತಿದ್ದೇವೆ ಮತ್ತು ಇಂಗಾಲದ ಡೈ ಆಕ್ಸೈಡ್ ಹೊರಸೂಸುವಿಕೆ ಶೂನ್ಯವಾಗುವವರೆಗೂ ಬಲವಾದ ಪರಿಣಾಮಗಳನ್ನು ಅನುಭವಿಸುತ್ತಲೇ ಇರುತ್ತೇವೆ ಎಂಬ ಸಂದೇಶ ಸ್ಪಷ್ಟವಾಗಿವೆ. ಈ ಬದಲಾವಣೆಗೆ ನಾವು ಹೇಗೆ ಹೊಂದಿಕೊಳ್ಳಬೇಕು ಎಂಬುದರ ಕುರಿತು ಕೂಡ ಗಮನ ಹರಿಸಬೇಕು. ಜನಸಂಖ್ಯೆ, ಆರ್ಥಿಕತೆ ಹಾಗೂ ಮೂಲಸೌಕರ್ಯದ ಮೇಲೆ ಹವಾಮಾನ ಬದಲಾವಣೆ ಪರಿಣಾಮವನ್ನು ಕಡಿಮೆ ಮಾಡುವ ಕುರಿತು ಯೋಚಿಸಬೇಕಿದೆ.

ಈ ಬಗ್ಗೆ ಸುಪ್ರೀಂಕೋರ್ಟ್ ಕೂಡ ಇತ್ತೀಚೆಗೆ ಸೂಚನೆ ನೀಡಿತ್ತು 'ಹವಾಮಾನ ತಜ್ಞರು ಎಲ್ಲೋ ಕಟ್ಟಡದಲ್ಲಿ ಕೂತ ಹವಾಮಾನ ಕುರಿತು  ಮುನ್ಸೂಚನೆ ನೀಡಬೇಡಿ ಸ್ಥಳಗಳಿಗೆ ಭೇಟಿ ನೀಡಿ ನಿಮ್ಮ ವರದಿಗಳನ್ನು ನೀಡಿ 'ಎಂದು ಕಟುವಾಗಿ ಟೀಕಿಸಿತ್ತು. ಇಷ್ಟೆಲ್ಲ ಆದಮೇಲೂ ಕೂಡ ಯಾವುದೇ ತಜ್ಞರು ಇನ್ನೂ ಇದರ ಬಗ್ಗೆ ಹೆಚ್ಚು ಗಮನಹರಿಸಿಲ್ಲ ಎಂದರೆ ಅದು ತಜ್ಞರಲ್ಲಿರುವ ನಿರ್ಲಕ್ಷ್ಯತನ ಎನ್ನುವುದು ಇಲ್ಲಿ ಗೊತ್ತಾಗಲಿದೆ ಅದರ ಪರಿಣಾಮವೇ ಇಂದು ಇಡೀ ದೇಶವೇ ಅಕಾಲಿಕ ಮಳೆಯಿಂದ ಅಕ್ಷರಶಃ ರೈತರು ಬೀದಿಗೆ ಬಂದಿದ್ದಾರೆ ನಗರ ಪ್ರದೇಶಗಳ ಬೃಹತ್ ಕಟ್ಟಡಗಳಿಗೆ ಹಾನಿಯಾಗಿವೆ ರಸ್ತೆಗಳು ಎಲ್ಲೆಂದರಲ್ಲೆ ಕಿತ್ತು ರಸ್ತೆಗಳು ಹಾಳಾಗಿವೆ ಜನರ ಆರೋಗ್ಯದ ಮೇಲೂ ಇದು ಪರಿಣಾಮ ಬೀರಿದೆ ಇಷ್ಟೆಲ್ಲಾ ಆದರೂ ಕೇಂದ್ರ ಒಂದು ಸ್ಪಷ್ಟ ನಿಲುವುಗೆ ಬಂದಿಲ್ಲ ಎಂದರೆ ಅದು ಈ ದೇಶದ ದುರಂತ ಎನ್ನಬಹುದು.

ದೇಶದ ಅರ್ಧ ಭಾಗದಷ್ಟು ಭೂಪ್ರದೇಶದಲ್ಲಿ ಅಕಾಲಿಕ ಮಳೆ ಸುರಿಯುತ್ತಿದ್ದು, ರೈತರು ಬೆಳೆದ ಬೆಳೆಗಳು ಸಂಪೂರ್ಣ ಹಾಳಾಗಿವೆ. ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡಿನಲ್ಲಿ ಜನ, ಜಾನುವಾರುಗಳ ಜೀವವೂ ಬಲಿಯಾಗಿವೆ. ಈ ಅಕಾಲಿಕ ಮಳೆಗೆ ಹವಾಮಾನ ವೈಪರೀತ್ಯ ಕಾರಣ ಎಂದು ವಿಜ್ಞಾನಿಗಳು ಹೇಳಿದ್ದಾರೆ. ಆದರೆ ಈ ಅತಿವೃಷ್ಟಿ ಪರಿಸರದ ಮೇಲೆ ಆಗುತ್ತಿರುವ ಮನುಷ್ಯನ ದೌರ್ಜನ್ಯದ ಪ್ರತಿಫಲವಷ್ಟೇ.

ಮೇಲೆ ಹೇಳಿದ ತಜ್ಞರ ಅಭಿಪ್ರಾಯ ಒಂದು ಕಡೆಯಾದರೆ ಇನ್ನೊಂದೆಡೆ ಜನರು ಕೂಡ ಇದರ ಬಗ್ಗೆ ಅರಿವುಮೂಡಿಸಿಕೊಳ್ಳಬೇಕು ,ನಮ್ಮ ಪ್ರಕೃತಿ ರಕ್ಷಣೆ ನಮ್ಮ ಕೈಯಲ್ಲೇ ಇದೆ ಎಂಬುದನ್ನು ಪ್ರತಿಯೊಬ್ಬರೂ ಅರಿಯಬೇಕಿದೆ. ರಸ್ತೆಯ ಇಕ್ಕೆಲ, ಬಯಲು ಪ್ರದೇಶ, ಸ್ಮಶಾನ ಜಾಗ ಮುಂತಾದ ಪ್ರದೇಶ ಗಳಲ್ಲಿ ಸಸಿಗಳನ್ನು ನೆಟ್ಟು ಮಣ್ಣಿನ ಸವಕಳಿ ತಡೆಯುವ ಕೆಲಸವಾಗಬೇಕಿದೆ. ವಿವಿಧ ಕಾರಣಗಳಿಗಾಗಿ ಮರ ಕಡಿಯುವುದು, ವನ್ಯಜೀವಿಗಳ ಬೇಟೆಯಾಡುವುದನ್ನು ತಡೆಯುವುದು, ಕೆರೆಗಳು ಮತ್ತು ಗೋಮಾಳಗಳನ್ನು ರಕ್ಷಿಸುವುದು, ರೈತರನ್ನು ಸಾವಯವ ಕೃಷಿಗೆ ಹೊರಳಲು ಪ್ರೇರೇಪಿಸುವುದು ಮತ್ತು ಪರಿಸರದ ಸಮಸ್ಯೆಗಳಲ್ಲಿ ಹೆಚ್ಚು ಹೆಚ್ಚು ಸಾಕ್ಷರರಾಗುವಂತೆ ಮಾಡಬೇಕಿರುವುದು ಇಂದಿನ ಪ್ರತಿಯೊಬ್ಬ ನಾಗರಿಕನಿಗೆ ಅವಶ್ಯಕ ಮಾತ್ರ ವಲ್ಲ, ಅನಿವಾರ್ಯವೂ ಆಗಿದೆ.

ಪರಿಸರದಲ್ಲಿ ಅರಣ್ಯ ಮತ್ತು ನದಿಗಳ ಪಾತ್ರವನ್ನು ಅರಿತುಕೊಂಡು, ಅವುಗಳ ರಕ್ಷಣೆಗೆ ಪಣ ತೊಡಬೇಕಿದೆ. ಕೃಷಿಯೆಂಬುದು ಹಲವು ಸಂಕೀರ್ಣಗಳ ಸರಪಳಿ ಯೊಂದಿಗೆ ಹೆಣೆದುಕೊಂಡಿದೆ. ಸಣ್ಣ ಸಣ್ಣ ಕೀಟಗಳು, ಹಕ್ಕಿ ಗಳು, ಪ್ರಾಣಿಗಳು ಸಹ ಯಶಸ್ವಿ ಕೃಷಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ನಿಸರ್ಗದಲ್ಲಿ ಇವುಗಳ ಪರಸ್ಪರ ಸಂಬಂಧ ಅರಿಯದ ಹೊರತು ಕೃಷಿಯಲ್ಲಿ ಅಭಿವೃದ್ಧಿ ಸಾಧ್ಯವಿಲ್ಲ. ರೈತರಲ್ಲದ ಸಮುದಾಯ ಕೂಡ ಪರಿಸರ ರಕ್ಷಣೆ ನಮ್ಮೆಲ್ಲರ ಕರ್ತವ್ಯ ಎಂದು ಭಾವಿಸ ಬೇಕಿದೆ. ಆ ಹೊಣೆಗಾರಿಕೆಯನ್ನು ಕೇವಲ ರೈತ ಸಮುದಾಯ ಅಥವಾ ಸರಕಾರಿ ಇಲಾಖೆಗಳ ಜವಾಬ್ದಾರಿ ಎಂದು ಸಾಗಹಾಕುವ ಬದಲು, ಸ್ವತಃ ಪರಿಸರ ಉಳಿಸಿ, ಬೆಳೆಸಲು ಇಚ್ಛಾಶಕ್ತಿ ಪ್ರದರ್ಶಿಸಬೇಕಿದೆ.

ಈ ನಿಟ್ಟಿನಲ್ಲಿ ಸಂಘ ಸಂಸ್ಥೆಗಳೂ ಜವಾಬ್ದಾರಿ ತೆಗೆದುಕೊಂಡು ರಾಜ್ಯದಲ್ಲಿ ನದಿ, ಕಾನನದ ರಕ್ಷಣೆಗೆ ನಿಲ್ಲಬೇಕಿದೆ. ಇಲ್ಲವಾದಲ್ಲಿ ಇಂತಹ ಪ್ರಕೃತಿ



ವಿಕೋಪಗಳು ಮತ್ತೆ ಮತ್ತೆ ಸಂಭವಿಸುತ್ತವೆ.

ಹವಾಗುಣ ಬದಲಾವಣೆಯು ಮಾನವನ ಪಾಲಿಗೆ ದೊಡ್ಡ ಬೆದರಿಕೆಯಾಗಿದೆ. ಭೂಮಿಯ ಸರಾಸರಿ ಹೊರಮೈ ಉಷ್ಣತೆಯು 19 ನೇ ಶತಮಾನದ ಅಂತ್ಯದಿಂದೀಚೆಗೆ 0.3–0.6 0 ಸೆಂ. ನಷ್ಟು ಹೆಚ್ಚಿದೆ. ಈ ಮಟ್ಟದ ಹೆಚ್ಚುವಿಕೆಯು ನಮಗೆ ಅಲ್ಪವಾಗಿ ತೋರಬಹುದಾದರೂ ಅದು ಪಕೃತಿ ವಿಕೋಪದ ದುರಂತಗಳಿಗೆ ಎಡೆಮಾಡಿಕೊಡುತ್ತದೆ. ಕೃಷಿ ಜನಸಂಖ್ಯಾ ಹೆಚ್ಚಳವು ಆಹಾರದ ಬೇಡಿಕೆಯನ್ನೂ ಹೆಚ್ಚಿಸಿದೆ. ಇದು ನೈಸರ್ಗಿಕ ಸಂಪನ್ಮೂಲಗಳ ಮೇಲೆ ಒತ್ತಡವನ್ನು ಹೇರುವ ಮೂಲಕ ಪರಿಣಾಮ ಬೀರುತ್ತದೆ. ಹವಾಮಾನ ಬದಲಾವಣೆಯು ಕೃಷಿಗಾರಿಕೆಯ ಮೇಲೆ ಪ್ರತ್ಯಕ್ಷ ಹಾಗೂ ಪರೋಕ್ಷ ಪರಿಣಾಮಗಳನ್ನು ಉಂಟುಮಾಡುತ್ತದೆ. ಉಷ್ಣತೆ ಮತ್ತು ಮಳೆಯಲ್ಲಿನ ವ್ಯತ್ಯಾಸದಂತಹ ನೇರ ಪರಿಣಾಮಗಳೂ ಮಣ್ಣಿನ ಗುಣಮಟ್ಟದಲ್ಲಿ ಇಳಿಕೆ, ಕೀಟಗಳು ಮತ್ತು ಕಾಯಿಲೆಗಳಂತಹ ಪರೋಕ್ಷ ಪರಿಣಾಮಗಳೂ ಇದರಿಂದ ಉಂಟಾಗುತ್ತವೆ. ಭಾರತದಲ್ಲಿ ಧಾನ್ಯಗಳ ಪ್ರಮಾಣದಲ್ಲಿ ಭಾರೀ ಇಳಿಕೆ ಯಾಗಲಿದೆ ಎಂದು ಹೇಳಲಾಗುತ್ತಿದೆ. ಮಿತಿಮೀರಿದ ಉಷ್ಣತೆ, ವಿಪರೀತ ಮಳೆ, ನೆರೆಪ್ರವಾಹಗಳು, ಬರಗಾಲಗಳೇ ಮೊದಲಾದವು ಕೂಡ ಬೆಳೆ ಉತ್ಪಾದನೆಯ ಮೇಲೆ ದುಷ್ಪರಿಣಾಮ ಬೀರುತ್ತವೆ. ಹವೆ ಬಿಸಿ ಹವಾಗುಣವು ಮಳೆಯ ವಿನ್ಯಾಸದಲ್ಲಿ ಬದಲಾವಣೆಯನ್ನು ತರುತ್ತದೆ. ಇದರಿಂದಾಗಿ ಕ್ಷಾಮ ಮತ್ತು ಪ್ರವಾಹಗಳು ಉಂಟಾಗುತ್ತವೆ. ಧೃವ ಪ್ರದೇಶಗಳಲ್ಲಿನ ಮಂಜು ಚಪ್ಪಡಿಗಳು ಕರಗಿ ಹರಿಯುವ ಮೂಲಕ ಸಮುದ್ರ ಮಟ್ಟದಲ್ಲಿ ಏರಿಕೆ ಉಂಟಾಗುತ್ತದೆ. ಉಷ್ಣತೆಯ ವ್ಯತ್ಯಯದಿಂದಾಗಿ ಕಳೆದ ಕೆಲವು ವರ್ಷಗಳಿಂದ ಬಿರುಗಾಳಿ ಮತ್ತು ಸುಂಟರಗಾಳಿಗಳ ಹಾವಳಿ ಹೆಚ್ಚಾಗಿದೆ. ಸಮುದ್ರ ಮಟ್ಟದ ಏರಿಕೆ ಹವಾಗುಣದ ವ್ಯತ್ಯಯದ ಪರಿಣಾಮಗಳಲ್ಲಿ ಸಮುದ್ರ ಮಟ್ಟದ ಏರಿಕೆಯೂ ಒಂದು. ಸಾಗರಗಳ ಕಾಯುವಿಕೆ ಹಾಗೂ ಧೃವ ಪ್ರದೇಶಗಳ ಮಂಜು ಕರಗಿ ಹರಿಯುವುದರ ಪರಿಣಾಮವಾಗಿ ಮುಂದಿನ ಶತಮಾನದ ವೇಳೆಗೆ ಸಮುದ್ರ ಮಟ್ಟವು ಸರಾಸರಿ ಅರ್ಧ ಮೀಟರ್ನಷ್ಟು ಏರಲಿದೆ ಎಂದು ಊಹಿಸಲಾಗಿದೆ. ಸಮುದ್ರ ಮಟ್ಟದ ಏರುವಿಕೆಯು ಕರಾವಳಿ ಪ್ರದೇಶಗಳ ಮೇಲೆ ಸಾಕಷ್ಟು ದುಷ್ಪರಿಣಾಮಗಳನ್ನು ಉಂಟುಮಾಡಬಹುದು. ಕಡಲ್ಕೊರೆತ, ನಿರಂತರ ಪ್ರವಾಹ, ಉಪ್ಪುನೀರಿನ ಒಳನುಗ್ಗುವಿಕೆಯೇ ಮೊದಲಾದ ಹಾನಿಗಳು ಉಂಟಾಗಬಹುದು. ಇವೆಲ್ಲವೂ ಕರಾವಳಿ ಪ್ರದೇಶದ ಕೃಷಿಗಾರಿಕೆ, ಕುಡಿಯುವ ಜಲಮೂಲಗಳು, ಮೀನುಗಾರಿಕೆ, ಮಾನವ ವಸತಿ ಹಾಗೂ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವವು. ಆರೋಗ್ಯ ಭೂತಾಪಮಾನ ಏರಿಕೆಯಿಂದ ಮಾನವ ಆರೋಗ್ಯದ ಮೇಲೆ ನೇರ ಪರಿಣಾಮಗಳುಂಟಾಗುತ್ತವೆ. ಉಷ್ಣಕ್ಕೆ ಸಂಬಂಧಿಸಿದ ನಿರ್ಜಲತೆ, ಸೋಂಕು ರೋಗಗಳ ಹರಡುವಿಕೆ, ಅಪೌಷ್ಟಿಕತೆ ಹಾಗೂ ಸಾರ್ವಜನಿಕ ಆರೋಗ್ಯ ವಿನ್ಯಾಸದಲ್ಲಿ ತೊಡಕುಗಳು ಉಂಟಾಗುತ್ತವೆ. ಅರಣ್ಯ ಮತ್ತು ವನ್ಯಜೀವಿಗಳು ನೈಸರ್ಗಿಕ ಪರಿಸರದಲ್ಲಿರುವ ಗಿಡ–ಮರಗಳು ಹಾಗೂ ಪ್ರಾಣಿಗಳು ಹವಾಮಾನ ಬದಲಾವಣೆಗೆ ಸೂಕ್ಷ್ಮವಾಗಿ ಸ್ಪಂದಿಸುತ್ತವೆ. ಹವಾಗುಣ ಬದಲಾವಣೆಯ ಪ್ರಮಾಣವು ಏರುತ್ತ ಸಾಗಿದ್ದೇ ಆದಲ್ಲಿ, ಹಲವಾರು ಜಾತಿಗಳ ಸಸ್ಯ ಸಂಕುಲ ಹಾಗೂ ಪ್ರಾಣಿಗಳು ನಾಶವಾಗಿ ಹೋಗುವ ಸಾಧ್ಯತೆಗಳು ಇಲ್ಲದಿಲ್ಲ.

ಹೀಗೆ ಪಕೃತಿವಿಕೋಪಗಳು ನಿರಂತರವಾಗಿ ದಾಳಿ ಮಾಡುತ್ತವೆ ಹಾಗಾಗಿ ಮನುಷ್ಯ ಇಂದು ಪಕೃತಿಯನ್ನು ಕಾಪಡುವ ಅಗತ್ಯವಿದೆ. ಮೇಲೆ ಹೇಳಿದ ಹಾಗೆ ಮನುಷ್ಯ ಜಾಗೃತಿಗೊಳ್ಳಬೇಕಿದೆ ಎಲ್ಲವೂ ಸರ್ಕಾರವೇ ಮಾಡಲು ಸಾಧ್ಯವಿಲ್ಲ ಪರಿಸರದ ಮೇಲೆ ಹಾನಿ ಮಾಡುವ ಮನುಷ್ಯ ಮೊದಲು ಜಾಗೃತನಾಗಬೇಕು ಇದು ನನ್ನದು ನಮ್ಮದು ಎನ್ನುವ ವಿಶ್ವಾಸ ಮೂಡಬೇಕು ಆಗಲೇ ಇಂತ ಪಕೃತಿ ವಿಕೋಪಗಳು ಕಡಿಮೆಯಾಗುತ್ತವೆ ಇಲ್ಲದಿದ್ದರೆ ಈಗ ಆರಂಭವಾಗಿರುವ ಅಕಾಲಿಕ ಮಳೆಯಂತಹ ದೊಡ್ಡ ಪ್ರಾಕೃತಿಕ ಹಾನಿಗಳು ಸಂಭವಿಸವ ಸಾಧ್ಯತೆಗಳು ಇನ್ನೂ ಹೆಚ್ಚಾಗಲಿವೆ.



# ಕೇಂದ್ರದಂತೆ ರಾಜ್ಯವೂ ಎ.ಪಿ.ಎಂ.ಪಿ.ಸಿ ಕಾಯ್ದೆ ವಾಪಾಸ್ ಪಡೆಯಬಹುದಲ್ಲವೇ..?



ಪ್ರಧಾನ ಸಂಪಾದಕ
ತುರುವನೂರು ಮಂಜುನಾಥ

ಪುಟ ವಿನ್ಯಾಸ
ಸೂರ್ಯಕುಮಾರ್ ಜಿ.ಎನ್.

ಅನಾವರಣ

ಪತ್ರಿಕೆಗೆ ಚಂದಾದಾರರಾಗಿ ಮತ್ತಷ್ಟು ಬೆಳೆಯಲು ತಾವೂ ಬಾಗಿಯಾಗಿ ಚಂದಾದಾರರ ವಿವರ

| | |
|---|---|
| ವಾರ್ಷಿಕ | 1100 |
| ಅರ್ಧವಾರ್ಷಿಕ | 600 |
| ಎರಡು ವರ್ಷ | 2200 |
| ಆರು ವರ್ಷ | 6600 |
| ಪೋಷಕರು | 10,000 |
| ಮಹಾಪೋಷಕರು | 20,000 |


ಪ್ರಧಾನಿ ಮೋದಿ ಅವರು ಮೂರು ಕೃಷಿ ಕಾಯ್ದೆಗಳನ್ನು ಕೊನೆಗೂ ವಾಪಸ್ ಪಡೆದಿದ್ದಾರೆ ಇದು ರೈತರ ಪ್ರತಿಭಟನೆಗೆ ಸಂದ ಜಯ..ಆದರೆ ಮೋದಿ ಮತ್ತಷ್ಟು ರೈತರು ಪ್ರತಿಭಟನೆ ನಡೆಸಿದ ಆರಂಭದಲ್ಲೇ ಇಂತ ನಿರ್ಧಾರ ತಗೆದುಕೊಂಡಿದ್ದರೆ ನಿಜಕ್ಕೂ ಅವರು ಮತ್ತಷ್ಟು ಜನಪ್ರಿಯರಾಗಿಬಿಡುತ್ತಿದ್ದರು ಆದರೆ ಹಾಗೆ ಮಾಡಲಿಲ್ಲ ಬದಲಾಗಿ ರೈತರ ಪ್ರತಿಭಟನೆಗೆ ಉತ್ತರವೂ ನೀಡಲಿಲ್ಲ ಅದು ಪ್ರತಿಪಕ್ಷಗಳ ವ್ಯವಸ್ಥಿತ ಸಂಚು ಎಂದು ಜರೆದರು..ಆದರೆ ಇದ್ಯಾವುದಕ್ಕೂ ಜಗ್ಗದೆ ರೈತರು ಒಂದುವರ್ಷ ಪ್ರತಿಭಟನೆ ನಢೆಸಿದರು, ಐತಿಹಾಸಿಕ ದಾಖಲೆ ಮಾಡುವ ಮೂಲಕ ಕೇಂದ್ರ ಸರ್ಕಾರದ ಮುಜಗರಕ್ಕೆ ಕಾರಣವಾದಾಗ ಕೊನೆಗೆ ಈ ಕೃಷಿ ಕಾಯ್ದೆಗಳನ್ನು ವಾಪಾಸ್ ಪಡೆದರು.

ಹಾಗಂತ ಮೋದಿ ರೈತರ ಈ ಪ್ರತಿಭಟನೆಗೆ ಸ್ಪಂದಿಸಿದರು ಎಂದರ್ಥವಲ್ಲ ಅವರು ಕಳೆದ ತಿಂಗಳು ನಡೆದ ಉಪ ಚುನಾವಣೆಗಳಲ್ಲಿ ಜನರು ನೀಡಿದ ತೀರ್ಪಿಗೆ ತಲೆ ಬಾಗಿ ಈ ನಿರ್ಧಾರಕ್ಕೆ ಬಂದಿದ್ದಾರೆ, ಯಾಕೆಂದರೆ ಮುಂದಿನ ಅವಧಿಗೂ ಅವರು ಪ್ರಧಾನಿಯಾಗಬೇಕು ಬಿಜೆಪಿ ಅಧಿಕಾರಕ್ಕೆ ಬರಬೇಕು ಎನ್ನುವ ವಿಶ್ವಾಸವನ್ನು ಹೊಂದಿದ್ದಾರೆ ಹಾಗಾಗಿಯೇ ಈ ನಿರ್ಧಾರಕ್ಕೆ ಬಂದಿದ್ದಾರೆ. ರೈತರ ಈ ಸಣ್ಣ ಮಟ್ಟದ ಹಲವು ಪ್ರತಿಭಟನೆಗಳನ್ನೂ ಲೆಕ್ಕಿಸದೆ ನರೇಂದ್ರ ಮೋದಿ ಸರ್ಕಾರ ಮೂರು ಕೃಷಿ ಕಾಯ್ದೆಗಳನ್ನು ಸುಗ್ರೀವಾಜ್ಞೆಯ ಮೂಲಕ ಜಾರಿಗೊಳಿಸಿದ್ದು ಇಡೀ ರೈತ ಸಮುದಾಯವನ್ನು ಬಡಿದೆಬ್ಬಿಸಿತ್ತು. ಸರ್ಕಾರದ ಆಡಳಿತ ನೀತಿಗಳು ತಮ್ಮ ಮೂಲ ವೃತ್ತಿಗೇ ಸಂಚಕಾರ ತರುವುದನ್ನು ಅರಿತ ರೈತರಿಗೆ ಈ ಸಂದರ್ಭದಲ್ಲಿ ಮುಂದಾಳತ್ವ ನೀಡಿದ್ದು ಪಂಜಾಬಿನ ರೈತರು. ಪಂಜಾಬ್ ಎಂದ ಕೂಡಲೇ ಶ್ರೀಮಂತ ರೈತರ ರಾಜ್ಯ ಎಂಬ ಹುಸಿ ನಂಬಿಕೆಯಲ್ಲಿ ಇಡೀ ದೇಶವೇ ಇದ್ದ ಸಂದರ್ಭದಲ್ಲಿ, ಅಲ್ಲಿನ ಸಣ್ಣ, ಮಧ್ಯಮ ಮತ್ತು ಅತಿಸಣ್ಣ ರೈತರೂ ಸಾಲದ ಸುಳಿಯಲ್ಲಿ ಸಿಲುಕಿರುವುದನ್ನು ಎತ್ತಿ ತೋರಿಸಿದ್ದು ನವಂಬರ್ 26ರಂದು ಆರಂಭವಾದ ರೈತ ಮುಷ್ಕರ. ಸೆಪ್ಟಂಬರ್ 2020ರಲ್ಲಿ ಕೇಂದ್ರ ಸರ್ಕಾರದ ಮೂರು ಸುಗ್ರೀವಾಜ್ಞೆಗಳಿಗೆ ಸಂಸತ್ತಿನ ಅನುಮೋದನೆ ಮತ್ತು ರಾಷ್ಟ್ರಪತಿಗಳ ಅಂಕಿತ ದೊರೆತಿದ್ದು, ಕೃಷಿ ವಲಯದಲ್ಲಿ ಕಾರ್ಪೋರೇಟ್ ಪ್ರವೇಶಕ್ಕೆ ಬಾಗಿಲು ತೆರೆದಂತಾಗಿತ್ತು. ನೂತನ ಕೃಷಿ ಕಾಯ್ದೆಗಳಲ್ಲಿ ಕನಿಷ್ಠ ಬೆಂಬಲ ಬೆಲೆಯ ಪ್ರಸ್ತಾಪವೇ ಇಲ್ಲದಿದ್ದುದೂ ರೈತರ ಆಕ್ರೋಶಕ್ಕೆ ಕಾರಣವಾಗಿತ್ತು. ಈ ಬಗ್ಗೆ ಕೇಂದ್ರ ಕೃಷಿ ಸಚಿವರಿಂದ ಸಮಾಧಾನಕರ ಉತ್ತರ ಬರದೆ ಇರುವ ಕಾರಣ ರೈತರ ಪ್ರತಿಭಟನೆ ಮತ್ತಷ್ಟು ತೀವ್ರತೆ ಪಡೆದುಕೊಂಡಿತ್ತು. ಈ ಹಂತದಲ್ಲೇ ಬಂದ ಉಪ ಚುನಾವಣೆಗಳು ಮೋದಿ ಸರ್ಕಾರಕ್ಕೆ ಉತ್ತರ ನೀಡಿತು ಹೀಗಾಗಿಯೇ ಕೂಡಲೇ ಈ ಕೃಷಿ ಕಾಯ್ದೆಗಳನ್ನು ವಾಪಾಸ್ ಪಡೆದುಕೊಳ್ಳುವ ನಿರ್ಧಾರ ಕೈಗೊಂಡರು



ಕೇಂದ್ರ ಸರ್ಕಾರದಂತೆ ರಾಜ್ಯ ಸರ್ಕಾರವೂ ತನ್ನ ನಿರ್ಧಾರವನ್ನು ಪ್ರಕಟಿಸಬೇಕು ರೈತರಿಗೆ ಮಾರಕವಾಗಿರುವ ಎ.ಪಿ.ಎಂ.ಸಿ ಯ ಹೊಸ ತಿದ್ದುಪಡಿ ಕಾಯ್ದೆ ಜಾರಿಗೆ ಬಂದ ನಂತರ ರಾಜ್ಯ ಸರ್ಕಾರಕ್ಕೆ ಎ.ಪಿ.ಎಂ.ಸಿಯಿಂದ ಹೊರಗಿರುವ ವರ್ತಕರ ಮೇಲೆ ಯಾವ ನಿಯಂತ್ರಣವೂ ಇರುವುದಿಲ್ಲ. ಅವರ ವ್ಯವಹಾರದ ಮೇಲೆ ನಿಗಾ ಇಡುವಂತಿಲ್ಲ, ಶುಲ್ಕ, ಸೆಸ್, ಲೆವಿ ಸಂಗ್ರಹಿಸುವಂತಿಲ್ಲ.ಇದು ಒಂದು ರೀತಿ ಸರ್ಕಾರದ ಸಂಪೂರ್ಣ ಶರಣಾಗತಿಯಾಗಿದೆ.

ಪ್ರಸ್ತುತ ಶೇ. 6ರಷ್ಟು ರೈತರು ಎ.ಪಿ.ಎಂ.ಸಿ ಗಳಲ್ಲಿ ಬೆಳೆ ಮಾರಾಟ ಮಾಡುತ್ತಿದ್ದು ಶೇ.94 ರಷ್ಟು ರೈತರಿಗೆ ಮಾರುಕಟ್ಟೆ ಸೌಲಭ್ಯಗಳಿಲ್ಲ. ರೈತರಿಗೆ ನೆರವಾಗುವ ಉದ್ದೇಶ ಸರ್ಕಾರಕ್ಕಿದ್ದರೆ ಮಾರುಕಟ್ಟೆಗಳಿಲ್ಲದ ಕಡೆಗಳಲ್ಲಿ ಎ.ಪಿ.ಎಂ.ಸಿಯಿಂದ ಪರವಾನಿಗೆ ಪಡೆದು ಮಾರುಕಟ್ಟೆಗಳನ್ನು ಸ್ಥಾಪಿಸಲು ಸರ್ಕಾರ ಉತ್ತೇಜನ ನೀಡಬಹುದಾಗಿದೆ. ರೈತರ ಭೂಮಿಗಿದ್ದ ರಕ್ಷಣೆಯನ್ನು ಕಿತ್ತು ಹಾಕಿರುವ ಭೂ ಸುಧಾರಣಾ ತಿದ್ದುಪಡಿ ಕಾಯ್ದೆ ಭೂಗಳ್ಳರಿಗೆ ನೆರವಾಗುವ ದುರುದ್ದೇಶದ್ದು. ಕೇಂದ್ರ ಸರ್ಕಾರದಂತೆ ರಾಜ್ಯ ಸರ್ಕಾರ ಕೂಡಾ ಈ ಕಾಯ್ದೆಗಳನ್ನು ವಾಪಾಸ್ ಪಡೆದರೆ ರೈತರು ಒಂದಿಷ್ಟು ನೆಮ್ಮದಿಯ ಉಸಿರುಬಿಡಲು ಸಾಧ್ಯವಾಗುತ್ತದೆ.

ಇಂತ ಎಲ್ಲಾ ರೈತರಿಗೆ ಮಾರಕವಾದ ಕಾಯ್ದೆಗಳನ್ನು ಜಾರಿಗೆ ತಂದರೆ ರೈತರು ನೆಮ್ಮದಿಯಾಗಿ ಜೀವಿಸಲು ಸಾಧ್ಯವಾಗುತ್ತದೆ ಅಲ್ಲದೆ ತನ್ನ ಬೆಳೆಗಳಿಗೆ ಬೆಂಬಲ ಬೆಲೆಗಳನ್ನು ಘೋಷಿಸುವ ಮೂಲಕ ಅವರ ಬೆಂಬಲಕ್ಕೆ ಸರ್ಕಾರಗಳು ನಿಂತರೆ ಅವರ ಬಾಳು ಬಂಗಾರವಾಗಲಿದೆ ಸರ್ಕಾರಗಳ ನಿಜವಾದ ರೈತರ ಪರವಾಗಲಿವೆ.

ಆದರೆ ಸರ್ಕಾರಗಳು ಒಮ್ಮೊಮ್ಮೆ ಕಾರ್ಪೋರೇಟ್ ಕಂಪನಿಗಳ ಬಗ್ಗೆ ಉದ್ಧಾರ ಮಾಡಲು ಇಂತ ಕಾಯ್ದೆಗಳನ್ನು ತರಲು ಮುಂದಾಗಿಬಿಡುತ್ತವೇ ಇದು ಕೇವಲ ಬಿಜೆಪಿ ಸರ್ಕಾರದ್ದೊಂದೆ ಅಲ್ಲ ಯಾವುದೇ ಸರ್ಕಾರಗಳಿದ್ದರೂ ಕೂಡ ರೈತರ ಪರ ಮಾತನಾಡುತ್ತಲೇ ಕಾರ್ಪೋರೇಟ್ ಕಂಪನಿಗಳಿಗೆ ಮಣೆ ಹಾಕಿಬಿಡುತ್ತವೆ ಅದನ್ನು ಸರ್ಕಾರಗಳು ಬಿಡಬೇಕು ಇಲ್ಲವಾದರೆ ರೈತರು ಎಂತಾ ತ್ಯಾಗಕ್ಕೂ ಸಿದ್ದ ಎನ್ನುವುದನ್ನು ತೋರಿಸಿದ್ದಾರೆ.ಅವರ ಅಕ್ರೋಶ ಯಾವುದೇ ಸರ್ಕಾರಕ್ಕೂ ಒಳ್ಳೆಯದಲ್ಲ ಎನ್ನುವುದು ಸಾಭೀತಾಗಿದೆ ಹೀಗಾಗಿಯೇ ದೆಹಲಿಯಲ್ಲಿ ನಡೆದ ಒಂದು ವರ್ಷದ ಪ್ರತಿಭಟನೆ ಇದೆಯಲ್ಲ ಇದು ಐತಿಹಾಸಿಕವಾಗಿ ದಾಖಲೆಯಾಗಿದೆ.

1970ರ ದಶಕದ ರೈಲ್ವೆ ಮುಷ್ಕರ ಮತ್ತು ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕ ಮುಷ್ಕರದ ನಂತರ ದೇಶ ಕಂಡ ಅತ್ಯಂತ ನಿಷ್ಠುರ–ನೇರ ಮುಷ್ಕರ ದೆಹಲಿಯ ಗಡಿಗಳಲ್ಲಿ ಇತಿಹಾಸ ನಿರ್ಮಿಸಿದೆ. ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಆಳುವ ವರ್ಗಗಳು ತಮ್ಮ ಅಧಿಕಾರವನ್ನು ಎಷ್ಟೇ ದುರುಪಯೋಗಪಡಿಸಿಕೊಂಡರೂ, ಅಂತಿಮವಾಗಿ ಜನಾಭಿಪ್ರಾಯಕ್ಕೆ ಮಣಿಯಲೇಬೇಕು. ಇದು 1975ರ ತುರ್ತುಪರಿಸ್ಥಿತಿಯ ಸಂದರ್ಭದಲ್ಲೇ ಸಾಬೀತಾಗಿದೆ. ಈಗ ಮತ್ತೊಮ್ಮೆ. ಆದರೆ ತಮ್ಮ ಉದ್ದೇಶಿತ ಗುರಿ ಸಾಧನೆಗಾಗಿ ಪ್ರಭುತ್ವ ಮತ್ತು ಪ್ರಭುತ್ವದ ಮೇಲೆ ಪಾರಮ್ಯ ಸಾಧಿಸುವ ಅಧಿಕಾರ ರಾಜಕಾರಣದ ರಾಜಕೀಯ ಪಕ್ಷಗಳು ಹಿಂಬಾಗಿಲಿನಿಂದಲೂ ಪ್ರವೇಶಿಸುತ್ತವೆ ಎನ್ನುವ ಸತ್ಯವನ್ನೂ ಸ್ವತಂತ್ರ ಭಾರತ ಕಂಡಿದೆ. ತುರ್ತುಪರಿಸ್ಥಿತಿ ಹಿಂಪಡೆದು 44 ವರ್ಷದ ನಂತರ ದೇಶದ ಪರಿಸ್ಥಿತಿಯನ್ನು ನೋಡಿದರೆ ಇದು ಸ್ಪಷ್ಟವಾಗುತ್ತದೆ.

ಇಂತಹ ಹೋರಾಟಗಳು ಜನಪ್ರತಿನಿಧಿಗಳು ಹಾಗು ಜಡ್ಡು ಹಿಡಿದ ಸರ್ಕಾರಗಳಿಗೆ ಉತ್ತರದಂತಿವೆ.ಜನಪರ ಹೋರಾಟಗಳು ಕೇವಲ ಯಾವುದೋ ಹಿತಾಸಕ್ತಿಯ ಪರವಾಗಿಲ್ಲ. ಜನಾಭಿಪ್ರಾಯದ ಜನಾಂದೋಲನ ರೈತರಿಗೆ ಅನ್ಯಾಯವಾದರೆ ಎಷ್ಟು ಕಠೋರ ಎನ್ನುವುದನ್ನ ಈಗಲಾದರೂ ಆಳುವ ವರ್ಗಗಳು ಕಲಿಯಬೇಕು ಇಲ್ಲವಾದರೆ ರೈತರ ಇಂತ ಅಕ್ರೋಶಗಳು ಮುಂದೆ ಮತ್ತೆ ಸರ್ಕಾರಗಳನ್ನ ಆಪೋಷನ ತೆಗೆದುಕೊಂಡಾವು!..

# ನ್ಯಾಯಾಲಯ ಛೀಮಾರಿ ಹಾಕಿದರೂ ಕೇರಿಲ್ಲದ ಆಂಕರ್‌ಗಳು...

ಹಿಟ್ & ರನ್



ಕೆಲವೊಂದು ವಿಷಯಗಳಲ್ಲಿ ಚಾನಲ್‌ಗಳ ಆಂಕರ್‌ಗಳೇ ತೀರ್ಪು ನೀಡುವಂತ ಕಾರ್ಯಗಳು ನಡೆಯುತ್ತಿವೆ ಇದಕ್ಕೆ ನ್ಯಾಯಾಲಯ ಆಕ್ಷೇಪ ವ್ಯಕ್ತಪಡಿಸಿದೆ. ಅಲ್ಲದೆ ಆಂಕರ್‌ಗಳು ತಿಳಿವಳಿಕೆ ಇಲ್ಲದಿದ್ದರೂ ಕೂಡ ಸೂಕ್ತವಲ್ಲದ ವಿಷಯಗಳಿಗೆ ಒಂದು ರೀತಿ ನಿರ್ಧಾರ ಮತ್ತು ತೀರ್ಪುಗಳಂತೆ ಪ್ಯಾನಲ್‌ಗಳಲ್ಲಿ ಕೂತು ಚರ್ಚೆ ಮಾಡುವುದು ಸೂಕ್ತವಲ್ಲ ಎಂದು ಅಸಮಾಧಾನ ಕೂಡ ವ್ಯಕ್ತಪಡಿಸಿದೆ.

ಹೌದು ಇತ್ತೀಚೆಗೆ ದೆಹಲಿಯಲ್ಲಿ ವಾಯುಮಲಿನ್ಯವನ್ನು ನಿಯಂತ್ರಿಸಲು ಸೂಕ್ತ ಕ್ರಮಕೈಗೊಳ್ಳದೆ ಸರ್ಕಾರಗಳು ದೇಹಲಿ ಸರ್ಕಾರ ಸೇರಿದಂತೆ ರಾಜ್ಯಸರ್ಕಾರಗಳು ವಿಫಲವಾಇವೆ ಎಂದು ತರಾಟೆ ತಗೆದುಕೊಂಡಿತ್ತು. ಇದರ ಕುರಿತು ಆಕ್ಷೆಪ ವ್ಯಕ್ತಪಡಿಸುತ್ತಿರುವಾಗ ಚಾನಲ್‌ಗಳಲ್ಲೂ ಕೂಡ ಈ ಕುರಿತು ಚರ್ಚೆ ಮಾಡುವ ವೇಳೆ ತಾವೇ ತಜ್ಞರಂತೆ ಪರಿಹಾರ ತೀರ್ಪುಗಳನ್ನು ನೀಡುತ್ತಿದ್ದೀರಿ ಅದು ಸರಿ ಅಲ್ಲ ಸಾಮಾನ್ಯ ಜನಕ್ಕೆ ತಪ್ಪು ಸಂದೇಶ ರವಾನೆಯಾಗುತ್ತದೆ ಗೊತ್ತಿಲ್ಲದ ವಿಷಯ ಕುರಿತು ತಜ್ಞರನ್ನು ಕರೆಸಿ ಅವೈಜ್ಞಾನಿಕ ಚರ್ಚೆಗಳು ವಿಷಯ ಕುರಿತು ಬೇರೆಲ್ಲೋ ಹೋಗಿ ಇನ್ನೇನೋ ಅದಕ್ಕೆ ಒಂದು ರೀತಿ ತೀರ್ಪು ನೀಡುವ ಕುರಿತು ಮಾಡುವ ಪರಿ ಸರಿ ಅಲ್ಲ ಎಂದು ಆಕ್ಷೇಪಿಸಿದೆ. ನಿಜ..! ಹಲವಾರು ಚಾನಲ್‌ಗಳು ಒಂದು ವಿಷಯದಲ್ಲಿ ತಾವೇ ನಿರ್ಧಾರಗಳನ್ನು ತಗೆದುಕೊಂಡಂತೆ..ತಾವೇ ತೀರ್ಪುತಗೆದುಕೊಂಡು ಬಿಡುತ್ತಾರೆ.

ಇದು ನಿರಂತರವಾಗಿ ಚಾನಲ್‌ಗಳಲ್ಲಿ ನಡೆದುಬರುತ್ತಿರುವ ಒಂದು ರೀತಿಯ ಅಸಹ್ಯಕರ ಬೆಳವಣಿಗೆ ಕೆಲವರಂತೂ ಪ್ಯಾನಲ್‌ನಲ್ಲಿ ಕೂತರೆ ಅರಾಚಾಡುವ ಸಂಸ್ಕೃತಿಯನ್ನು ಕಲಿತುಕೊಂಡು ಬಿಟ್ಟಿದ್ದಾರೆ ಅಂದರೆ ಅರಚಿದರೆ ಜೋರಾಗಿ ಮಾತನಾಡುವ ಮೂಲಕ ಎದುರಿಗಿರುವ ವ್ಯಕ್ತಿಯ ಬಾಯಿ ಮುಚ್ಚಿಸುವ ಸತ್ಯವನ್ನು ಮರೆಮಾಚುವ ಕೆಲಸ ಇದಾಗುತ್ತಿದೆ.

ಕೆಲವೊಮ್ಮೆ ನೋಡಿ ಯಾವ ರೀತಿ ಈ ಆಂಕರ್‌ಗಳು ತಮ್ಮ ವರ್ತನೆ ತೋರುತ್ತಾರೆ ಎಂದರೆ ಪ್ಯಾನಲ್‌ನಲ್ಲಿ ಕೂತಾಗ ವಿಷಯಕ್ಕೆ ಸಂಬಂಧಿಸಿದಂತೆ ಚರ್ಚೆ ನಡೆಸುವಾಗ ಬಂದಿರುವ ತಜ್ಞರನ್ನ ಕೇಳುವ ಪ್ರಶ್ನೆ ಇದೆಯಲ್ಲ ಅದು ನಿಜಕ್ಕೂ ಅಪಾಯಕಾರಿ ಅವರನ್ನೇ ಒಂದು ರೀತಿ ಮಾತು ಬರದವರಂತೆ ಮಾಡಿ ಬಿಡುತ್ತಾರೆ..ಅಂದರೆ ಇವರ ಮಾತುಗಳೇ ಹೆಚ್ಚಾಗಿರುತ್ತದೆ ಅವರು ಹೇಳುವ ಸತ್ಯ ಇವರಿಗೆ ಬೇಕಾಗಿರುವುದಿಲ್ಲ ಇವರಿಗೆ ಬೇಕಾದ ಉತ್ತರ ಮಾತ್ರ ಬೇಕಾಗಿರುತ್ತದೆ ಹಾಗಾಗಿ ಬಂದಿರುವ ವಿಷಯ ತಜ್ಞರಲ್ಲಿ ಒಂದು ರೀತಿಯ ಭಯ ಉಟ್ಟಿಸಿಬಿಡುತ್ತಾರೆ ತಮ್ಮ ಮಾತಿನ ಗರ್ಜನೆಯಲ್ಲಿ ಇದು ಇಂದು ಎಲ್ಲಾ ಚಾನಲ್‌ಗಳಲ್ಲೂ ನಡೆಯುತ್ತಿರುವ ಸದ್ಯ.. ಸತ್ಯದ ಬದಲಾಗಿ ಚಾನಲ್‌ಗೆ ಬೇಕಾದ ಅಸತ್ಯದ ಉತ್ತರ ತಜ್ಞರಲ್ಲಿ ಮಾತನಾಡಿಸುವ ಪ್ರಯತ್ನ ಮತ್ತು ಪ್ರಶ್ನೆಗಳನ್ನು ಕೇಳಿ ಅದೇ ಉತ್ತರವನ್ನು ಪಡೆಯುವ ಕೆಲಸ ಮಾಡುತ್ತಿದ್ದಾರೆ ಎಂದರೆ ಎಲ್ಲಿಗೆ ಹೋಗಿ ನಿಂತಿವೆ ಚಾನೆಲ್‌ಗಳು ಕೇವಲ ಟಿಆರ್‌ಪಿಗಾಗಿ ಏನಾದರೂ ಸರಿಯೇ ತಮ್ಮ ಉತ್ತರವೇ ಸರಿ ಎನ್ನುವ ರೀತಿಯಲ್ಲಿ ಅರೆಚಾಟದಲ್ಲಿ ಉತ್ತರವನ್ನು ಪಡೆದುಕೊಂಡು ಬಿಡುತ್ತವೆ ಇದು ಇಂದಿನ ದುರಂತ.

# ರೈತನ ಬೆತ್ತಲೆ ಮಾಡಿ ಪುಟಗೋಸಿ ಎಸೆವ ಪ್ರಧಾನಿ

ದೆಹಲಿ ದೃಷ್ಟಿ
ಡಿ.ಉಮಾಪತಿ
ಹಿರಿಯ ಪತ್ರಕರ್ತರು



ವಿಶ್ವದ ಗಮನ ಸೆಳೆದ ರೈತ ಆಂದೋಲನಕ್ಕೆ ವರ್ಷ ತುಂಬುವ ಹೊತ್ತಿನಲ್ಲಿ ಮೂರು ಕೃಷಿ ಕಾಯಿದೆಗಳನ್ನು ರದ್ದು ಮಾಡುವ ವಚನ ನೀಡಿದ್ದಾರೆ ಪ್ರಧಾನಿ.

'ಛಪ್ಪನ್ನೈವತ್ತಾರು' ಇಂಚಿನ ಎದೆಗಾರಿಕೆಯ ಪ್ರಧಾನಿ ತಾವು ಆಡಿರುವ ಈ ನುಡಿಯನ್ನು ನಿರ್ವಂಚನೆಯಿಂದ ನಡೆಸಿಕೊಡಲಿ. ಮುಂಬರುವ ದಿನಗಳಲ್ಲಿ ಇವೇ ಕಾಯಿದೆಯ ಅನಿಷ್ಟಗಳು ಛದ್ಮ ವೇಷ ಹೊದ್ದು ಪ್ರತ್ಯಕ್ಷವಾಗದಿರಲಿ.

ಒಂದು ಸಂದೇಹವನ್ನು ಮೋದಿಯವರು ಮತ್ತು ಅವರ ಪಕ್ಷ ನಿವಾರಿಸಬೇಕಿದೆ. ತಮ್ಮ ಮಾತುಗಳ ಕನ್ನಡಿಯಲ್ಲಿ ತಮ್ಮದೇ ಮುಖ ನೋಡಿಕೊಳ್ಳಬೇಕಿದೆ.

ದೇಶದ ಹಿತವೇ ಪರಮೋಚ್ಚ ಎಂಬುದು ಮೋದಿ ಮತ್ತು ಅವರ ಬೆಂಬಲಿಗರು ಹಗಲಿರುಳು ಜಪಿಸುವ ಮಂತ್ರ. ಅವರು ಬಣ್ಣಿಸಿರುವಂತೆ ಕೃಷಿ ಕಾಯಿದೆಗಳು ರಾಷ್ಟ್ರೀಯ ಹಿತವನ್ನು ಕಾಪಾಡುತ್ತವೆ. ಅವುಗಳ ಜಾರಿಯಲ್ಲಿ ದೇಶದ ಒಳಿತೇ ಅಡಗಿದೆ. ಈ ಮಾತು ನಿಜವೇ ಆಗಿದ್ದರೆ, ಈ ಕಾಯಿದೆಗಳನ್ನು ರದ್ದು ಮಾಡುವ ಮೂಲಕ ರಾಷ್ಟ್ರೀಯ ಹಿತವನ್ನು ಪ್ರಧಾನಿಯವರು ಉತ್ತರಪ್ರದೇಶ-ಪಂಜಾಬಿನ ಚುನಾವಣೆ ಗೆಲುವಿಗಾಗಿ ಬಲಿಕೊಟ್ಟಂತೆ ಆಗಲಿಲ್ಲವೇ?

ಮೂರು ಕೃಷಿ ಕಾಯಿದೆಗಳನ್ನು ಪ್ರಧಾನಿಯವರು ಈಗಲೂ ಸಮರ್ಥಿಸಿಕೊಳ್ಳುತ್ತಿರುವುದು ಆತಂಕದ ಸಂಗತಿ. ಸಾವಿರಾರು ವರ್ಷಗಳಿಂದ ವಿಕಾಸಗೊಳ್ಳುತ್ತ ಬಂದಿರುವ ಒಕ್ಕಲುತನಕ್ಕೆ ಯಾವುದು ತಾರಕ ಮತ್ತು ಯಾವುದು ಮಾರಕ ಎಂಬುದು ಒಕ್ಕಲು ಮಕ್ಕಳಿಗಲ್ಲದೆ ಮತ್ತಾರಿಗೆ ತಿಳಿದಿದ್ದೀತು! ಆದರೆ ಆಳುವವರು ಅಹಮಿಕೆಗೆ ಪಾರವೇ ಇಲ್ಲ. ಈ ಅಂಶ ಒಕ್ಕಲು ಮಕ್ಕಳಿಗಿಂತ ತಮಗೇ ಗೊತ್ತು ಎಂದು ಎದೆಯುಬ್ಬಿಸುತ್ತಾರೆ. ಕಾಯಿದೆ ಕಾನೂನುಗಳ ಮಾಡಿ ಹೇರುತ್ತಾರೆ.



ಅವುಗಳನ್ನು ರೈತರಿಗೆ ತಾವು ನೀಡಿದ ಉಡುಗೊರೆ ಎನ್ನುತ್ತಾರೆ. ನಮಗೆ ಬೇಡದ ಉಡುಗೊರೆಯನ್ನು ಯಾಕೆ ಹೇರಿ ಉಸಿರು ಕಟ್ಟಿಸುತ್ತೀರಿ ಎಂಬ ರೈತರ ಅಳಲನ್ನು ಅವರು ಅರ್ಥ ಮಾಡಿಕೊಳ್ಳುವುದೇ ಇಲ್ಲ. ಅಥವಾ ಅರ್ಥವೇ ಆಗದಂತೆ ನಟಿಸುತ್ತಾರೆ.

ಈ ಕಾರಣಕ್ಕಾಗಿಯೇ ರೈತ ಸಮುದಾಯ ಮೋದಿಯವರ ಮಾತುಗಳನ್ನು ಈಗಲೂ ಸಂಪೂರ್ಣ ನಂಬಿಲ್ಲ. ಐದು ರಾಜ್ಯಗಳ ಚುನಾವಣೆಗಳು ಕಳೆದ ನಂತರ ಮೂರು ಕಾಯಿದೆಗಳ ಇರಾದೆಗಳು ಮತ್ತೊಂದು ರೂಪದಲ್ಲಿ ಪ್ರಕಟಗೊಳ್ಳಬಹುದು ಎಂಬ ಗುಮಾನಿ ಅವರದು.

ರೈತರೂ ಸೇರಿದಂತೆ ಮೂರು ಕೃಷಿ ಕಾಯಿದೆಗಳನ್ನು ವಿರೋಧಿಸುವ ಎಲ್ಲರೆಲ್ಲರಿಗೆ ಸುಧಾರಣಾವಿರೋಧಿಗಳು ಎಂಬ ಹಣೆಪಟ್ಟಿ ಹಚ್ಚಲಾಗಿದೆ. ತೋಳನ ಬಾಯಿಗೆ ಬೀಳಲು ಒಲ್ಲದ ಅಸಹಾಯಕ ಕುರಿಮಂದೆಗೆ ತೋಳವಿರೋಧಿಗಳು ಎಂಬ ಪಟ್ಟ ಕಟ್ಟಿದರಷ್ಟೇ ವಿಡಂಬನೆಯ ಸಂಗತಿಯಿದು.

ದೇಶದ ಕೃಷಿವಲಯದಲ್ಲಿ ಸುಧಾರಣೆಗಳಿಗಾಗಿ ಹಸಿದು ಬಾಯಾರಿರುವುದು ಹೌದು. ಆದರೆ ಈಗಾಗಲೆ ಕಂಗೆಟ್ಟಿರುವ ರೈತನನ್ನು ವಧಾ ವೇದಿಕೆಯ ಹತ್ತಿಸುವ ಸುಧಾರಣೆಗಳನ್ನು ಆತನ ಮೇಲೆ ಹೇರುವ ಕ್ರೌರ್ಯ ಸಲ್ಲದು.

ಬಹುಮುಖ್ಯ ಹಿಂದೀ ಹೃದಯಸೀಮೆ ಎನಿಸಿದ ನಾಲ್ಕು ರಾಜ್ಯಗಳಾಗುವಷ್ಟು ಭೂಭಾಗವನ್ನು ತನ್ನಲ್ಲಿ ಹುದುಗಿಸಿಕೊಂಡಿರುವ ಉತ್ತರಪ್ರದೇಶದ ಮೇಲೆ ರಾಜಕೀಯ ನಿಯಂತ್ರಣ ಕೈ ತಪ್ಪೀತು ಎಂಬ ಆತಂಕವೇ ಈ ತಾತ್ಪೂರ್ತಿಕ ಚತುರ ಪಲಾಯನದ ಹಿಂದಿನ ಮರ್ಮ.


2024ರ ಲೋಕಸಭಾ ಚುನಾವಣೆಯ ಫೈನಲ್ಸ್ ಗೆ ಉತ್ತರಪ್ರದೇಶದ ಹಾಲಿ ವಿಧಾನಸಭಾ ಚುನಾವಣೆಯೇ ಸೆಮಿಫೈನಲ್ಸ್.ಲೋಕಸಭೆಯ ಎಂಭತ್ತು ಸ್ಥಾನಗಳಿಗೆ ಪ್ರತಿನಿಧಿಗಳನ್ನು ಕಳಿಸುವ ದೈತ್ಯ ರಾಜ್ಯವಿದು.

ಉತ್ತರಪ್ರದೇಶ, ಉತ್ತರಾಖಂಡ, ಪಂಜಾಬ್, ಗೋವಾ ಹಾಗೂ ಮಣಿಪುರದ ವಿಧಾನಸಭೆಗಳು ಸಮೀಪಿಸಿವೆ. ಇವುಗಳಲ್ಲಿನ ಒಟ್ಟು ಲೋಕಸಭಾ ಸೀಟುಗಳ ಸಂಖ್ಯೆ 104. ಗೋವಾ ಮಣಿಪುರವನ್ನು ಹೊರತುಪಡಿಸಿದರೆ ಈ ಸಂಖ್ಯೆ 98.

ಉತ್ತರಪ್ರದೇಶ ಉತ್ತರಾಖಂಡ ಪಂಜಾಬಿನ ಫಲಿತಾಂಶಗಳು 2024ರಲ್ಲಿ ನಡೆಯಲಿರುವ ಲೋಕಸಭಾ ಚುನಾವಣೆಗಳಲ್ಲಿ ಬಿಜೆಪಿಯ ಹಣೆಬರೆಹಕ್ಕೆ ನಿರ್ಣಾಯಕ ಎನಿಸಲಿವೆ. 2024ರಲ್ಲಿ ಮೋದಿಯವರು ಪುನಃ ಪ್ರಧಾನಿ ಆಗಬೇಕಿದ್ದರೆ ಇದೀಗ ಉತ್ತರಪ್ರದೇಶದ ವಿಧಾನಸಭಾ ಚುನಾವಣೆಗಳನ್ನು ಯೋಗಿ ಆದಿತ್ಯನಾಥರು ಮತ್ತೊಮ್ಮೆ ಗೆಲ್ಲಲೇಬೇಕಿದೆ.

ರೈತ ಆಂದೋಲನ ಪಶ್ಚಿಮ ಮತ್ತು ಪೂರ್ವ ಉತ್ತರಪ್ರದೇಶದಲ್ಲಿ 2013ರ ಕೋಮು ಧೃವೀಕರಣವನ್ನು ಕರಗಿಸಿರುವ ಸೂಚನೆಗಳಿವೆ. ದೆಹಲಿ ಗಡಿಗಳಲ್ಲಿ ಅದುಮಲಾಗುತ್ತಿರುವ ರೈತರ ಆಂದೋಲನ ಒಳನಾಡುಗಳಿಗೆ ಪಸರಿಸಿ ಪುಟಿದೇಳತೊಡಗಿದೆ. ಒಂದರ ನಂತರ ಮತ್ತೊಂದರಂತೆ ನಡೆಯತೊಡಗಿರುವ ಕಿಸಾನ್ ಮಹಾ ಪಂಚಾಯತ್ ಗಳಿಗೆ ಭಾರೀ ಸಂಖ್ಯೆಯ ರೈತರು ಹರಿದು ಸೇರುತ್ತಿದ್ದಾರೆ. ಭಗತ್ ಸಿಂಗ್ ಕಿ ಪಗಡೀ ಸಂಭಾಲ್ ಜತ್ಥಾ ಹಾಡು ಮೊಳಗತೊಡಗಿದೆ... ವೇದಿಕೆಗಳ ಮೇಲೆ ಮತ್ತು ಸಭೆಗಳಲ್ಲಿ ಜಾಟ್-ಮುಸ್ಲಿಮ್ ಏಕತೆ ಮತ್ತೆ ಕಾಣತೊಡಗಿದೆ. ಮುಸಲ್ಮಾನ ರೈತರು ರೈತ ಸಮಾವೇಶಗಳಲ್ಲಿ ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸುತ್ತಿದ್ದಾರೆ. ಮೋದಿಯವರತ್ತ ತಿರುಗಿದ್ದ ಯುವಜನರಲ್ಲಿ ಭ್ರಮನಿರಸನ ಮತ್ತು ಸಿಟ್ಟು ಹುಟ್ಟಿದೆ. 2013ರಲ್ಲಿ ಆಗಿದ್ದು ತಪ್ಪೆಂಬ ಪಶ್ಚಾತ್ತಾಪ ಕಪ್ರಕಟವಾಗತೊಡಗಿದೆ.

ಈ ಬೆಳವಣಿಗೆಗಳು ಆಳುವ ಪಕ್ಷವನ್ನು ಚುನಾವಣೆಯ ಅನಿಶ್ಚಯತೆಯ ಆತಂಕಕ್ಕೆ ನೂಕಿವೆ. ಹೀಗಾಗಿ ಸದ್ಯಕ್ಕೆ ಹಿಂದೆ ಸರಿಯುವುದು ಸರಿ ಎಂಬ ತೀರ್ಮಾನಕ್ಕೆ ಬಂದಿದೆ ಮೋ-ಶಾ ಜೋಡಿ.



ರೈತರ ವಿಶ್ವಾಸವನ್ನು ಪ್ರಧಾನಿಯವರು ಇಡಿಯಾಗಿ ಕಳೆದುಕೊಂಡಿದ್ದಾರೆ. ಅದನ್ನು ಪುನಃ ಗಳಿಸಿಕೊಳ್ಳಲು ಪ್ರಯತ್ನಿಸಲಿ. ತಮ್ಮ ಒಳಿತು ಕೆಡುಕುಗಳು ಯಾವುವು ಎಂಬುದನ್ನು ಸಂಸತ್ತಿನ ಸ್ಥಾಯೀ ಸಮಿತಿಗಳ ಮುಂದೆ ಹೇಳಿಕೊಳ್ಳುವ ಅವಕಾಶವನ್ನಾದರೂ ರೈತರಿಗೆ ಅವರು ಕಲ್ಪಿಸಲಿ. ಇಂತಹ ಬಹುಮುಖ್ಯ ಶಾಸನಗಳನ್ನು ಸಂಸತ್ತಿನ ಚರ್ಚೆಯ ಜನತಾಂತ್ರಿಕ ನಿಕಷಕ್ಕೆ ಇನ್ನಾದರೂ ಗುರಿಪಡಿಸಲಿ. 2022ರ ಆಗಸ್ಟ್ ವೇಳೆಗೆ ರೈತರ ಆದಾಯವನ್ನು ದುಪ್ಪಟ್ಟುಗೊಳಿಸುವ ವಚನವನ್ನು ಅದರ ನಿಜಾರ್ಥದಲ್ಲಿ ಈಡೇರಿಸಲಿ.

ಮೂರು ಕೃಷಿ ಕಾಯಿದೆಗಳನ್ನು ಕೈಬಿಟ್ಟರೆ ಸಾಲದು, ಕನಿಷ್ಠ ಬೆಂಬಲ ಬೆಲೆಯ ವ್ಯವಸ್ಥೆಯನ್ನು ಎಲ್ಲ ಬೆಳೆಗಳಿಗೂ ವಿಸ್ತರಿಸಬೇಕು ಹಾಗೂ ಅದಕ್ಕೆ ಕಾನೂನಿನ ಬಲ ನೀಡಬೇಕು ಎಂಬುದು ರೈತರ ಆಗ್ರಹ. ಈ ಬೇಡಿಕೆಯನ್ನು ಸರ್ಕಾರ ಸುಲಭಕ್ಕೆ ಈಡೇರಿಸುವ ಸೂಚನೆಗಳಿಲ್ಲ. ಹೀಗಾಗಿ ಚಳವಳಿಯೂ ಸದ್ಯಕ್ಕೆ ನಿಲ್ಲದು.

ಅತಿ ಹೆಚ್ಚಿನ ನಿರುದ್ಯೋಗ, ಕುಸಿಯುತ್ತಲೇ ಸಾಗಿರುವ ಜಿ.ಡಿ.ಪಿ ಮತ್ತು ಜನಜೀವನ ಮಟ್ಟದ ಹಿನ್ನೆಲೆಯಲ್ಲಿ ಕೃಷಿವಲಯದ ಸಂಕಟವನ್ನು ಇರಿಸಿ ನೋಡಿದರೆ ಪರಿಸ್ಥಿತಿಯ ಭೀಕರತೆ ಅರ್ಥವಾದೀತು.

ಭಾರತದ ಕೃಷಿ ಸಂಕಟವು ಹಾಲಿ ಮೂರು ಕಾಯಿದೆಗಳ ಜಾರಿ ಅಥವಾ ರದ್ದಿಗಿಂತ ಬಹು ಆಳದ್ದು ಮತ್ತು ಅಗಲದ್ದು. ರೈತನನ್ನು ಬೆತ್ತಲೆಗೊಳಿಸಿ ಕೌಪೀನವನ್ನು ಎಸೆದಾಕ್ಷಣ ಆತನ ಕಷ್ಟ ಕಣ್ಣೀರುಗಳು ಕೊನೆಯಾಗುವುದಿಲ್ಲ. ಸಮಸ್ಯೆ ಮೂಲವನ್ನು ಗುರುತಿಸುವ ಪ್ರಾಮಾಣಿಕತೆ ಪ್ರಕಟವಾಗಬೇಕಿದೆ.

ನೀರಾವರಿ ಸೌಲಭ್ಯ, ಸಕಾಲಕ್ಕೆ ಸುಲಭ ಸಾಲ ಸೌಲಭ್ಯ, ಸಕಾಲಕ್ಕೆ ಗುಣಮಟ್ಟದ ವಿದ್ಯುಚ್ಛಕ್ತಿ ಪೂರೈಕೆ, ಹೇರಳ ಉಗ್ರಾಣ- ಶೀತಾಗಾರಗಳ ಸೌಲಭ್ಯ, ಕಟಾವಿನ ನಂತರದ ಕೃಷಿ ವಿಸ್ತರಣಾ ಸೇವೆಗಳು ಉಚಿತವಾಗಿ ಇಲ್ಲವೇ ನ್ಯಾಯಯುತ ದರಗಳಲ್ಲಿ ಕೊಡಮಾಡಬೇಕಿದೆ. ಇಳೆಯ ಅಸ್ತಿತ್ವವನ್ನೇ ಅಲುಗಿಸುತ್ತಿರುವ ಹವಾಮಾನ ವೈಪರೀತ್ಯದ ಸವಾಲನ್ನು ಎದುರಿಸಲು ಸಮರ್ಥ ಬದಲಾವಣೆಗಳನ್ನು ಭಾರತೀಯ ಕೃಷಿ ಪದ್ಧತಿ ಅಳವಡಿಸಿಕೊಳ್ಳಲೇಬೇಕಿದೆ. ಕೃಷಿಯನ್ನು ಹೆಚ್ಚು ಪರಿಸರಸ್ನೇಹಿ ಆಗಿಸಬೇಕಿದೆ.

ಕನಿಷ್ಠ ಬೆಂಬಲ ಬೆಲೆಯನ್ನು ಘೋಷಿಸಿದರಷ್ಟೇ ಸಾಲದು. ದರಗಳು ಕುಸಿದಾಗ ಮಾರುಕಟ್ಟೆಯನ್ನು ಪ್ರವೇಶಿಸಿ ಕನಿಷ್ಠ ಬೆಂಬಲ ಬೆಲೆ ತೆತ್ತು ಕೃಷಿ ಉತ್ಪನ್ನಗಳ ಖರೀದಿಸಬೇಕು. ಪಂಜಾಬ್ ಮತ್ತು ತಕ್ಕಮಟ್ಟಿಗೆ ಹರಿಯಾಣ ವಿನಾ ಕನಿಷ್ಠ ಬೆಂಬಲ ಬೆಲೆ ನೀಡಿಕೆ ಇತರೆ ರಾಜ್ಯಗಳಲ್ಲಿ ಜಾರಿಯಾಗುತ್ತಿಲ್ಲ. ಖರೀದಿ ಕೇಂದ್ರಗಳನ್ನು ತಡವಾಗಿ ತೆರೆದು, ತ್ವರಿತವಾಗಿ ಮುಚ್ಚಿಬಿಡುವ, ಸಾಕಷ್ಟು ಖರೀದಿ ಕೇಂದ್ರಗಳನ್ನು ತೆರೆಯದೆ ಇರುವ ಮೋಸ ನಡೆಯುತ್ತಲೇ ಬಂದಿದೆ. ಸರ್ಕಾರಗಳೇ ನಡೆಸುವ ಈ ವಂಚನೆ ಇನ್ನಾದರೂ ನಿಲ್ಲಬೇಕು. ತುಂಬಿ ತುಳುಕುತ್ತಿರುವ ಸರ್ಕಾರಿ ಉಗ್ರಾಣಗಳಲ್ಲಿ ಕೊಳೆಯುವ ದವಸ ಧಾನ್ಯಗಳನ್ನು ನಡುವೆಯೇ ಸೋರಿ ಹೋಗದಂತೆ ಬಡಜನರಿಗೆ ಮುಟ್ಟಿಸಬೇಕು.

ಕೈಗಾರಿಕೆ ಉತ್ಪನ್ನಗಳು ಮತ್ತು ಇತರೆ ಗ್ರಾಹಕ ಸರಕುಗಳಿಗೆ ತೋರುವ ಒಂದು ಅಂಶದಷ್ಟು ನೀತಿ ನ್ಯಾಯ ನಿಯತ್ತನ್ನೂ ಕೃಷಿ ಉತ್ಪನ್ನಗಳಿಗೆ ತೋರದಷ್ಟು ಕ್ರೂರವಾಗಿ ಹೋಗಿದೆ ಮಾರುಕಟ್ಟೆ. ಕೃಷಿಯನ್ನು ಕಾಡುತ್ತಿರುವ ಹಲವು ವ್ಯಾಧಿಗಳ ಪೈಕಿ ಮಾರುಕಟ್ಟೆ ವ್ಯಾಧಿಯೇ ಹೆಚ್ಚು ಮಾರಕ.

ತಲೆಮಾರಿನಿಂದ ತಲೆಮಾರಿಗೆ ಕೃಷಿ ಹಿಡುವಳಿಗಳ ಗಾತ್ರಕ್ಕೆ ಕತ್ತರಿ ಬಿದ್ದು ಅವು ಛಿದ್ರವಾಗುತ್ತಿವೆ. ಒಂದೆಡೆ ಹಿಡುವಳಿಗಳು ಛಿದ್ರಗೊಳ್ಳುತ್ತಿದ್ದು, ಇನ್ನೊಂದೆಡೆ ಉಂಡು ಉಟ್ಟು ಜೀವಿಸಲು ಇಂತಹ ಹಿಡುವಳಿಗಳನ್ನು ಅವಲಂಬಿಸುತ್ತಿರುವವರ ಸಂಖ್ಯೆ ಗಾಬರಿಯಾಗುವ ಪ್ರಮಾಣದಲ್ಲಿ ಹೆಚ್ಚುತ್ತಿದೆ. ಈ ಬೆಳವಣಿಗೆ ಕೃಷಿ ಸಂಕಟದ ಬೆಂಕಿಗೆ ಇನ್ನಷ್ಟು ಎಣ್ಣೆ ಸುರಿವುದೇ ವಿನಾ ತಣ್ಣೀರು ಎರೆಯುವುದಿಲ್ಲ. ಈ ಸಂದಣಿ ಕಿಕ್ಕಿರಿತಗಳಿಂದ ಬಿಡುಗಡೆಯಾಗುವ ವ್ಯವಸಾಯ ಹೆಚ್ಚು ಸಹನೀಯ ಎನಿಸಬಹುದು. ಹೀಗಾಗಿ ಕೈಗಾರಿಕೆ ಮತ್ತು ಸೇವಾಕ್ಷೇತ್ರಗಳು ಸತ್ವಯುತವಾಗಿ ಎದ್ದುನಿಂತರೆ ಕೃಷಿವಲಯದ ಹೆಚ್ಚುವರಿ ಮಾನವಸಂಪನ್ಮೂಲವನ್ನು ಈ ಕ್ಷೇತ್ರಗಳು ಹೀರಿಕೊಳ್ಳಬಲ್ಲವು ಎಂಬುದು ಆರ್ಥಿಕ ತಜ್ಞರು ನೀಡುವ ಪರಿಹಾರ.

ಒಕ್ಕಲು ಮಕ್ಕಳ ಬದುಕುಗಳು ವ್ಯಥೆಯ ಕತ್ತಲಲ್ಲಿ ಮುಳುಗಿವೆ. ಈ ಕಾನೂನುಗಳು ರದ್ದಾದ ನಂತರವೂ ಕೊನೆಗೊಳ್ಳದಷ್ಟು ಅಗಾಧ ಕೃಷಿ ಬಿಕ್ಕಟ್ಟು. ಕಳೆದ ಎರಡು ದಶಕಗಳಲ್ಲಿ ದೇಶದ ಹೊಲಗದ್ದೆಗಳು ತೋಟ ತುಡಿಕೆಗಳ ಮಣ್ಣಿನಲ್ಲಿ ಲಕ್ಷಾಂತರ ರೈತರ ಆತ್ಮಹತ್ಯೆಯ ರಕ್ತ ಬೆರೆತಿದೆ. ಈ ಮಣ್ಣಿಗೆ ಮತ್ತಷ್ಟು ಇನ್ನಷ್ಟು ರೈತರ ರಕ್ತವನ್ನು ಬೆರೆಯಬಾರದು. ಕಲ್ಲು ಕರಗುತ್ತದೆ. ಐವತ್ತಾರೂ ಅಂಗುಲದ ಎದೆಯೂ ಕರಗುತ್ತದೆ ಕನಿಷ್ಠ ಪಕ್ಷ ಚುನಾವಣೆಯ ಭೀತಿಯಿಂದಲಾದರೂ.







# ಅಕಾಲಿಕ ಮಳೆಗೆ ಕೊಚ್ಚಿಹೋದ ಬೆಳೆ
# ರೈತರ ಗೋಳು ಕೇಳುವವರ್ಯಾರು..?

●ತುರುವನೂರು ಮಂಜುನಾಥ

ಮಳೆಯ ಕಾಣದ ಬಯಲುಸೀಮೆ ಪ್ರದೇಶಗಳು ಅದೇಗೋ ಈ ಬಾರಿ ಮಳೆಯ ಅವಕೃಪೆಯಿಂದ ಒಂದಿಷ್ಟು ಬೆಳೆ ಬೆಳೆದು ಬರಡುಭೂಮಿಯೆಲ್ಲ ಹಸಿರಾಗಿ ಕಂಗೊಳಿಸುತ್ತಿತ್ತು..ಈ ತಂಪಾದ ಹಸಿರನ್ನು ಕಂಡು ರೈತ ಮುಗಿಲಿಗೆ ನಮಸ್ಕರಿಸಿ ಕೊಟ್ಟೆಯ ದೇವ ಬೆಳೆ ಎನ್ನುತ್ತಿರುವಾಗಲೇ ಪಕೃತಿವಿಕೋಪದ ಕಣ್ಣು ಬಿದ್ದು ಅಕಾಲಿಕ ಮಳೆ ಬಿದ್ದು ಬೆಳೆದ ಬೆಳೆಯಲ್ಲಾ ನಾಶವಾಗಿದೆ..ಹಸಿರ ಕಂಡು ಸಂತಸದಿಂದ ಇದ್ದ ರೈತ ಈಗ ಬೆಳೆಗೆ ಹಾಕಿದ ಹಣವನ್ನು ಕಳೆದುಕೊಂಡು ಗೋಳಾಡುತ್ತಿದ್ದಾನೆ ಆದರೆ ಆತನ ಆರ್ತನಾದವನ್ನು ಕೇಳುವರ್ಯಾರು..? ಇರುವ ದೊರೆಯೊಬ್ಬ ಬೆಂಗಳೂರಿನಂತ ನಗರ ಪ್ರದೇಶಗಳಲ್ಲಿಸುತ್ತು ಹೊಡೆಯುತ್ತಿದ್ದಾರೆ ಬೆಳೆ ನಾಶದ ವರದಿ ಬರಲಿ ಬಂದ ತಕ್ಷಣ ಪರಿಹಾರ ನೀಡುತ್ತೇವೆ ಎನ್ನುತ್ತಿದ್ದಾರೆ..ಅದು ಯಾವಾಗ ಬರಬೇಕು ರೈತರಿಗೆ ಯಾವಾಗ ಸಿಗಬೇಕು ..ಸಿಕ್ಕರೂ ಅದು ನ್ಯಾಯಯುತವಾಗಿ ಸಿಗಲಿದೆಯೇ ಎನ್ನುವ ನೂರಾರು ಪ್ರಶ್ನೆಗಳು ಉದ್ಭವಿಸಿವೆ..

ವಾಯುಭಾರ ಕುಸಿತ ಮತ್ತು ಹವಾಮಾನ ವೈಪರೀತ್ಯದಿಂದಾಗಿ ವಾತಾವರಣದಲ್ಲಿ ಏರುಪೇರುಗಳಾಗುತ್ತಿವೆ. ಇದರಿಂದ, ಮಳೆ ಸುರಿಯುವ ಸಮಯದಲ್ಲೂ ವ್ಯತ್ಯಾಸಗಳಾಗುತ್ತಿವೆ. ಮಳೆಗಾಲದ ಅವಧಿ ಮುಂದಕ್ಕೆ ಹೋಗುತ್ತಿದೆ. ಜುಲೈ ಮತ್ತು ಆಗಸ್ಟ್ ತಿಂಗಳಲ್ಲಿ ಸುರಿಯಬೇಕಾದಷ್ಟು ಮಳೆ ಅಕ್ಟೋಬರ್ ಮತ್ತು ನವೆಂಬರ್ ತಿಂಗಳುಗಳಲ್ಲಿ ಆಗುತ್ತಿದೆ.

ಬಯಲುಸೀಮೆ ಜಿಲ್ಲೆಗಳಲ್ಲಿ ವಾಡಿಕೆಗಿಂತ ಹೆಚ್ಚು ಮಳೆ ಆಗುತ್ತಿದೆ. ಹವಾಮಾನ ಬದಲಾವಣೆಯಿಂದ ಬೇಸಿಗೆಯಲ್ಲಿ ಹೆಚ್ಚು ಬಿಸಿಲು, ಚಳಿಗಾಲದಲ್ಲಿ ಹೆಚ್ಚು ಚಳಿ, ಮಳೆಗಾಲದಲ್ಲಿ ಹೆಚ್ಚು ಮಳೆಯಾಗುತ್ತಿದೆ ಎನ್ನುತ್ತಾರೆ ತಜ್ಞರು.

ಈ ಅತಿವೃಷ್ಟಿಯಿಂದಾಗಿ ರಾಜ್ಯದ ವಿವಿಧ ಜಿಲ್ಲೆಗಳ 10 ಲಕ್ಷಕ್ಕೂ ಹೆಚ್ಚು ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ಮತ್ತು ತೋಟಗಾರಿಕಾ ಬೆಳೆಗಳು ನಾಶವಾಗಿವೆ. ಬಯಲುಸೀಮೆ ಜಿಲ್ಲೆಗಳ ಪ್ರಮುಖ ಬೆಳೆಯಾದ ರಾಗಿ ಕೊಳೆಯುವ ಸ್ಥಿತಿಗೆ ತಲುಪಿದ್ದರೆ, ತೆನೆಕಟ್ಟಿ ನಿಂತಿರುವ ಬೆಳೆಗಳು ನೆಲಕ್ಕೆ ಬಿದ್ದು ಮೊಳಕೆಯೊಡೆಯುತ್ತಿವೆ. ಕಡಲೆಗೆ ನೀರು ಹೆಚ್ಚಾಗಿ ಕೊಳೆತು ಹೋಗುತ್ತಿದೆ.. ಮಲೆನಾಡು ಪ್ರದೇಶದಲ್ಲಿ ಭತ್ತ, ಅಡಿಕೆ ಸೇರಿದಂತೆ ಹಲವು ಬೆಳೆಗಳು ನೆಲಕಚ್ಚಿವೆ

ನವೆಂಬರ್ ತಿಂಗಳಲ್ಲಿ ಅಪರೂಪಕ್ಕೆ ಮಳೆ ಸುರಿಯುವ ಪ್ರದೇಶಗಳಾದ ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ರಾಮನಗರ, ಚಿತ್ರದುರ್ಗ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ ಜಿಲ್ಲೆಗಳ ಜನರನ್ನು, ಹೊಲಗಳನ್ನು ಮಳೆ ನಡುಗಿಸುತ್ತಿದೆ. ಈ ಜಿಲ್ಲೆಗಳಲ್ಲಿ ವಾಡಿಕೆ ಮಳೆಗಿಂತಲೂ 150ರಿಂದ 250 ಪಟ್ಟು ಹೆಚ್ಚು ಮಳೆಯಾಗಿದೆ.ವಾಡಿಕೆಯಂತೆ ಚಿಕ್ಕಬಳ್ಳಾಪುರದ ಚಿಂತಾಮಣಿಯಲ್ಲಿ ವಾರ್ಷಿಕ 700 ಮಿಲಿ ಮೀಟರ್ ಮಳೆಯಾಗುತ್ತದೆ. ಆದರೆ, ಈ ಬಾರಿ ಇದುವರೆಗೆ 1,500ಮಿ.ಮೀ. ಮಳೆಯಾಗಿದೆ. ಬೆಂಗಳೂರಿನ ಜಿಕೆವಿಕೆ ಕೇಂದ್ರದಲ್ಲಿ ವಾರ್ಷಿಕ 920 ಮಿ.ಮೀ. ವಾಡಿಕೆ ಮಳೆ ದಾಖಲಾಗುತ್ತದೆ. ಈ ಬಾರಿ ಇದುವರೆಗೆ 1,300 ಮಿ.ಮೀ. ಮಳೆ ದಾಖಲಾಗಿದೆ. ರಾಮನಗರ, ಚಿಕ್ಕಬಳ್ಳಾಪುರ, ಕೋಲಾರ, ತುಮಕೂರು ಜಿಲ್ಲೆಗಳಲ್ಲಿ ನವೆಂಬರ್ ತಿಂಗಳಲ್ಲಿ 25 ಮಿ.ಮೀ.ನಿಂದ 60 ಮಿ.ಮೀ. ವಾಡಿಕೆ ಮಳೆಯಾಗುತ್ತದೆ. ಆದರೆ, ಈ ಬಾರಿ 300 ಮಿ.ಮೀ. ಆಗಿದೆ ಇದರಿಂದ ರೈತರ ಬದುಕು ಹೇಳತೀರದಂತಾಗಿದೆ ಅವರ ಗೋಳನ್ನು ಆಲಿಸುವವರೇ ಇಲ್ಲ.. ಸದಾ ಮೋಡ ನೋಡುತ್ತಾ ಕೂರುತ್ತಿದ್ದ ರೈತ ಈಗ ಯಾಕಪ್ಪಾ ಇಂತಾ ಮಳೆ ಎನ್ನುವ ಪರಿಸ್ಥಿತಿಯಲ್ಲಿದ್ದಾನೆ ಬೆಳೆಗೆ ಹಾಕಿದ ಹಣ ಕಳೆದುಕೊಂಡು ಕಣ್ಣೀರಿಡುತ್ತಿದ್ದಾನೆ.

## ತಕ್ಷಣದ ನೆರವು ಇಲ್ಲ

ಮನೆ ಕುಸಿತ, ಬೆಳೆ ನಾಶದಿಂದ ತತ್ತರಿಸಿರುವ ಜನರಿಗೆ ತಕ್ಷಣದ ನೆರವು ನೀಡುವವರೇ ಇಲ್ಲವಾಗಿದೆ. ಅದೆಷ್ಟೋ ಕಡೆ ಕುಸಿದ ಮನೆ ಪಕ್ಕದಲ್ಲೇ ಪೆಂಡಾಲ್ ಹಾಕಿಕೊಂಡು ಕುಟುಂಬಗಳು ಬದುಕುತ್ತಿವೆ. ಅವರಿಗೆ ಆಹಾರ, ಆಸರೆ ನೀಡುವ ಕೆಲಸವೂ ನಡೆದಿಲ್ಲ. ಅಧಿಕಾರಿಗಳು ಸಾವು ಸಂಭವಿಸಿದರೆ ಮಾತ್ರ ಪರಿಹಾರ ನೀಡುತ್ತಿದ್ದಾರೆ. ಮನೆ ಕುಸಿದರೆ ತಕ್ಷಣ 10,000 ರೂ. ನೀಡಬೇಕೆಂಬ ಸೂಚನೆಯೂ ಕೆಲವೆಡೆ ಪಾಲನೆ ಆಗುತ್ತಿಲ್ಲ.

10 ಸಾವಿರಕ್ಕೂ ಅಧಿಕ ಮನೆಗಳು ಉರುಳಿ ಬಿದ್ದಿವೆ. ಜನ ಅತ್ಯಂತ ಸಂಕಷ್ಟದಲ್ಲಿರುವ ಹೊತ್ತಿನಲ್ಲಿ ರಾಜ್ಯ ಸರಕಾರ ತ್ವರಿತವಾಗಿ ಸ್ಪಂದಿಸಿ ಬೆನ್ನಿಗೆ ನಿಲ್ಲಬೇಕು ಎಂಬ ಒತ್ತಾಯ ತೀವ್ರವಾಗಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತ್ವರಿತ ಸಮೀಕ್ಷೆಗೆ ಸೂಚನೆ ನೀಡಿ, ಸಮೀಕ್ಷೆ ಮುಗಿದ 24 ಗಂಟೆಯಲ್ಲಿ ಪರಿಹಾರವನ್ನು ಖಾತೆಗೆ ಜಮಾ ಮಾಡುವ ಭರವಸೆಯನ್ನು ನೀಡಿದ್ದಾರೆ. ಆದರೆ, ಈ ಹಿಂದಿನ ವರ್ಷಗಳಲ್ಲಿ ಇಂಥಹುದೇ ಭರವಸೆಗಳು ಹುಸಿಯಾಗಿರುವುದರಿಂದ ಈ ಬಾರಿ ಹೀಗಾಗದಿರಲಿ ಎಂದು ಮನವಿ ಮಾಡುತ್ತಿದ್ದಾರೆ.

ಪ್ರಸಕ್ತ ವಿಧಾನ ಪರಿಷತ್ ಚುನಾವಣೆ ನೀತಿ ಸಂಹಿತೆ ಹೆಸರಲ್ಲಿ ಜನಪ್ರತಿನಿಧಿಗಳು ಕೂಡಾ ಮಳೆ ಸಂತ್ರಸ್ತರ ಬೆಂಬಲಕ್ಕೆ ನಿಂತಿಲ್ಲ. ಸಿಎಂ ಬೊಮ್ಮಾಯಿ, ಕಂದಾಯ ಸಚಿವ ಆರ್ ಅಶೋಕ್, ಕೃಷಿ ಸಚಿವ ಬಿ.ಸಿ. ಪಾಟೀಲ್ ಸೇರಿದಂತೆ ಕೆಲ ಸಚಿವರು ಮಾತ್ರ ರಾಜ್ಯದಲ್ಲಿ ಹಾನಿ ಪರಿಶೀಲನೆ ನಡೆಸುತ್ತಿದ್ದಾರೆ. ಆಯಾ ಜಿಲ್ಲೆಯ ಉಸ್ತುವಾರಿ ಸಚಿವರಿಗೆ ಜನರ ಗೋಳು ಕೇಳಲು ಚುನಾವಣಾ ಆಯೋಗ ನಿರ್ಬಂಧ ವಿಧಿಸಿದ್ದರಿಂದ ಹಿನ್ನಡೆಯಾಗಿದೆ. ಈ ನಡುವೆ ಪ್ರತಿಪಕ್ಷಗಳ ನಾಯಕರು ಕೂಡಾ ಜನರ ಸಮಸ್ಯೆಯನ್ನು ಆಲಿಸುವಲ್ಲಿ ಭಾರಿ ಮುತುವರ್ಜಿ ತೋರಿಸುತ್ತಿಲ್ಲ. ಜನಪ್ರತಿನಿಧಿಗಳ ಒತ್ತಡವಿಲ್ಲದೆ ಇರುವುದರಿಂದ ಅಧಿಕಾರಿಗಳು ಸಮೀಕ್ಷೆಯ ಬಗ್ಗೆ ಹೆಚ್ಚು ಆಸಕ್ತಿ ತೋರಿಸುತ್ತಿಲ್ಲ ಎಂಬ ದೂರುಗಳಿವೆ. ಎಲ್ಲ ಚಟುವಟಿಕೆಗಳು

## ಇನ್ನೂಪರಿಹಾರವೇ ಸಿಕ್ಕಿಲ್ಲ

ಅತಿ ಹೆಚ್ಚು ಹಾನಿ ಸಂಭವಿಸಿರುವ ಜಿಲ್ಲೆಗಳಲ್ಲಿ ಒಂದಾದ ಚಿಕ್ಕಮಗಳೂರಿನಲ್ಲಿ ಸಂತ್ರಸ್ತರ ನೋವು ಆಲಿಸಬೇಕಾದ ಜನಪ್ರತಿನಿಧಿಗಳು ವಿಧಾನ ಪರಿಷತ್ ಚುನಾವಣೆ ಪ್ರಚಾರದಲ್ಲಿ ಬ್ಯುಸಿಯಾಗಿದ್ದಾರೆ. ಪರಿಹಾರ ಕೇಳಿದರೆ ಚುನಾವಣೆ ನೀತಿಸಂಹಿತೆಯ ನೆಪ ಹೇಳಲಾಗುತ್ತಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 8 ಸಾವಿರ ಹೆಕ್ಟೇರ್ ಭತ್ತದ ಬೆಳೆಯಲ್ಲಿ ಶೇ.50ಕ್ಕಿಂತ ಹೆಚ್ಚಿನ ಹಾನಿಯಾಗಿದೆ. ಅಡಕೆ ಬೆಳೆಗೆ ಹಾನಿಯಾಗಿ, ಕೊಳೆ ರೋಗ ಬಾಧಿಸುತ್ತಿದೆ. ಇಷ್ಟರ ತನಕ ಜಿಲ್ಲಾಡಳಿತ ಅಥವಾ ಕೃಷಿ ಇಲಾಖೆಯಿಂದ ಯಾವುದೇ ಅಧಿಕಾರಿಗಳೂ ಸಮೀಕ್ಷೆಗೆ ಬಂದಿಲ್ಲ,

## ತುರ್ತು ಪರಿಹಾರ ಎಲ್ಲೂ ಇಲ್ಲ

ಉತ್ತರ ಕನ್ನಡ ಜಿಲ್ಲೆಯಲ್ಲಿ ಮಳೆ ಹಾನಿಗೆ ಜಿಲ್ಲಾಡಳಿತದಿಂದ ಸ್ಪಂದನೆ ಸರಿಯಾಗಿಲ್ಲ. ಇಷ್ಟೆಲ್ಲ ಹಾನಿಯಾಗಿದ್ದರೂ ಹಿರಿಯ ಅಧಿಕಾರಿಗಳು ಕ್ಷೇತ್ರ ಭೇಟಿ ಮಾಡಿಲ್ಲ. ಬೆಳೆ ಹಾನಿ ಸಮೀಕ್ಷೆ ನಡೆಯುತ್ತಿದೆ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಈಗ ಮನೆ ಕಳೆದುಕೊಂಡವರಿಗೆ ಪರಿಹಾರ ಕೊಡುವುದಿರಲಿ ಕಳೆದ ಜುಲೈನಲ್ಲಿ ಪ್ರವಾಹ ಬಂದಾಗ ನೀರು ನುಗ್ಗಿದ್ದ ಮನೆಗಳಿಗೇ ಇನ್ನೂ ಸರಿಯಾಗಿ ಪರಿಹಾರ ಕೊಟ್ಟಿಲ್ಲ.

## ತಕ್ಷಣಕ್ಕೆ ಸ್ಪಂದಿಸುವವರಿಲ್ಲ

ಮನೆ ಕುಸಿತ, ಬೆಳೆ ನಾಶದಿಂದ ತತ್ತರಿಸಿರುವ ಜನರಿಗೆ ತಕ್ಷಣದ ನೆರವು ನೀಡುವವರೇ ಇಲ್ಲವಾಗಿದೆ. ಅದೆಷ್ಟೋ ಕಡೆ ಕುಸಿದ ಮನೆ ಪಕ್ಕದಲ್ಲೇ ಪೆಂಡಾಲ್ ಹಾಕಿಕೊಂಡು ಕುಟುಂಬಗಳು ಬದುಕುತ್ತಿವೆ. ಅವರಿಗೆ ಆಹಾರ, ಆಸರೆ ನೀಡುವ ಕೆಲಸವೂ ನಡೆದಿಲ್ಲ. ಅಧಿಕಾರಿಗಳು ಸಾವು ಸಂಭವಿಸಿದರೆ ಮಾತ್ರ ಪರಿಹಾರ ನೀಡುತ್ತಿದ್ದಾರೆ. ಮನೆ ಕುಸಿದರೆ ತಕ್ಷಣ 10,000 ರೂ. ನೀಡಬೇಕೆಂಬ ಸೂಚನೆಯೂ ಕೆಲವೆಡೆ ಪಾಲನೆ ಆಗುತ್ತಿಲ್ಲ.

## ಹಿಂದೆ ಬಿದ್ದ ಮನೆಗಳಿಗೇ ಪರಿಹಾರ ಸಿಕ್ಕಿಲ್ಲ

ಸಿಎಂ ಅವರು ತಕ್ಷಣ ಪರಿಹಾರ ನೀಡುವುದಾಗಿ ಹೇಳಿದ್ದಾರಾದರೂ ಕಳೆದ ಜೂನ್‌ನಲ್ಲಿ ಕುಸಿದು ಬಿದ್ದ ಮನೆಗಳ ಸಮೀಕ್ಷೆಯೇ ಇನ್ನೂ ಮುಗಿದಿಲ್ಲ. ಪರಿಹಾರ ಕನಸಿನ ಗಂಟಾಗಿದೆ. ಹಿಂದಿನ ವರ್ಷ ಉರುಳಿದ ಮನೆಗಳನ್ನು ಮರುಕಟ್ಟಲೂ ಅರೆಬರೆ ಪರಿಹಾರ ಸಿಕ್ಕಿದೆ ಅಷ್ಟೆ.

ಈ ಬಾರಿ ಕಾಫಿ, ಅಡಕೆ, ಕಾಳುಮೆಣಸು ಮತ್ತಿತರ ವಾಣಿಜ್ಯ ಬೆಳೆಗಳು ಸಂಪೂರ್ಣ ನಾಶವಾಗಿವೆ. ಇವುಗಳಿಗೆ ಹೇಗೆ ಪರಿಹಾರ ನೀಡಬೇಕು ಎನ್ನುವುದಕ್ಕೆ ಮಾನದಂಡಗಳೇ ರೂಪಿತವಾಗಿಲ್ಲ. ಸಮೀಕ್ಷೆ ನಡೆಸುವ ಅಧಿಕಾರಿಗಳಿಗೂ ಗೊತ್ತಿಲ್ಲ. ಈ ಬಗ್ಗೆ ಸರಕಾರ ಗಮನ ಹರಿಸಬೇಕಿದೆ.

## ಲೆಕ್ಕಾಚಾರವೇ ಇಲ್ಲ ಇನ್ನೂ ಪರಿಹಾರ ಹೇಗೆ.?


ಈ ಅಕಾಲಿಕ ಮಳೆಯಿಂದ ಕೃಷಿ ಚಟುವಟಿಕೆಗಳ ಮೇಲೆ ತೀವ್ರ ತರಹದ ವ್ಯತಿರಿಕ್ತ ಪರಿಣಾಮಗಳು ಉಂಟಾ ಗಿದೆ. ಬೆಳೆ ಹಾನಿಯನ್ನು ಅನುಭವಿಸಿದ ರೈತರಿಗೆ ಪರಿಹಾರ ನೀಡಬೇಕಾಗಿರುವುದು ತಕ್ಷಣಕ್ಕೆ ಆಗಬೇಕಿರುವ ಕೆಲಸ. ರಾಜ್ಯದಲ್ಲಿ ಬಿತ್ತನೆಯಾಗಿರುವ ಬೆಳೆಗಳ ಕುರಿತು ನಿಖರ ಮಾಹಿತಿಯನ್ನು ಕಲೆಹಾಕಲು ಕಂದಾಯ ಇಲಾಖೆ ಹಾಗೂ ಕೃಷಿ ಇಲಾಖೆ ಜಂಟಿಯಾಗಿ ಇತ್ತೀಚೆಗೆ ಆಪ್‌ವೊಂದನ್ನು ಅಭಿವೃದ್ಧಿಪಡಿಸಿವೆ. ಆ ವ್ಯವಸ್ಥೆಯನ್ನು ಸಮರ್ಪಕವಾಗಿ ಜಾರಿಗೆ ತಂದಿದ್ದರೆ ಕೃಷಿ ಇಲಾಖೆಯ ಬಳಿ ಈಗ ಬಿತ್ತನೆಯಾದ ಪ್ರಮಾಣ ಹಾಗೂ ಮಳೆಯಿಂದ ಹಾನಿಯಾದ ಬೆಳೆಯ ಪ್ರಮಾಣದ ನಿಖರ ಲೆಕ್ಕಾಚಾರ ಇರುತ್ತಿತ್ತು. ಇದರಿಂದ ಪರಿಹಾರ ವಿತರಿಸುವ ಕೆಲಸ ವಿಳಂಬವಿಲ್ಲದೆ ನಡೆಯಲು ಸಾಧ್ಯವಿತ್ತು. ಆದರೆ, ಇಡೀ ಸರಕಾರವೇ ಚುನಾವಣಾ ಪ್ರಚಾರ ಕಾರ್ಯದಲ್ಲಿ ತೋರಿದ ಉತ್ಸಾಹ ಇಂತಹ ಯೋಜನೆಗಳನ್ನು ಸಾಕಾರಗೊಳಿಸುವಲ್ಲಿ ತೋರದೇ ಇರುವುದು ಸರಕಾರದ ಕಾರ್ಯವೈಖರಿಗೆ ಹಿಡಿದ ಕೈಗನ್ನಡಿ. ಕೃಷಿ ಚಟುವಟಿಕೆಗಳ ಆರ್ಥಿಕ ಬಂಡಿ ನಿಂತ ನಿಂತಿರುವ ಈ ಹೊತ್ತಿನಲ್ಲಿ ಸರಕಾರ ಮೈಕೊಡವಿ ಎದ್ದು ನಿಲ್ಲುವ ಮೂಲಕ ರೈತ ಪರ ಸರಕಾರ ಎಂಬುದನ್ನು ಸಾಬೀತಪಡಿಸಬೇಕಿದೆ. ಕೂಡಲೇ ಮಳೆಯಿಂದ ಹಾನಿಗೊಳಗಾದ ಬೆಳೆಗಳ ಸಮೀಕ್ಷೆ ಕಾರ್ಯ ನಡೆಸಿ, ತ್ವರಿತಗತಿಯಲ್ಲಿ ಪರಿಹಾರದ ವ್ಯವಸ್ಥೆ ಮಾಡಬೇಕು.

●12ನೇ ಪುಟಕ್ಕೆ...



# ರೈತರ ನಂಬಿಕೆ ಕಳೆದುಕೊಂಡ ಸರಕಾರ

ಸನತ್‌ಕುಮಾರ ಬೆಳಗಲಿ
ಹಿರಿಯ ಪತ್ರಕರ್ತರು



ಭಾರತದ ಒಕ್ಕಲುತನಕ್ಕೆ ಮಾರಕವಾದ ಮೂರು ಕೃಷಿ ಕಾಯ್ದೆಗಳನ್ನು ವಾಪಸು ಪಡೆಯುವದಾಗಿ ಸ್ವತಃ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಬಹಿರಂಗವಾಗಿ ಹೇಳಿದರೂ ರೈತರ ಹೋರಾಟ ನಿಂತಿಲ್ಲ.ಕಾರಣ ಪ್ರಧಾನಿ ಮಾತಿನ ಮೇಲೆ ರೈತರಿಗೆ ನಂಬಿಕೆಯಿಲ್ಲ.ಇದಕ್ಕೆ ಕಾರಣ ಪ್ರಧಾನಿ ಹೇಳಿಕೆ ನೀಡಿದ ಬೆನ್ನಲ್ಲೇ ಮಂಗಳೂರಿನ ಆರ್.ಎಸ್.ಎಸ್. ನಾಯಕ ಕಲ್ಲಡ್ಕ ಪ್ರಭಾಕರ ಭಟ್ಟರು ಸೇರಿದಂತೆ ಕೆಲ ಬಿಜೆಪಿ ನಾಯಕರು ಕೃಷಿ ಕಾಯ್ದೆಗಳನ್ನು ವಾಪಸು ಪಡೆಯುವದಿಲ್ಲ ,ಬೇರೆ ರೂಪದಲ್ಲಿ ತಿದ್ದುಪಡಿ ಮಾಡಿ ತರುತ್ತೇವೆ ಎಂದು ಹೇಳಿರುವದು ಮತ್ತು ನೋಟು ಅಮಾನ್ಯೀಕರಣದ ಸಂದರ್ಭದಲ್ಲಿ ಕೊಟ್ಟ ಮಾತನ್ನು ಉಳಿಸಿಕೊಳ್ಳದ ಪ್ರಧಾನಿ ಮೇಲೆ ರೈತರಿಗೆ ನಂಬಿಕೆಯಿಲ್ಲ.ಅದಕ್ಕಾಗಿ ಶ್ವೇತಪತ್ರ ಹೊರಡಿಸಲು ರೈತರು ಒತ್ತಾಯಿಸಿದ್ದಾರೆ.

ಆದರೆ ಮೂರು ಕರಾಳ ಕೃಷಿ ಕಾಯ್ದೆಗಳ ವಿರುದ್ಧ ನಡೆದ ಚಳವಳಿಯಲ್ಲಿ ಕೋಮುವಾದಿ ಶಕ್ತಿಗಳ ಹಸ್ತಕ್ಷೇಪಕ್ಕೆ ಅವಕಾಶವಿರಲಿಲ್ಲ. ಹೀಗೆ ಫ್ಯಾಸಿಸ್ಟ್ ಶಕ್ತಿಗಳನ್ನು ದೂರವಿಟ್ಟು ನಡೆದ ಮೊದಲ ಚಳವಳಿ ಇದು.

ಉತ್ತರ ಪ್ರದೇಶ ,ಪಂಜಾಬ್ ಸೇರಿದಂತೆ ರೈತ ಚಳವಳಿ ಅತ್ಯಂತ ತೀವ್ರವಾಗಿ ನಡೆಯುತ್ತಿರುವ ರಾಜ್ಯಗಳಲ್ಲಿ ವಿಧಾನ ಸಭಾ ಚುನಾವಣೆ ನಡೆಯುತ್ತಿರುವ ಹಿನ್ನೆಲೆಯಲ್ಲಿ ಹಾಗೈ 2024 ರ ಲೋಕಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಮೋದಿಯವರು ಈ ದಿಢೀರ್ ಹೇಳಿಕೆ ನೀಡಿದ್ದಾರೆ ಎಂಬುದು ಚಿಕ್ಕ ಮಗುವಿಗೂ ಅರ್ಥವಾಗುತ್ತದೆ.

ಆದರೆ ರೈತ ಚಳವಳಿ ಪಕ್ಷಾತೀತವಾಗಿತ್ತು.ಪಂಜಾಬ್, ಹರಿಯಾಣ,ರಾಜಸ್ಥಾನ, ಮತ್ತು ಉತ್ತರ ಪ್ರದೇಶ ಗಳ ರೈತರನ್ನೇ ಬಹುತೇಕ ಒಳಗೊಂಡಿದ್ದರೂ ಇದು ಯಾವುದೇ ಜಾತಿ ಮತ,ಕೋಮು ,ಕಂದಾಚಾರದ ಜೊತೆ ಗುರುತಿಸಿಕೊಂಡಿರಲಿಲ್ಲ. ಇದನ್ನು ವಿಫಲಗೊಳಿಸಲು ನಾನಾ ಕಸರತ್ತುಗಳನ್ನು ನಡೆಸಿ ವಿಫಲಗೊಂಡ ನಂತರ ಹತಾಶರಾದ ಪ್ರಧಾನಿ ನರೇಂದ್ರ ಮೋದಿಯವರು ಮುಂಬರುವ ಉತ್ತರ ಪ್ರದೇಶ ಮತ್ತಿತರ ರಾಜ್ಯಗಳ ವಿಧಾನ ಸಭಾ ಚುನಾವಣೆ ಹಾಗೂ 2023 ರಲ್ಲಿ ನಡೆಯುವ ಲೋಕಸಭಾ ಚುನಾವಣೆಯ ಫಲಿತಾಂಶ ಎಲ್ಲಿ ಉಲ್ಟಾ ಆದೀತೆಂದು ಹೆದರಿ ಮೂರು ಕೃಷಿ ಕಾಯ್ದೆಗಳನ್ನು ವಾಪಸು ಪಡೆಯುವದಾಗಿ ಪ್ರಕಟಿಸಿದರು.ಹಾಗೆಂದು ಅವರ ಮನ ಪರಿವರ್ತನೆ ಆಗಿದೆಯೆಂದಲ್ಲ. ಈಗಲೂ ಮೂರು ಕರಾಳ ಕಾಯ್ದೆಗಳನ್ನು ಸಮರ್ಥಿಸಿಕೊಳ್ಳುತ್ತಲೇ ಇದ್ದಾರೆ.ಕಾಯ್ದೆಗಳಿಗೆ ಜನರಿಗೆ ಮನವರಿಕೆ ಮಾಡಿಕೊಡಲಾಗದಿರುವದಕ್ಕೆ ದೇಶದ ಕ್ಷಮೆಯನ್ನು ಯಾಚಿಸಿದರು.ಈ ಚಳವಳಿಯಲ್ಲಿ ಸುಮಾರು 680 ರೈತರು ಅಸು ನೀಗಿರುವ ಬಗ್ಗೆ ಅವರು ಪಶ್ಚಾತ್ತಾಪ ಮತ್ತು ವಿಷಾದವನ್ನು ವ್ಯಕ್ತಪಡಿಸಲಿಲ್ಲ.ಈಗ ಕಾಯ್ದೆಗಳನ್ನು ವಾಪಾಸು ಪಡೆಯುವದಾಗಿ ಘೋಷಿಸಿದ್ದೇನೋ ಸರಿ.ಆದರೆ ಎಲ್ಲಿಯವರೆಗೆ ರೈತರ ಉತ್ಪನ್ನ ಗಳಿಗೆ ಎಲ್ಲಿಯವರೆಗೆ



ಕನಿಷ್ಠ ಬೆಂಬಲ ಬೆಲೆಯನ್ನು ರೈತರ ಕಾನೂನು ಬದ್ದ ಹಕ್ಕ ನ್ನಾಗಿ ಮಾಡುವದಿಲ್ಲವೋ ಅಲ್ಲಿಯವರಗೆ ರೈತರ ಸಂಕಷ್ಟದ ಬದುಕಿಗೆ ಕೊನೆ ಎಂಬುದಿಲ್ಲ.

ಸರ್ಕಾರದ ಜನ ವಿರೋಧಿ ನೀತಿಗಳ ವಿರುದ್ಧ ಧ್ವನಿಯೆತ್ತುವವರನ್ನೆಲ್ಲ "ದೇಶ ದ್ರೋಹಿಗಳು" ನಕ್ಸಲರು,ಜಿಹಾದಿಗಳು,ಮಾವೋವಾದಿಗಳು ಎಂದೆಲ್ಲ ಹೆಸರಿಸುತ್ತ ಅವರ ಧ್ವನಿಯನ್ನು ಅಡಗಿಸಲು ಪೊಲೀಸ ಬಲವನ್ನು, ಎನ್.ಐ.ಎ ಯನ್ನು,ಸಿಬಿಐ ಯನ್ನು,ಜಾರಿ ನಿರ್ದೇಶನಾಲಯ ಗಳನ್ನು ಉಪಯೋಗಿಸುತ್ತ ಬಂತು. ದೇಶದಲ್ಲಿ ಪ್ರತಿಭಟನೆಯೇ ಇಲ್ಲದ ವಾತಾವರಣ ನಿರ್ಮಾಣವಾಯಿತು. ಚಳವಳಿಗಳು ನಡೆಯಲೇ ಇಲ್ಲವೆಂದಲ್ಲ.ಆದರೆ ಅವೆಲ್ಲ ಸಾಂಕೇತಿಕ ಪ್ರತಿಭಟನೆ ಗಳಾಗಿದ್ದವು.ಕಾರ್ಮಿಕ ಸಂಘಟನೆಗಳು ವರ್ಷಕ್ಕೊಮ್ಮೆ ದಿಲ್ಲಿ ಚಲೋ ಮಾಡಿ ಸರಕಾರಕ್ಕೆ ಅಹವಾಲುಗಳನ್ನು ಸಲ್ಲಿಸುತ್ತ ಬಂದರೂ ಅದು ಸರ್ಕಾರದ ಕುರುಡು ಕಿವಿಗೆ ತಲುಪಲೇ ಇಲ್ಲ.ದಿಲ್ಲಿ ಚಲೋ ಮಾಡಿದವರು ಒಂದೆರಡು ದಿನ ಅಲ್ಲಿ ಬೀಡು ಬಿಟ್ಟು ತಮ್ಮ ಊರಿಗೆ ವಾಪಸು ಬರುತ್ತಿದ್ದರು.ಚುನಾವಣೆ ಗಳು ಬಂದಾಗ ಎಂದಿನಂತೆ ಬಿಜೆಪಿ ಗೆ ಮತ ಹಾಕುತ್ತಿದ್ದರು.

ಆದರೆ ರೈತ ಚಳವಳಿ ಇಂಥ ಸಾಂಪ್ರದಾಯಿಕ ಹೋರಾಟ ಗಳ ಸಾಲಿಗೆ ಸೇರಲಿಲ್ಲ.ಮೂರು ಕೃಷಿ ಕಾಯ್ದೆಗಳನ್ನು ತಂದು ಕೃಷಿ ವಲಯವನ್ನು ಕಾರ್ಪೊರೇಟ್ ಕಂಪನಿಗಳ ಮಡಿಲಿಗೆ ಹಾಕಲು ಸರಕಾರ ಮುಂದಾದಾಗ ಪಂಜಾಬ್ ಮತ್ತು ಹರಿಯಾಣದ ರೈತರು ದಿಲ್ಲಿ ಗೆ ಧಾವಿಸಿದರು.ದಿಲ್ಲಿಗೆ ಬಂದವರು ತಮ್ಮ ಊರಿಗೆ ವಾಪಸು ಹೋಗಲಿಲ್ಲ. ರಾಜಧಾನಿ ಯಲ್ಲೇ ಬೀಡು ಬಿಟ್ಟರು.ಒಬ್ಬರಲ್ಲ ,ಇಬ್ಬರಲ್ಲ.ಸಾವಿರವಲ್ಲ ಎರಡು ಸಾವಿರ ವಲ್ಲ ಲಕ್ಷಾಂತರ ಸಂಖ್ಯೆಯಲ್ಲಿ ದಿಲ್ಲಿಯಲ್ಲಿ ಜೆಂಡಾ ಊರಿ ಟೆಂಟುಗಳನ್ನು ಹಾಕಿಕೊಂಡು ಕರಾಳ ಕಾಯ್ದೆಗಳನ್ನು ವಾಪಸು ಪಡೆಯುವವರೆಗೆ ಊರಿಗೆ ಹೋಗುವದಿಲ್ಲ ಎಂದು ಪಟ್ಟು ಹಿಡಿದು ಕೂತರು.ಒಕ್ಕೂಟ ಸರ್ಕಾರದ ಜೊತೆ ಹನ್ನೊಂದು ಸುತ್ತಿನ ಮಾತುಕತೆ ನಡೆದರೂ ಹಗ್ಗ ಹರಿಯಲಿಲ್ಲ,ಕೋಲು ಮುರಿಯಲಿಲ್ಲ.

ಅದೇನೇ ಇರಲಿ 2014 ರ ನಂತರ ಅಂದರೆ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಒಕ್ಕೂಟ ಸರ್ಕಾರದ ಅಧಿಕಾರ ಸೂತ್ರ ಹಿಡಿದ ನಂತರ "ಕಾಂಗ್ರೆಸ್ ಮುಕ್ತ" ಭಾರತದ ಘೋಷಣೆ ಮಾಡುತ್ತ ಪ್ರತಿಪಕ್ಷ ಮುಕ್ತ ಭಾರತವನ್ನು ಮತ್ತು ನವ ಪ್ರತಿಭಟನೆ ಮುಕ್ತ ಭಾರತವನ್ನು ನಿರ್ಮಿಸಲು ಸರಕಾರ ತನ್ನ ಬಳಿ ಇರುವ ಎಲ್ಲ ಅಸ್ತ್ರಗಳನ್ನು ಬಳಸಿಕೊಳ್ಳುತ್ತ ಬಂತು

ಬಸವಣ್ಣನವರಂತೆ ಗುರು ನಾನಕರು "ಕಾಯಕವೇ ಕೈಲಾಸ" ( ಕೀರತ್ ಕರೋ ) ಎಂಬ ಸಂದೇಶ ನೀಡಿದವರು.ಸಿಖ್ಖರು ಎಂದೂ ಮನುವಾದಿ ಕೋಮುವಾದಿ ಶಕ್ತಿಗಳ ಮೋಸದ ಬಲೆಗೆ ಬೀಳಲಿಲ್ಲ.ಸಿಖ್ ಧರ್ಮ ಹಿಂದು ಧರ್ಮದ ಉಪಶಾಖೆಯಲ್ಲ ಎಂದು ಸಾರಿ ಹೇಳಿದರು. ಆದರೆ ಕರ್ನಾಟಕದ ನಾವು ಬಸವಣ್ಣನವರ ಅನುಯಾಯಿಗಳು ಕಾಯಕ ಜೀವಿಗಳ ನೆಲದಲ್ಲಿ ವಚನ ಚಳವಳಿ ಯನ್ನು ದಮನ ಮಾಡಿದ ಮನುವಾದಿ ಶಕ್ತಿಗಳು ಬಾಲ ಬಿಚ್ಚಲು ಅವಕಾಶ ನೀಡಿದೆವು.ಅದರ ಚರ್ಚೆ ಈಗ ಬೇಡ.ಆದರೆ ಗುರು ನಾನಕ್ ಜಯಂತಿ ದಿನವೇ ಮೂರು ಕೃಷಿ



ಕಾಯ್ದೆಗಳನ್ನು ವಾಪಸು ಪಡೆಯುವದಾಗಿನವ ಪ್ರಧಾನಿ ಘೋಷಿಸಿದ್ದು ಗಮನಾರ್ಹವಾಗಿದೆ.

ಈ ಶಾಂತಿಯುತ ರೈತ ಚಳವಳಿಯನ್ನು ಹಿಂಸಾತ್ಮಕಗೊಳಿಸಿ ಹತ್ತಿಕ್ಕಲು ಸರಕಾರ ಸಾಕಷ್ಟು ಮಸಲತ್ತು ನಡೆಸಿತು.ಆದರೆ ರೈತರು ತಾಳ್ಮೆ ಕಳೆದುಕೊಳ್ಳಲಿಲ್ಲ.ಪ್ರಚೋದನೆಗೆ ಬಲಿಯಾಗಲಿಲ್ಲ.ರೈತ ಸತ್ಯಾಗ್ರಹ ದಲ್ಲಿ ಕೋಮುವಾದಿಗಳು ಸೇರಿ ಕೊಂಡು ದಾರಿ ತಪ್ಪಿಸಲು ಯತ್ನಿಸಿದರು.ಕೆಂಪು ಕೋಟೆಯ ಬಳಿ ಹಿಂಸಾತ್ಮಕ ವಾತಾವರಣ ನಿರ್ಮಿಸಿದರು .ಆದರೂ ರೈತರು ಧೃತಿಗೆಡಲಿಲ್ಲ.ಈ ರೈತರ ಹೋರಾಟ ಎಷ್ಟು ಅದ್ಭುತ ವಾಗಿತ್ತೆಂದರೆ ಅದನ್ನು ನೋಡಿ ಬರಲು ದೂರದ ಕರ್ನಾಟಕ, ತಮಿಳುನಾಡು ,ತೆಲಂಗಾಣ, ಆಂಧ್ರಪ್ರದೇಶದ ರೈತರು ದಿಲ್ಲಿ ಗೆ ಹೋಗಿ ಬಂದರು. ಅದೇ ಸಂದರ್ಭದಲ್ಲಿ ಕೊರೊನಾ ವೈರಾಣು ವ್ಯಾಪಕವಾಗಿದ್ದರಿಂದ ನಾನು ದಿಲ್ಲಿಗೆ ಹೊರಟವನು ಪ್ರಯಾಣವನ್ನು ರದ್ದುಗೊಳಿಸಿದೆ.ಆದರೆ ಅಲ್ಲಿ ಹೋಗಿ ಬಂದವರು ಹೇಳುತ್ತಿದ್ದ ಸ್ಫೂರ್ತಿದಾಯಕ ಸುದ್ದಿ ಗಳನ್ನು ಕೇಳುತ್ತಿದ್ದೆ.

ಚಳವಳಿಗಳ ಕಾಲವೇ ಮುಗಿಯಿತೆನ್ನುವ ನಿರಾಸೆಯ ವಾತಾವರಣದಲ್ಲಿ ದಿಲ್ಲಿಯಲ್ಲಿ ನಡೆದ ರೈತ ಹೋರಾಟ ಜಾಗತಿಕ ಮಹತ್ವವನ್ನು ಪಡೆದಿದೆ. ಕೊರೆಯುವ ಚಳಿಯಲ್ಲಿ,ಉರಿವ ಬಿಸಿಲಲ್ಲಿ,ಸುರಿವ ಮಳೆಯಲ್ಲಿ ರೈತರು ನಡೆಸಿರುವ ಹೋರಾಟ ಇತಿಹಾಸವನ್ನು ನಿರ್ಮಿಸಿದೆ.ಚಳವಳಿ ಮಾಡುವ ಜನರನ್ನು ಹಿಂದು,ಮುಸ್ಲಿಂ, ಸಿಖ್,ಕ್ರೈಸ್ತ ಎಂದು ಬೇರ್ಪಡಿಸಲು,ಒಡೆಯಲು ಅವಕಾಶ ನೀಡದೇ ನಾವೆಲ್ಲ ರೈತರು,ನಾವೆಲ್ಲ ಮಣ್ಣಿನ ಮಕ್ಕಳು, ನಾವೆಲ್ಲ ನೇಗಿಲಯೋಗಿಗಳು ನಮಗೆ ಜಾತಿ ಮತ ಭೇದವಿಲ್ಲ. ಎಂದು ಒಕ್ಕೊರಲಿಂದ ಹೋರಾಡಿ ಜಯ ಗಳಿಸಿದ ಬಹುದೊಡ್ಡ ವರ್ಗ ಹೋರಾಟವಿದು.

ಎಡಪಂಥೀಯ ಪಕ್ಷಗಳನ್ನು ಹೊರತುಪಡಿಸಿ ಬಹುತೇಕ ರಾಜಕೀಯ ಪಕ್ಷಗಳು ಫ್ಯಾಸಿಸ್ಟ್ ಬಿಜೆಪಿ ಸರಕಾರದ ದಮನಕಾರಿ ನೀತಿಯ ವಿರುದ್ಧ ಪ್ರತಿರೋಧವನ್ನು ಒಡ್ಡುವಲ್ಲಿ ವಿಫಲಗೊಂಡಿದ್ದವು. ಕಾಂಗ್ರೆಸ್ ನಲ್ಲಿ ರಾಹುಲ ಗಾಂಧಿ, ಸಿದ್ದರಾಮಯ್ಯ ನವರಂಥವರ ಧ್ವನಿ ಮಾತ್ರ ಕೇಳುತ್ತಿತ್ತು.ಇಂಥ ಸನ್ನಿವೇಶದಲ್ಲಿ ರೈತರು ಪಕ್ಷಾತೀತ,ಜಾತ್ಯಾತೀತ ಹೋರಾಟ ನಡೆಸಿದರು.ಎಡಪಂಥೀಯ ಪಕ್ಷಗಳು ನೇರವಾಗಿ ನಾಯಕತ್ವ ವಹಿಸದಿದ್ದರೂ ಈ ಪಕ್ಷಗಳ ಕಿಸಾನ ಸಭಾ ನಾಯಕರಾದ ಹನನ್ ಮೊಲ್ಲಾ,ಅಶೋಕ ಧವಳೆ,ವಿಜೂ ಕೃಷ್ಣ, ಹಾಗೂ ಪಂಜಾಬಿನ ಎಡಪಂಥೀಯ ಚಿಂತಕ ಡಾ,ದರ್ಶನ ಪಾಲ್, ಲೋಹಿಯಾ ವಾದಿ ಚಿಂತಕ ಯೊಗೇಂದ್ರ ಯಾದವ ಮುಂತಾದ ವರು ರೈತಾಂದೋಲನದ ನಾಯಕರಾದ ರಾಕೇಶ ಟಿಕಾಯತ ಮುಂತಾದ ವರೊಂದಿಗೆ ಹೆಗಲಿಗೆ ಹೆಗಲು ಕೊಟ್ಟು ನಿಂತರು.

ಈ ಹೋರಾಟ, ಪ್ರತಿಭಟನೆ ಇಲ್ಲಿಗೆ ಮುಗಿಯುವದಿಲ್ಲ.ಫ್ಯಾಸಿಸ್ಟ್ ,ಕಾರ್ಪೊರೇಟ್ ಕರಾಳ ಶಕ್ತಿಗಳಿಂದ ಪ್ರಭುತ್ವದ ಸೂತ್ರಗಳನ್ನು ಕಿತ್ತುಕೊಳ್ಳುವವರೆಗೆ ಹೋರಾಟ ಮುನ್ನಡೆಯಬೇಕು.

ಜನಸಾಮಾನ್ಯರ ನೋವು ಸಂಕಟಗಳಿಗೆ ಮಿಡಿಯುವ ಕವಿ ವರವರರಾವ, ಚಿಂತಕ ಆನಂದ ತೇಲ್ತುಂಬಡೆ, ನ್ಯಾಯವಾದಿ ಸುಧಾ ಭಾರದ್ವಾಜ್, ಲೇಖಕ ಗೌತಮ ನವಲ್ಕಾ ಅವರಂಥ ಇಪ್ಪತ್ತಕ್ಕೂ ಹೆಚ್ಚು ಅಪರೂಪದ ಜೀವಿಗಳನ್ನು ಸೆರೆಮನೆ ಯಿಂದ ಮುಕ್ತಗೊಳಿಸುವದಕ್ಕಾಗಿಯೂ ಹೋರಾಟಗಳು ರೂಪುಗೊಳ್ಳಬೇಕು.

ಎಲ್ಲಕ್ಕಿಂತ ಮುಖ್ಯವಾಗಿ ಭಾರತೀಯರಿಗೆಲ್ಲ ಜಾತಿ ಮತವೆನ್ನದೇ ಸಮಾನ ಅವಕಾಶ ನೀಡಿದ ,ಧ್ವನಿಯಿಲ್ಲದವರಿಗೆ ಧ್ವನಿ ನೀಡಿದ ,ಮಹಿಳೆಯರು ಮತ್ತು ತಳ ಸಮುದಾಯಗಳ ರಕ್ಷಾ ಕವಚವಾದ ಬಾಬಾಸಾಹೇಬರ ಸಂವಿಧಾನವನ್ನು ಮತ್ತು ಪ್ರಜಾಪ್ರಭುತ್ವ ವನ್ನು ಉಳಿಸಿಕೊಳ್ಳಲು ಹೋರಾಟವನ್ನು ಮುನ್ನಡೆಸಬೇಕಾಗಿದೆ.ಪ್ರತಿರೋಧ, ಪ್ರತಿಭಟನೆ, ಹೋರಾಟಗಳಿಂದ ಮಾತ್ರ ನಮ್ಮ ಸ್ವಾತಂತ್ರ್ಯ, ಸಮಾನತೆ ,ಜನತಂತ್ರ,ಮತ್ತು ಬಹುತ್ವ ಭಾರತವನ್ನು ಕಾಪಾಡಿಕೊಳ್ಳಲು ಸಾಧ್ಯ ಎಂಬುದನ್ನು ಮರೆಯಬಾರದು.

ಈಗ ಪ್ರಧಾನಿ ಹೇಳಿಕೆ ಯ ನಂತರ ರೈತ ಚಳವಳಿ ಇನ್ನೊಂದು ಹಂತವನ್ನು ಪ್ರವೇಶಿಸಿದೆ. ರೈತ ಪ್ರತಿನಿಧಿಗಳ ಜೊತೆ ಚರ್ಚಿಸದೇ ರೂಪಿಸಿದ ಕಾಯ್ದೆಗಳನ್ನು ವಾಪಸು ಪಡೆಯುವವರೆಗೆ ಈ ಕುರಿತು ಅಧಿಕೃತ ಸರಕಾರಿ ಪ್ರಕಟನೆ ಹೊರ ಬೀಳುವ ವರಗೆ ರೈತರ ಹೋರಾಟ ಮುಂದುವರಿಯಲಿದೆ. ರೈತರು ಚಳವಳಿಯನ್ನು ವಾಪಸ್ ಪಡೆಯಬೇಕಾದರೆ ಪ್ರಧಾನಿ ಮೇಲೆ ಮತ್ತು ಸರ್ಕಾರದ ಮೇಲೆ ರೈತರಿಗೆ ನಂಬಿಕೆ ಬರಬೇಕು.ಕೃಷಿ ಕಾಯ್ದೆಗಳನ್ನು ವಾಪಾಸು ಪಡೆಯುವದಾಗಿ ಬಾಯಿ ಮಾತಿನಲ್ಲಿ ಹೇಳುವದಲ್ಲ.ಈ ಕುರಿತು ಸಂಸತ್ತಿನಲ್ಲಿ ಅಧಿಕೃತ ತೀರ್ಮಾನ ಕೈಗೊಳ್ಳುಬೇಕು.




ಮೂರು ಕೃಷಿ ಕಾಯ್ದೆಗಳನ್ನು ಹಿಂತೆಗೆದುಕೊಳ್ಳುವುದಾಗಿ ಪ್ರಧಾನಿ ನರೇಂದ್ರ ಮೋದಿ ಪ್ರಕಟಿಸುವುದರ ಜೊತೆಗೇ ಜನರ ಕ್ಷಮೆಯನ್ನೂ ಕೋರಿದ್ದಾರೆ. ಪ್ರಧಾನಿಯೊಬ್ಬರು ಬಹಿರಂಗವಾಗಿ ಕ್ಷಮಾಯಾಚಿಸಿದ ಬಹು ಅಪರೂಪದ ಪ್ರಸಂಗವಿದು. ದುಡುಕಿನ ನಿರ್ಧಾರವಾಗಿ ತುರ್ತು ಪರಿಸ್ಥಿತಿ ಹೇರಿದ ಇಂದಿರಾಗಾಂಧಿ ತಾವು ಎಸಗಿದ ಪ್ರಮಾದಕ್ಕೆ ಪ್ರತಿಯಾಗಿ ಕ್ಷಮೆ ಕೋರದೆ ಜನಾಕ್ರೋಶಕ್ಕೆ ಈಡಾದ ರೀತಿ ಮೋದಿ ಜಾಗೃತಿಗೆ ಕಾರಣವಾಗಿರಬಹುದೆ...?

# ಮೋದಿ ಕ್ಷಮಾಯಾಚನೆ ಹಿಂದೆ ಮುಂದೆ



ರಾಜಸೂತ್ರ

ಎಂ.ಕೆ. ಭಾಸ್ಕರ ರಾವ್
ಹಿರಿಯ ಪತ್ರಕರ್ತರು



ಮಾಡಿದ್ದುಣ್ಣೋ ಮಹರಾಯ ಎನ್ನುವುದು ಕನ್ನಡದ ಸೊಗಸಾದ ಗಾದೆಗಳಲ್ಲಿ ಒಂದು. ಉಪ್ಪು ತಿಂದವರು ನೀರು ಕುಡಿಯಬೇಕು ಎನ್ನುವುದು ಮತ್ತೊಂದು. ಇಂಥ ಅರ್ಥಗರ್ಭಿತ ನುಡಿಗಟ್ಟುಗಳು ಇನ್ನೂ ಹಲವಾರು ಇವೆ. ಜಾಣರು ಕಟ್ಟಿದ ಇಂಥ ಮಾರ್ಮಿಕ ಮಾತುಗಳ ಜೊತೆಗೆ ತಿಂದಿದ್ದನ್ನು ಕಕ್ಕೋ ಮಹರಾಯ ಎಂದು ಸೇರಿಸಿದರೆ ತಪ್ಪಾಗುತ್ತದೆಯೆ...? ಇಲ್ಲ ಎನಿಸುತ್ತದೆ. ಕೃಷಿಗೆ ಸಂಬಂಧಿಸಿದಂತೆ ಸಂಸತ್‌ನ ಉಭಯ ಸದನಗಳಲ್ಲಿ ತಾನೇ ಅಂಗೀಕರಿಸಿಕೊಂಡ ಮಸೂದೆಗಳನ್ನು ಆಧರಿಸಿ ರೈತ ವಲಯದ ಮೇಲೆ ಹೇರಿದ ಮೂರು ಕಾಯ್ದೆಗಳನ್ನು "ಕ್ಷಮಾಯಾಚನೆ"ಯೊಂದಿಗೆ ಹಿಂತೆಗೆದುಕೊಂಡ ಕೇಂದ್ರ ಸರ್ಕಾರದ ಯಾನೆ ಪ್ರಧಾನಿ ನರೇಂದ್ರ ಮೋದಿಯವರ ವರ್ತನೆ ತಿಂದಿದ್ದನ್ನು ಕಕ್ಕೋ ಮಹರಾಯ ಎನ್ನುವಂತಿದೆ.

ಮಸೂದೆಗಳನ್ನು ಮಂಡಿಸುವುದಕ್ಕೆ ಮೊದಲೇ ಅದಕ್ಕೆ ಸಾಕಷ್ಟು ಪ್ರಚಾರ ಸಿಕ್ಕಿತ್ತು. ಆ ಜಾಡನ್ನು ಹಿಡಿದ ರೈತ ಸಮುದಾಯ ಸಂಸತ್ತು ಅದನ್ನು ಅಂಗೀಕರಿಸುವುದಕ್ಕೆ ಸಾಕಷ್ಟು ಮೊದಲೆ ಗಟ್ಟಿ ಧ್ವನಿಯಲ್ಲಿ ವಿರೋಧ ವ್ಯಕ್ತಪಡಿಸಿತ್ತು. ಉಭಯ ಸದನಗಳಲ್ಲಿ ಆಡಳಿತ ಪಕ್ಷ ಎನ್‌ಡಿಎ ಹೊರತಾಗಿಸಿ ಉಳಿದೆಲ್ಲ ಪಕ್ಷಗಳೂ ತಮ್ಮೊಳಗಿನ ಪರಸ್ಪರ ಕಹಿ ಮರೆತು ಪ್ರತಿರೋಧ ದಾಖಲಿಸಿದ್ದವು. ಆಡಳಿತ ಪಕ್ಷದ ಒಳಗೂ ಸರ್ಕಾರದ ನೀತಿಯನ್ನು ಸಹಿಸದ ಕೆಲವರು ಅನ್ನಲಾಗದೆ ಅನುಭವಿಸಲಾಗದೆ ಪರಪರ ಮೈಕೈ ಪರಚಿಕೊಂಡಿದ್ದೂ ಉಂಟು. ತನ್ನದು ಅರಣ್ಯ ರೋದನ ಎನಿಸಿದ್ದರೂ ಬಿಜೆಪಿ ಸಂಸದ ವರುಣ್ ಗಾಂಧಿ, ಈ ಕ್ರಮ ಸರಿಯಲ್ಲ ಎಂದು ಜೋರಾಗಿಯೆ ಹೇಳಿದ್ದರು. ಸದನದಿಂದ ಹೊರಗೆ ಸಮಾಜ ವಿಜ್ಞಾನಿಗಳು, ಕೃಷಿ ವಲಯದ ಹಿತ ಚಿಂತಕರು, ರೈತ ಮುಖಂಡರು ಒಕ್ಕೊರಳಿನಿಂದ ಮಸೂದೆಯನ್ನು ವಿರೋಧಿಸಿದ್ದರು. ಇದು ನರೇಂದ್ರ ಮೋದಿಯವರಿಗಾಗಲಿ, ಅವರ ನೇತೃತ್ವದ ಎನ್‌ಡಿಎ/ ಬಿಜೆಪಿ ಸರ್ಕಾರಕ್ಕಾಗಲಿ ಕೇಳಿಸಲಿಲ್ಲ. ಆನೆ ನಡೆದಿದ್ದೆ ದಾರಿ ಎಂಬ ಗಾದೆ ಮಾತನ್ನು ತನಗೆ ಆರೋಪಿಸಿಕೊಂಡ ಮೋದಿ ಯಾರ ಸಲಹೆ, ಟೀಕೆ, ವಿರೋಧ ಎದುರಾದರೂ ಪರಿಗಣನೆಗೆ ತೆಗೆದುಕೊಳ್ಳಲಿಲ್ಲ. ಟೀಕೆಗೆ, ವಿರೋಧಕ್ಕೆ ಕಾರಣವಾದ ಅಂಶಗಳತ್ತ ಮನಸ್ಸು ಕೊಡುವ ಬದಲಿಗೆ ವಂದಿಮಾಗಧರ ಬಹುಪರಾಕ್‌ಗೆ ಆದ್ಯತೆ ಕೊಟ್ಟರು.

ಸ್ವಾತಂತ್ರ್ಯಾನಂತರದ ಏಳೂವರೆ ದಶಕ ಅವಧಿಯಲ್ಲಿ ದೇಶದ ಉದ್ದಗಲಕ್ಕೆ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಚಳವಳಿ, ಆಂದೋಲನಗಳ ಮೂಲಕ ಜನರ ಆಕ್ರೋಶ ವ್ಯಕ್ತವಾಗಿದೆ. ಜನಮನದ ಅಭಿಪ್ರಾಯವೇನೇ ಇರಲಿ, ಅಂಥವಕ್ಕೆ ಸರ್ಕಾರಗಳು ಮರ್ಯಾದೆ ಕೊಟ್ಟ ಉದಾಹರಣೆಗಳು ಅಪರೂಪ. ಮತ್ತೊಂದು ವಿಪರ್ಯಾಸವೆಂದರೆ ಬಹುತೇಕ ಚಳವಳಿಗಳ ಅಂತಿಮ ಪರಿಣಾಮ ಸುಖಾಂತ್ಯದ ಬದಲಿಗೆ ದು:ಖಾಂತ್ಯವಾದುದು. ಸಾವಿರಾರು ಕೈಗಾರಿಕೆಗಳು ಚಳವಳಿ ಕಾರಣವಾಗಿಯೇ ಮುಚ್ಚಿಹೋಗಿದ್ದನ್ನು, ಲಕ್ಷಲಕ್ಷ ಕುಟುಂಬಗಳು ಬೀದಿ ಪಾಲಾಗಿದ್ದನ್ನು ನೆನಪು ಮಾಡಿಕೊಳ್ಳದಿದ್ದರೆ ಅದಕ್ಕಿಂತ ದೊಡ್ಡ ಆತ್ಮವಂಚನೆ ಇನ್ನೊಂದಿಲ್ಲ.ಒಂದು ಕೋನದಿಂದ ನೋಡಿದರೆ ಚಳವಳಿಗಳು, ರಹಸ್ಯ ಕಾರ್ಯಸೂಚಿಯೊಂದಿಗೆ ಉದ್ಯಮಗಳನ್ನು ನಡೆಸುವ ಆಡಳಿತ ಮಂಡಳಿಗಳಿಗೆ ವರರೂಪವಾಗಿ ನಡೆದುದೇ ಹೆಚ್ಚು.

ಇನ್ನು ಅನೇಕ ಚಳವಳಿಗಳು ಘೋಷಣೆಯಲ್ಲಿ ಕಾರ್ಮಿಕರ ಪರವಾಗಿದ್ದರೂ ಅವುಗಳ ಅಂತಿಮ ಫಲಿತವೆಂದರೆ ಉದ್ಯಮಗಳ ಬಾಗಿಲನ್ನು ಮುಚ್ಚಿಸುವುದು. ಈ ಮಾತಿಗೆ ಪಶ್ಚಿಮ ಬಂಗಾಳಾದಲ್ಲಿ ಮೂರೂವರೆ ದಶಕ ಆಡಳಿತ ನಡೆಸಿದ ಕಮ್ಯೂನಿಸ್ಟ್ ಸರ್ಕಾರದ "ದುಡಿಯುವ ವರ್ಗದ ಪರವಾದ" ನೀತಿಯನ್ನು ಉಲ್ಲೇಖಿಸಬಹುದು. ಅಲ್ಲಿ ಒಂದೊಂದಾಗಿ ಉದ್ಯಮದ ಬಾಗಿಲು ಮುಚ್ಚುತ್ತ ಹೋದಂತೆ ನಿರುದ್ಯೋಗ ಪರ್ವದ ಉದ್ದ ಹೆಚ್ಚುತ್ತ ಹೋಯಿತು. ಅಂತಿಮವಾಗಿ ಅದು ಆ ಸರ್ಕಾರದ ಬಲಿಯನ್ನೆ ಪಡೆಯಿತು. ಈ ಮಾತಿಗೆ ಪೂರಕವಾಗಿ ನಮ್ಮದೆ ರಾಜ್ಯದ ದಾವಣಗೆರೆಯಲ್ಲಿ ಹೇರಳ ಸಂಖ್ಯೆಯಲ್ಲಿದ್ದ ಬಟ್ಟೆ ಗಿರಣಿಗಳೆಲ್ಲವೂ ಶಾಶ್ವತವಾಗಿ ಬಂದ್ ಆಗಿದ್ದನ್ನು ನೆನಪು ಮಾಡಿಕೊಳ್ಳಬಹುದು. ದಾವಣಗೆರೆಯನ್ನು ಅದೊಂದು ಕಾಲದಲ್ಲಿ ಭಾರತದ ಮ್ಯಾಂಚೆಸ್ಟರ್ ಎಂದು ಹೆಮ್ಮೆಯಿಂದ ಕರೆಯಲಾಗುತ್ತಿತ್ತು. ಈಗ...?. ಚಳವಳಿಗಳ ಅಂತಿಮ ಗುರಿ ಯಾವ ಉದ್ದೇಶಕ್ಕಾಗಿ ಹೋರಾಟ ನಡೆಯುತ್ತಿರುತ್ತದೊ ಆ ಉದ್ದೇಶದ ಸಾಧನೆ. ಅದಾಗಲಿಲ್ಲ ಎನ್ನುವುದು ಭಾರತದ ಸಂದರ್ಭದಲ್ಲಿ ನಿಜವಾದ ಮಾತು. ಉದ್ದಕ್ಕೂ ವೈಫಲ್ಯದ ಸರಮಾಲೆಯನ್ನೇ ಕಂಡ ಭಾರತದ ಜನಪರ ಆಂದೋಲನ ಇದೀಗ ಗಟ್ಟಿತನದ ಚಳವಳಿಯನ್ನು ಛಲಗಾರ ರೈತರ ಮೂಲಕ ಕಂಡಿದೆ. ನಿಜ ಅರ್ಥದಲ್ಲಿ ಇದು ರೈತರ ಜಯ ಎನ್ನುವುದಕ್ಕಿಂತ ಜನತಂತ್ರದ ದಿಗ್ವಿಜಯವೇ ಆಗಿದೆ. ಉದ್ಯಮಗಳನ್ನು ಖಾಸಗೀಕರಣಗೊಳಿಸುವ ಸರ್ಕಾರದ ನೀತಿ ಈ ಹೊತ್ತು ಎಗ್ಗಿಲ್ಲದೆ ಅನುಷ್ಟಾನಕ್ಕೆ ಬರುತ್ತಿದೆ. ಚಳವಳಿಗಳು ಒಂದೋ ರಾಜಿ ಮಾಡಿಕೊಂಡಿವೆ ಇಲ್ಲವೇ ಕಾಲು ಕೈ ಮುರಿದುಕೊಂಡು ಬಿದ್ದಿವೆ.

ಕೃಷಿ ಮಸೂದೆಗಳನ್ನು ಸಂಸತ್‌ನ ಉಭಯ ಸದನಗಳು "ಅಂಗೀಕರಿಸಿ" ಕಾಯ್ದೆ ರೂಪು ಪಡೆದ ಬಳಿಕವೂ ಕೇಂದ್ರ ಸರ್ಕಾರ ಬಯಸಿದ ರೀತಿಯಲ್ಲಿ ಅದು ಅಮಲಿಗೆ ಬಾರದೆ ಇರುವುದಕ್ಕೆ ಸುಪ್ರೀಂ ಕೋರ್ಟ್ ನೀಡಿದ ತಡೆಯಾಜ್ಞೆ ಕಾರಣವಾಯಿತು. ತಾನು ತಡೆಯಾಜ್ಞೆ ನೀಡಿದ ಬಳಿಕವೂ ರೈತರ ಮುಷ್ಕರ ಮುಂದುವರಿದಿರುವುದಾದರೂ ಏಕೆ ಎಂಬ ಕೋರ್ಟ್ ಪ್ರಶ್ನೆಗೆ ಉತ್ತರ ಬರಲಿಲ್ಲ. ರೈತರ ಪ್ರಕಾರ ಕೋರ್ಟ್ ತಡೆಯಾಜ್ಞೆ ಶಾಶ್ವತವಲ್ಲ, ಇಂದಲ್ಲ ನಾಳೆ ಅದು ನಿವಾರಣೆಯಾಗುತ್ತದೆ. ಕಾಯ್ದೆಗಳನ್ನು ಹಿಂತೆಗೆದುಕೊಳ್ಳುವಂತೆ ಕೋರ್ಟ್ ಸರ್ಕಾರಕ್ಕೆ ಸೂಚಿಸಲಿಲ್ಲ. ಹಾಗಾಗಿ ನಾಳೆ ಏನಾದೀತೋ ಎಂಬ ಆತಂಕದ ಹಿನ್ನೆಲೆಯಲ್ಲಿ ರೈತಾಂದೋಲನ ಸತತಗೊಂಡಿತು.

ಸರ್ಕಾರದ ತುಟಿಯಂಚಿನ ಭರವಸೆ ನಂಬಿ ತಾತ್ಕಾಲಿಕವಾಗಿಯೇ ಆದರೂ ಸ್ಥಗಿತಗೊಂಡ ಅಥವಾ ಮುಂದೂಡಿದ ಯಾವ ಚಳವಳಿಗಳಿಗೂ ಮತ್ತೆ ಅದೇ ಮೊದಲಿನ ಕಾವು ಬಂದಿದ್ದು ಭಾರತದಲ್ಲಂತೂ ಅಪರೂಪ. ಈ ಮಾತಿಗೆ ಇತ್ತೀಚಿನ ನಿದರ್ಶನವೆಂದರೆ ಭ್ರಷ್ಟಾಚಾರ ನಿರ್ಮೂಲನದ ನಿಟ್ಟಿನಲ್ಲಿ ಅಣ್ಣಾ ಹಜಾರೆ ಆರಂಭಿಸಿದ ಚಳವಳಿ. ಚಳವಳಿಯ ಕಾವು ತನ್ನ ಕಾಲ ಬುಡಕ್ಕೆ ಬಂತೆನಿಸಿದ ಸಂದರ್ಭದಲ್ಲಿ ಎಚ್ಚೆತ್ತ ಸರ್ಕಾರ ಯೋಚಿಸಿದ್ದು ಅಣ್ಣಾ ಮುಂದಿಟ್ಟ ಬೇಡಿಕೆಗಳ ವಿಚಾರದಲ್ಲಲ್ಲ, ಬದಲಿಗೆ ಚಳವಳಿಯನ್ನು ಮುರಿಯುವುದು ಹೇಗೆಂಬ ವಿಚಾರದಲ್ಲಿ. ಅಂದಿದ್ದ ಪ್ರಧಾನಿ ಮನಮೋಹನ್ ಸಿಂಗ್ ನೇತೃತ್ವದ ಯುಪಿಎ ಸರ್ಕಾರ ತನ್ನ ಗುರಿಸಾಧನೆಯ ಯತ್ನದಲ್ಲಿ ನೂರಕ್ಕೆ ನೂರು ಅಂಕ ಪಡೆದು ಜಯ ಸಾಧಿಸಿತು. ಭ್ರಷ್ಟಾಚಾರದಿಂದ ನಲುಗಿ ಹೋಗಿದ್ದ ದೇಶವಾಸಿಗಳಲ್ಲಿ ಭರವಸೆಯ ಕನಸನ್ನು ಮೂಡಿಸಿದ್ದ ಅಣ್ಣಾ ಚಳವಳಿ ಆರಂಭಶೂರತ್ವ ಎಂಬ ಮೂದಲಿಕೆಗೆ ಈಡಾಯಿತು. ಇದು ನಮ್ಮ ಚಳವಳಿಗಳು ದಾರಿತಪ್ಪುವ ರೀತಿಗೆ ಒಂದು ಸಾಕ್ಷಿಗಲ್ಲು.

ಅಣ್ಣಾ ಚಳವಳಿಗೆ ಒದಗಿಬಂದ ದುರ್ದೆಸೆಗೆ ಹೋಲಿಸಿದರೆ ಪಂಜಾಬ್ ಹರ್ಯಾಣಾ ರೈತರು ವರ್ಷಕ್ಕೂ ಅಧಿಕ ಅವಧಿಗೆ ನಡೆಸಿದ ಮತ್ತು ಸಂಸತ್‌ನ ಉಭಯ ಸದನಗಳಲ್ಲಿ ಈ ಮೂರೂ ಕಾಯ್ದೆಗಳನ್ನು ವಿಧಿವತ್ತಾಗಿ ಹಿಂತೆಗೆದುಕೊಳ್ಳುವವರೆಗೂ ನಡೆಸಲುದ್ದೇಶಿಸಿರುವ ಮುಷ್ಕರ ಮತ್ತು ಅದಕ್ಕೆ ಕೇಂದ್ರದ ದೈತ್ಯ ಸರ್ಕಾರ ಮಣಿದುದು ಸ್ವತಂತ್ರ ಭಾರತದಲ್ಲಿ ಅಪರೂಪದಲ್ಲಿ ಅಪರೂಪದ್ದಾದ ಅಸಾಮಾನ್ಯ ಸಾಧನೆ. ಕೃಷಿ ಕಾಯ್ದೆ ವಿರೋಧಿಸಿ ನಡೆದ ರೈತರ ಮುಷ್ಕರಕ್ಕೆ ದೇಶದ ಬೇರೆ ಬೇರೆ ರಾಜ್ಯಗಳಿಂದಲೂ ರೈತರು ಮತ್ತು ರೈತ ಸಂಘಟನೆಗಳ ಬೆಂಬಲ ವ್ಯಕ್ತವಾಯಿತು. ದೇಶದ ಅನೇಕ ಕಡೆಗಳಲ್ಲಿ ಲೋಕಸಭೆಗೆ ವಿಧಾನ ಸಭೆಗೆ ನಡೆದ ಉಪ ಚುನಾವಣೆಯಲ್ಲೂ ರೈತಾಕ್ರೋಶ ಉಕ್ಕಿ ಹರಿದು ತಾನುಂಟೊ ಮೂರು ಲೋಕವುಂಟೊ ಎಂಬ ಅಹಮಿಕೆಯಲ್ಲಿ ಹೊರಟಿದ್ದ ಕೇಂದ್ರ ಸರ್ಕಾರಕ್ಕೆ ಬಿಸಿ ಮುಟ್ಟಿಸಿತು.

2022ರ ಆರಂಭಿಕ ದಿನಗಳಲ್ಲಿ ನಡೆಯಬೇಕಿರುವ ಉತ್ತರ ಪ್ರದೇಶ, ಪಂಜಾಬ್, ಉತ್ತರಾಖಂಡ, ಮಣಿಪುರ, ಗೋವಾ ವಿಧಾನ ಸಭೆ ಚುನಾವಣೆಗಳಿಗೆ ಇಷ್ಟರಲ್ಲೇ ಚುನಾವಣಾ ಆಯೋಗ ದಿನಾಂಕಗಳನ್ನು ಘೋಷಿಸಲಿದೆ. ಉತ್ತರ ಪ್ರದೇಶದಲ್ಲಿ 2017ರ ಚುನಾವಣೆಯಲ್ಲಿ ಒಟ್ಟು 403 ಕ್ಷೇತ್ರಗಳಲ್ಲಿ 312 ಕ್ಷೇತ್ರ ಗೆದ್ದಿದ್ದ ಬಿಜೆಪಿ/ ಎನ್‌ಡಿಎ ಈಗ ಬಹುದೊಡ್ಡ ಪ್ರತಿಕೂಲ ಅಲೆಯನ್ನು ಎದುರಿಸುತ್ತಿದೆ. ಆಡಳಿತ ವಿರೋಧಿ ಅಲೆಯಲ್ಲಿ ರೈತರು ನಡೆಸಿರುವ ಆಂದೋಲನವೂ ಸೇರಿ ಅದರ ತೀವ್ರತೆಯನ್ನು ಹೆಚ್ಚಿಸಿದೆ. ನರೇಂದ್ರ ಮೋದಿ ತೌರು ರಾಜ್ಯವಾಗಿರುವ ಗುಜರಾತ್ ಹಾಗೂ ಹಿಮಾಚಲ ಪ್ರದೇಶ ವಿಧಾನ ಸಭೆಗೆ 2022ರ ಕೊನೆಯಲ್ಲಿ ಚುನಾವಣೆ ನಡೆಯಬೇಕಿದೆ. 2022ರಲ್ಲಿ ಒಟ್ಟಾರೆ ಏಳು ರಾಜ್ಯ ವಿಧಾನ ಸಭಾ ಚುನಾವಣೆ ನಡೆಯಲಿದ್ದು 2024ರ ಲೋಕಸಭಾ ಚುನಾವಣೆಗೆ ಅದು ಮುನ್ನುಡಿ ಬರೆಯಲಿದೆ. ಮಾತ್ರವಲ್ಲ ರಾಷ್ಟ್ರಪತಿ, ಉಪ ರಾಷ್ಟ್ರಪತಿ ಚುನಾವಣೆಯೂ 2022ರಲ್ಲಿ ನಡೆಯಬೇಕಿದೆ. ಹಾಲಿ ರಾಷ್ಟ್ರಪತಿ ರಮಾನಾಥ ಕೋವಿಂದ್ ಹಾಗೂ ಉಪರಾಷ್ಟ್ರಪತಿ ಎಂ.ವೆಂಕಯ್ಯ ನಾಯ್ಡು ಪಕ್ಕಾ ಬಿಜೆಪಿಯವರು. ಅವರಿಬ್ಬರನ್ನೂ ಮತ್ತೊಂದು ಅವಧಿಗೆ ಮುಂದುವರಿಸುವ ಇರಾದೆ ಆಡಳಿತ ಪಕ್ಷದಲ್ಲಿ ಇದೆಯೊ ಇಲ್ಲವೊ ಇನ್ನೂ ಬಹಿರಂಗವಾಗಿಲ್ಲ. ಐದು ವರ್ಷದ ಹಿಂದೆ ಈ ಇಬ್ಬರದೂ ಆಯ್ಕೆ ನಿರ್ವಿಘ್ನವಾಗಿ ನಡೆದಿತ್ತು. ಈ ಆಯ್ಕೆಗೆ ಮತದಾರರಲ್ಲಿ ಹೆಚ್ಚಿನವರು ವಿಧಾನ ಸಭಾ ಸದಸ್ಯರೇ ಆಗಿರುವುದರಿಂದ ಏಳು ರಾಜ್ಯ ವಿಧಾನ ಸಭೆಯನ್ನು ಹೆಚ್ಚಿನ ಬಹುಮತದಲ್ಲಿ ಗೆಲ್ಲುವ ಒತ್ತಡ ಮೋದಿಯವರ ಮೇಲಿದೆ.

ಉತ್ತರ ಪ್ರದೇಶ ಮತ್ತು ಗುಜರಾತನ್ನು ಪುನಃ ಗೆಲ್ಲದೆ ಹೋದರೆ ಕೇಂದ್ರ ಸರ್ಕಾರವನ್ನು ಆತಂಕದ ಭೂತ ಬೆನ್ನು ಹತ್ತುತ್ತದೆ. ಉತ್ತರ ಪ್ರದೇಶವನ್ನು ಕೈವಶ ಮಾಡಿಕೊಂಡ ಪಕ್ಷ ಕೇಂದ್ರದಲ್ಲಿ ನಿರಾತಂಕ ಅಧಿಕಾರ ಸ್ಥಾಪಿಸುತ್ತದೆಂಬ ಮಾತು ಇದೆ. ತಮ್ಮ ಸರ್ಕಾರವನ್ನೂ ಮರ್ಯಾದೆಯನ್ನೂ ಉಳಿಸಿಕೊಳ್ಳುವುದಕ್ಕೆ ಉತ್ತರ ಪ್ರದೇಶವನ್ನು ಪುನಃ ಗೆಲ್ಲುವುದು ಮೋದಿ ಅಜೆಂಡಾ. ನಂತರದ ಹೆಜ್ಜೆ ಗುಜರಾತನ್ನು ಗೆಲ್ಲುವ ಮೂಲಕ ವ್ಯಕ್ತಿಗತವಾಗಿ ಮರ್ಯಾದೆಯನ್ನು ಪ್ರತಿಷ್ಠೆಯನ್ನೂ ಕಾಪಾಡಿಕೊಳ್ಳುವುದು. ಕೃಷಿ ಕಾಯ್ದೆಗಳನ್ನು ಹಿಂತೆಗೆದುಕೊಳ್ಳುವುದಾಗಿ ಮೋದಿ ಮಾಡಿರುವ ಘೋಷಣೆಯ ಹಿಂದಿರುವ ಅಸಲಿಯತ್ತು ಇದು. ಇದೇನೇ ಇರಲಿ; ಕಾರಣ ಮತ್ತು ರಾಜಕಾರಣದ ಆಚೆ ನಿಂತು ನೋಡುವುದಾದರೆ ಆತ್ಮಾವಲೋಕನಕ್ಕೆ ಮೋದಿ ಒಂದು ಹೆಜ್ಜೆ ಮುಂದಿಟ್ಟಿರುವುದು ಆರೋಗ್ಯಕರ ಪ್ರಜಾಪ್ರಭುತ್ವದ ದೃಷ್ಟಿಯಿಂದ ಸ್ವಾಗತಾರ್ಹ ಬೆಳವಣಿಗೆ.

ಸರ್ಕಾರ ತಪ್ಪು ಮಾಡುತ್ತದೆ; ಎಡವುತ್ತದೆ. ತಪ್ಪು ಮಾಡದ ಸರ್ಕಾರವನ್ನು ಭಾರತ ಇನ್ನೂ ಕಾಣಬೇಕಿದೆ. ಮೋದಿ ಸರ್ಕಾರವೂ ವಿವೇಚನೆ ಮರೆತು ಒಂದಲ್ಲ ಹಲವು ತಪ್ಪು ಮಾಡಿದೆ. ಕೃಷಿ ಕಾಯ್ದೆ ವಿಚಾರದಲ್ಲಿ ತಾನು ಮಾಡಿರುವ ತಪ್ಪು ಅದಕ್ಕೆ ಮನವರಿಕೆ (ಯಾವ ಕಾರಣಕ್ಕಾದರೂ ಸರಿ) ಆಗಿದೆ. 130 ಕೋಟಿಗೂ ಅಧಿಕ ಜನಸಂಖ್ಯೆಯುಳ್ಳ ದೇಶವೊಂದರ ಪ್ರಧಾನಿ ತಾನು ಮತ್ತು ತಾನು ನಡೆಸುವ ಸರ್ಕಾರ ತೆಗೆದುಕೊಂಡ ತಪ್ಪು ನಡೆಯ ವಿಚಾರದಲ್ಲಿ ದೇಶದ ರೈತರ ಮುಂದೆ ಬಹಿರಂಗ ಕ್ಷಮೆಯಾಚಿಸಿರುವುದು ಉತ್ತಮ ಬೆಳವಣಿಗೆ. ಮುಂದಿನ ದಿನಗಳಲ್ಲಿ ದುಡುಕಿನ ಆತುರದ ತೀರ್ಮಾನಗಳಿಗೆ ಬರುವ ಮುನ್ನ ಹಿಂದೆಮುಂದೆ ಯೋಚಿಸುವ ಪ್ರವೃತ್ತಿ ಜಾಗೃತವಾದೀತೇನೋ ಕಾದು ನೋಡಬೇಕಿದೆ.

ಇಲ್ಲಿ ಗಮನಿಸಬೇಕಾದ ಮುಖ್ಯ ಸಂಗತಿ ಎಂದರೆ ಪ್ರಧಾನಿಯಾದವರು ಕ್ಷಮಾಯಾಚನೆಗೆ ಮುಂದೆ ಬರದೆ ಹಿಂದೆಮುಂದೆ ನೋಡುತ್ತಾರೆ ಎನ್ನುವುದು. ಈ ಮಾತಿಗೆ ಅಪ್ಪಟ ಮತ್ತು ಸಾರ್ವಕಾಲಿಕ ಉದಾಹರಣೆ ಇಂದಿರಾ ಗಾಂಧಿ ಸರ್ಕಾರ ದೇಶದ ಮೇಲೆ ಎಪ್ಪತ್ತರ ದಶಕದಲ್ಲಿ ಹೇರಿದ ತುರ್ತುಪರಿಸ್ಥಿತಿ. 18 ತಿಂಗಳ ಕಾಲ ಇಡೀ ದೇಶ ಬಂದೀಖಾನೆಯಾಗಿತ್ತು. ಜೈಲಿನೊಳಗಿದ್ದವರಿಗೆ ಹೊರ ಪ್ರಪಂಚದ ಆಗು ಹೋಗು ತಿಳಿಯುತ್ತಿರಲಿಲ್ಲ. ಹೊರಗಿದ್ದವರಿಗೆ ಜೋರಾಗಿ ಉಸಿರಾಡಿಸಿದರೂ ಅಪಾಯವೇನೋ ಎಂಬಂಥ ಭಯ ಕಾಡಿತ್ತು. ಜಿ.ಬಿ. ಜೋಷಿಯವರ "ಸತ್ತವರ ನೆರಳು" ನಾಟಕದಲ್ಲಿ ಆಡುವ ಬಾಯಿ ಕಟ್ಟಿದರು, ಕೇಳುವ ಕಿವಿ ಕಟ್ಟಿದರು, ನೋಡುವ ಕಣ್ಣು ಮುಚ್ಚಿಸಿದರೆಂಬ ಮಾತು ಬರುತ್ತದೆ. ತುರ್ತುಪರಿಸ್ಥಿತಿಯ ಕರಾಳ ಕಾಲಘಟ್ಟ ನಮ್ಮ ಜನತಂತ್ರದ ಮೇಲೆ ಇಂಥ ಮಾಯವಾಗದ ಗಾಯದ ಕಲೆಯನ್ನು ಉಳಿಸಿಬಿಟ್ಟಿತು. ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ನಡೆಸಿದ ಸಮೀಕ್ಷೆ ಪ್ರಕಾರ ಕಾಂಗ್ರೆಸ್ ಮತ್ತೆ ಪ್ರಚಂಡ ಬಹುಮತದಿಂದ ಅಧಿಕಾರಕ್ಕೆ ಬರಬೇಕಿತ್ತು. ಆ ಸಮೀಕ್ಷೆಯನ್ನು ನಂಬಿಕೊಂಡ ಇಂದಿರಾಗಾಂಧಿ, ತುರ್ತುಪರಿಸ್ಥಿತಿಯನ್ನು ಹಿಂತೆಗೆದುಕೊಂಡು ಲೋಕಸಭೆಗೆ ಚುನಾವಣೆ ನಡೆಸಲು ನಿರ್ಧರಿಸಿದರು. ಫಲಿತಾಂಶ ಏನಾಯಿತೆನ್ನುವುದು ಎಲ್ಲರಿಗೂ ಗೊತ್ತಿದೆ. ಸಮೀಕ್ಷೆಯ ಪೊರೆ ಕವಿದಿದ್ದ ಇಂದಿರಾ ಕಣ್ಣಿಗೆ ವಾಸ್ತವ ಕಾಣಿಸಲಿಲ್ಲ. ತುರ್ತು ಪರಿಸ್ಥಿತಿ ಹೇರಿದ್ದಕ್ಕೆ ಕ್ಷಮೆ ಯಾಚಿಬೇಕೆಂಬ ಸುಬುದ್ಧಿ ಅವರಿಗೆ ಬರಲಿಲ್ಲ. ಹಾಗೇನಾದರೂ ದೇಶದ ಕ್ಷಮೆಯನ್ನು ಅವರು ಕೋರಿದ್ದರೆ ಕಾಂಗ್ರೆಸ್ಸು ಅಷ್ಟು ಹೀನಾಯ ಸೋಲು ಕಾಣುತ್ತಿರಲಿಲ್ಲ.ನರೇಂದ್ರ ಮೋದಿ ಅವರಿಗೆ ಈ ಇತಿಹಾಸದ ನೆನಪು ಚೆನ್ನಾಗಿಯೆ ಇದೆ. 5+2 ರಾಜ್ಯಗಳ ವಿಧಾನ ಸಭೆ ಚುನಾವಣೆ ಹೆಬ್ಬಾಗಿಲಲ್ಲಿ ನಿಂತಿರುವ ಹೊತ್ತಿನಲ್ಲಿ ಕ್ಷಮೆ ಎಂಬ ಒಂದು ಪದ ಮಾಡಬಹುದಾದ ಪವಾಡ ಏನು ಎನ್ನುವುದರ ಅರಿವು ಅವರಲ್ಲಿ ಜಾಗೃತವಾಗಿದೆ. ಆ ಕಾರಣವಾಗಿ ಕಾಯ್ದೆಗಳನ್ನು ಹಿಂತೆಗೆದುಕೊಳ್ಳುವ ಘೋಷಣೆ ಅವರಿಂದ ಬಂದಿದೆ. ದೇಶದ ರೈತರ ಕ್ಷಮೆಯಾಚಿಸಿರುವ ಮೋದಿ ಮಾತಿನಲ್ಲಿ ಇರಬಹುದಾದ ಸತ್ಯಪ್ರಜ್ಞೆಯ ಜಾಗೃತಾವಸ್ಥೆಯನ್ನೂ, ರಾಜಕಾರಣದ ಮಸಲತ್ತನ್ನೂ ಮುಂದಿನ ದಿನಗಳಲ್ಲಿ ದೇಶ ನೋಡಲಿದೆ.



# ರೈತರ ಪ್ರತಿಭ
# ಜೊತೆಗೆ ರಾ
# ಆಂತರಿಕ

● ಎಂ.ಡಿ.ದಿನೇಶ್ ರಾವ್

ಪ್ರಧಾನ ಮಂತ್ರಿ ನರೇಂದ್ರ ಮೋದಿ ಮೂರು ಕೃಷಿ ಕಾಯ್ದೆಗಳನ್ನು ವಾಪಾಸ್ ಪಡೆಯುವುದಾಗಿ ಘೋಷಿಸುತ್ತಿದ್ದಂತೆ ಒಂದು ರೀತಿ ಇದು ನಮ್ಮ ಗೆಲುವು ಎನ್ನುವ ರೀತಿಯಲ್ಲಿ ಕೆಲ ಪ್ರತಿಪಕ್ಷಗಳು ನೇರವಾಗಿ ಹೇಳದಿದ್ದರು ಅವರ ನಡವಳಿಕೆಗಳು ಮತ್ತು ಅವರ ಹೇಳಿಕೆಗಳಲ್ಲಿ ವ್ಯಕ್ತವಾಗಿತ್ತು. ಆದರೆ ಒಂದು ವರ್ಷದ ಸುದೀರ್ಘ ಪ್ರತಿಭಟನೆ ಮಾಡಿ ಐತಿಯಾಸಿಕವಾಗಿ ದಾಖಲೆ ಮಾಡಿದರ ರೈತರಿಗೆ ಈ ಗೆಲುವು ಎನ್ನುವುದು ಈ ದೇಶಕ್ಕೆ ಗೊತ್ತು.

ಈ ನಡುವೆ ಪ್ರತಿಪಕ್ಷಗಳು ಇದು ರೈತರ ಗೆಲುವು ಅವರ ಪ್ರತಿಭಟನೆಗೆ ಸಂದ ಜಯ ಎನ್ನುವ ಹೇಳಿಕೆ ನೀಡಿದರು ಆದರೆ ಇದರ ಹಿಂದೆ ರಾಜಕಾರಣವೂ ಅಡಗಿದೆ ಎನ್ನುವುದು ಬಹುಶಃ ಎಲ್ಲರಿಗೂ ತಿಳಿದ ವಿಷಯವೇ.

ರೈತರ ಹೋರಾಟದ ವೇದಿಕೆಯಿಂದ ದೂರವಿದ್ದರೂ, ಮನೆಗಳಿಂದ ಬೀದಿಗೆ ಸಂದೇಶವನ್ನು ಹರಡಿಸುವಲ್ಲಿ ವಿರೋಧ ಪಕ್ಷಗಳು ಮತ್ತು ನಾಯಕರ ನಿರಂತರ ಪ್ರಚಾರ ಹೇಗಿತ್ತು ಎನ್ನುವುದು ಒಂದಿಷ್ಟು ಕುತೂಹಲಕಾರಿ ಅಂಶವೆ.



ಒಂದು ಕಡೆ ರೈತರು ಬೀದಿಗಿಳಿದು ಈ ಕಾಯ್ದೆ ವಿರುದ್ಧ ಪ್ರತಿಭಟನೆಗಳನ್ನು ಮಾಡುತ್ತಿದ್ದರೆ ಇನ್ನೊಂದಡೆ ಪ್ರತಿಪಕ್ಷಗಳು ಈ ಕಾಯ್ದೆ ವಿರುದ್ಧ ಸಂಸತ್ ಕಲಾಪಗಳಲ್ಲಿ ಅದನ್ನು ತೀವ್ರ ವಿರೋಧ ವ್ಯಕ್ತಪಡಿಸಿದ್ದವು ಆಕ್ರೋಶ ವ್ಯಕ್ತಪಡಿಸಿದ್ದವು..ನಿರಂತರವಾಗಿ ಈ ಕಾಯ್ದೆಗಳ ವಿರುದ್ಧ ಪ್ರತಿಪಕ್ಷಗಳನ್ನು ಹಿಂಪಡಿಯುವಂತೆ ನಡೆಸಿದ ಹೇಳಿಕೆಗಳು ಮತ್ತು ಅಕ್ರೋಶಗಳು ಕಾರಣ ಇರಬಹುದಾ ಎನ್ನುವ ಅಂಶವೂ ಕೂಡ ಇಲ್ಲಿ ಪ್ರಸ್ತಾಪಿಸಲೇ ಬೇಕಾಗುತ್ತದೆ ಹೇಗೆ ಪ್ರತಿಪಕ್ಷಗಳ ಈ ನಡುವಳಿಕೆಗಳಿದ್ದವು ಹೇಗೆ ನಡೆದುಕೊಂಡವು ಎನ್ನುವುದು ಇಲ್ಲಿನ ಪ್ರಮುಖ ಪ್ರಸ್ತಾಪ ಮಾಡಲಾಗುತ್ತದೆ..

ಕೃಷಿ ಕಾನೂನುಗಳನ್ನು ಹಿಂಪಡೆಯಲು ಕಲಾಪಗಳಲ್ಲಿ ನಿರ್ಣಯಗಳನ್ನು ಅಂಗೀಕರಿಸುವುದರಿಂದ ಹಿಡಿದು ಸಂಸತ್ತಿನಲ್ಲಿ ಈ ವಿಷಯವನ್ನು ನಿರಂತರವಾಗಿ ಪ್ರಸ್ತಾಪಿಸಲಾಗಿತ್ತು. 2021ರ ಆರಂಭದಲ್ಲಿ ಲೋಕಸಭೆ ಮತ್ತು ರಾಜ್ಯಸಭೆಯ ಜಂಟಿ ಅಧಿವೇಶನದವರೆಗೆ ರಾಷ್ಟ್ರಪತಿಗಳ ಸಾಂಪ್ರದಾಯಿಕ ಭಾಷಣವನ್ನು ಬಹಿಷ್ಕರಿಸಲಾಗಿತ್ತು. ಕಳೆದ ಏಳು ವರ್ಷಗಳಲ್ಲಿ ಮೊದಲ ಬಾರಿಗೆ ಪ್ರತಿಪಕ್ಷಗಳು ಒಂದು ವಿಷಯದಲ್ಲಿ ಏಕತೆ ಪ್ರದರ್ಶಿಸಿದ್ದು, ಕಾನೂನು ಹೋರಾಟದಲ್ಲೂ ರೈತರಿಗೆ ವ್ಯಾಪಕ ಬೆಂಬಲವನ್ನು ವ್ಯಕ್ತಪಡಿಸಿದವು.

ಕಳೆದ 2020ರ ನವೆಂಬರ್.26ರಿಂದ ನವದೆಹಲಿಯ ಸಿಂಘು ಗಡಿ, ಟಿಕ್ರಿ ಗಡಿ ಮತ್ತು ಘಾಜಿಪುರ್ ಗಡಿ ಪ್ರದೇಶಗಳಲ್ಲಿ ರೈತರು ನಿರಂತರವಾಗಿ ಪ್ರತಿಭಟನೆ ನಡೆಸುತ್ತಿದ್ದಾರೆ. ಪಂಜಾಬ್, ಹರಿಯಾಣ, ಮತ್ತು ಉತ್ತರ ಪ್ರದೇಶದ ಸಾವಿರಾರು ರೈತರು ಕೃಷಿ ಕಾಯ್ದೆಗಳ ವಿರುದ್ಧ ಹೋರಾಟ ನಡೆಸಿದ್ದರು. ಉತ್ತರ ಭಾರತದಲ್ಲಿ ಪರಿಣಾಮಕಾರಿಯಾಗಿದ್ದ ಪ್ರತಿಭಟನೆಯು ಇಡೀ ದೇಶಕ್ಕೆ ವ್ಯಾಪಿಸಿದ್ದು ಹೇಗೆ ಎನ್ನುವುದು ಕತೂಹಲವಾಗಿದೆ.

## ರೈತ ಹೋರಾಟಕ್ಕೆ ಬೆಂಬಲವಾಗಿ ನಿಂತ ರಾಜಕೀಯ ಪಕ್ಷಗಳು

ಕಳೆದ ವರ್ಷ ಪಂಜಾಬ್‌ನಲ್ಲಿ ಮೂರು ದಿನಗಳ ಟ್ರ್ಯಾಕ್ಟರ್ ಮೆರವಣಿಗೆಯಲ್ಲಿ ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಭಾಗವಹಿಸಿದ್ದರು. ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಉತ್ತರ ಪ್ರದೇಶದಲ್ಲಿ ನಡೆದ ಕಿಸಾನ್ ಮಹಾಪಂಚಾಯತ್‌ಗಳನ್ನು ಉದ್ದೇಶಿಸಿ ಮಾತನಾಡಿದರು. ದೆಹಲಿ ಸೇರಿದಂತೆ ಉತ್ತರದ ರಾಜ್ಯಗಳಲ್ಲಿ ಪರಿಣಾಮಕಾರಿಯಾಗಿದ್ದ ಕೃಷಿ ಕಾಯ್ದೆ ಹೋರಾಟವನ್ನು ಇತರೆ ರಾಜ್ಯಗಳಿಗೆ ವ್ಯಾಪಿಸುವಲ್ಲಿ ಇತರೆ ರಾಜಕೀಯ ಪಕ್ಷಗಳು ಪ್ರಮುಖ ಪಾತ್ರ ವಹಿಸಿದವು. ತಮಿಳುನಾಡಿನಲ್ಲಿ ಡಿಎಂಕೆ, ಪಶ್ಚಿಮ ಬಂಗಾಳದಲ್ಲಿ ಟಿಎಂಸಿ, ಕೇರಳದಲ್ಲಿ ಎಡಪಕ್ಷಗಳು, ಉತ್ತರ ಪ್ರದೇಶದಲ್ಲಿ ಸಮಾಜವಾದಿ ಪಕ್ಷ ಮತ್ತು ಬಿಹಾರದಲ್ಲಿ ಆರ್‌ಜೆಡಿ ಪಕ್ಷಗಳು ರೈತರಿಗೆ ಬೆಂಬಲವಾಗಿ ನಿಂತವು.

## ಕೃಷಿ ಕಾಯ್ದೆ ವಾಪಸ್ ಬಗ್ಗೆ ರಾಹುಲ್ ಗಾಂಧಿ ಭವಿಷ್ಯ

ವಿವಾದಿತ ಕೃಷಿ ಕಾಯ್ದೆಗಳನ್ನು ಕೇಂದ್ರ ಸರ್ಕಾರ ವಾಪಸ್ ಪಡೆದುಕೊಳ್ಳುತ್ತದೆ ಎಂಬುದಾಗಿ ರಾಹುಲ್ ಗಾಂಧಿ ಭವಿಷ್ಯ ನುಡಿದಿದ್ದ ವಿಡಿಯೋ ವೈರಲ್ ಆಯಿತು. ತಮಿಳುನಾಡಿನ ಮಧುರೈನಲ್ಲಿ ರಾಹುಲ್ ಗಾಂಧಿ ಈ ಬಗ್ಗೆ ಹೇಳಿಕೆ ನೀಡಿದ್ದರು. ಪ್ರಧಾನಿ ಮೋದಿ ಅಧಿಕೃತವಾಗಿ ಕೃಷಿ ಕಾಯ್ದೆ ರದ್ದುಗೊಳಿಸುವ ಬಗ್ಗೆ ಘೋಷಿಸುತ್ತಿದ್ದಂತೆ ಈ ವಿಡಿಯೋ ವೈರಲ್ ಆಯಿತು. ರಾಹುಲ್ ಗಾಂಧಿ ಅವರ ವಿಡಿಯೋ ತುಣುಕಿನಲ್ಲಿ, "ರೈತರು ಮಾಡುತ್ತಿರುವ ಕೆಲಸದ ಬಗ್ಗೆ ನನಗೆ ತುಂಬಾ ಹೆಮ್ಮೆಯಿದೆ. ನಾನು ರೈತರನ್ನು ಸಂಪೂರ್ಣವಾಗಿ ಬೆಂಬಲಿಸುತ್ತೇನೆ, ಹಾಗೂ ಅವರೊಂದಿಗೆ ನಿಲ್ಲುತ್ತೇನೆ. ನನ್ನ ಮಾತುಗಳನ್ನು ಬರೆದಿಟ್ಟುಕೊಳ್ಳಿ, ಕೇಂದ್ರ ಸರ್ಕಾರವು ಕೃಷಿ ಕಾನೂನುಗಳನ್ನು ಹಿಂಪಡೆಯುತ್ತದೆ. ಈಗ, ನಾನು ಹೇಳಿದ್ದನ್ನು ನೆನಪಿಡಿ," ಎಂದು ರಾಹುಲ್ ಗಾಂಧಿ ಹೇಳಿದ್ದರು.

## ತಮಿಳುನಾಡಿನಲ್ಲಿ ಡಿಎಂಕೆ ಪ್ರಚಾರ

ತಮಿಳುನಾಡಿನಲ್ಲಿ ಕೃಷಿ ಕಾಯ್ದೆಗಳ ವಿರುದ್ಧದ ಹೋರಾಟ ಅಷ್ಟೊಂದು ಪರಿಣಾಮಕಾರಿ ಎನ್ನಿಸಲಿಲ್ಲ. ಆದರೆ ಕಳೆದ ವಿಧಾನಸಭಾ ಚುನಾವಣಾ ಪ್ರಣಾಳಿಕೆಯಲ್ಲಿ ಡಿಎಂಕೆ ಅಧಿಕಾರಕ್ಕೆ ಬಂದರೆ, ರಾಜ್ಯ ಸದನದಲ್ಲಿ ಕೃಷಿ ಕಾಯ್ದೆಗಳ ವಿರುದ್ಧ ನಿರ್ಣಯ ಅಂಗೀಕರಿಸುವುದಾಗಿ ಭರವಸೆ ನೀಡಿತ್ತು. ಚುನಾವಣೆ ನಂತರದಲ್ಲಿ ಗದ್ದುಗೆ ಏರಿದ ಡಿಎಂಕೆ ಸರ್ಕಾರವು ಆಗಸ್ಟ್ ತಿಂಗಳಿನಲ್ಲಿ ನಿರ್ಣಯವನ್ನು ಅಂಗೀಕರಿಸಿತ್ತು. ಪಶ್ಚಿಮ ಬಂಗಾಳ, ಪಂಜಾಬ್, ಛತ್ತೀಸ್‌ಗಢ, ದೆಹಲಿ, ರಾಜಸ್ಥಾನ ಮತ್ತು ಕೇರಳ ವಿಧಾನಸಭೆಯಲ್ಲಿ ಜನವರಿಯಲ್ಲಿ ಕೃಷಿ ಕಾನೂನುಗಳ ವಿರುದ್ಧ ನಿರ್ಣಯವನ್ನು ಅಂಗೀಕರಿಸಿಲಾಯಿತು.

## ಬಂಗಾಳದಲ್ಲಿ ಕೃಷಿ ಕಾಯ್ದೆಯೇ ಚುನಾವಣಾ ಪ್ರಮುಖ ವಿಷಯ

ಪಶ್ಚಿಮ ಬಂಗಾಳದಲ್ಲಿ ಯಾವುದೇ ರೀತಿ ಮಂಡಿ ವ್ಯವಸ್ಥೆಯನ್ನು ಹೊಂದಿಲ್ಲ. ಅಲ್ಲದೇ ಕೃಷಿ ಕಾಯ್ದೆಗಳ ವಿರುದ್ಧ ಅಷ್ಟೊಂದು ಪ್ರಭಾವಶಾಲಿಯಾದ ಪ್ರತಿಭಟನೆಗೂ ರಾಜ್ಯದಲ್ಲಿ ನಡೆದಿರಲಿಲ್ಲ. ಅದಾಗ್ಯೂ, ರಾಜ್ಯ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ವಿರುದ್ಧ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಯವರು ಇದೇ ಕೃಷಿ ಕಾಯ್ದೆಗಳನ್ನು ಅಸ್ತ್ರವಾಗಿ ಬಳಸಿಕೊಂಡರು. ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ಬಹುಮತ ಪಡೆದ ನಂತರದಲ್ಲಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಯವರು, ಭಾರತೀಯ ಕಿಸಾನ್ ಒಕ್ಕೂಟದ ಮುಖ್ಯಸ್ಥ ರಾಕೇಶ್ ಟಿಕಾಯತ್ ರನ್ನು ಭೇಟಿ ಮಾಡಿ ಸಮಾಲೋಚನೆ ನಡೆಸಿದರು.





## ಕೃಷಿ ಕಾಯ್ದೆ ವಾಪಸ್ ಪಡೆಯಲು ಚುನಾವಣೆ ಭೀತಿ ಕಾರಣ

ಪ್ರಧಾನಮಂತ್ರಿ ನರೇಂದ್ರ ಮೋದಿಯವರು ತೆಗೆದುಕೊಂಡ ನಿರ್ಧಾರವು ಮುಂದಿನ ವರ್ಷದ ವಿಧಾನಸಭೆ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಬಂದಿದೆ ಎಂದು ಅನೇಕ ವಿರೋಧ ಪಕ್ಷದ ನಾಯಕರು ದೂಷಿಸುತ್ತಿದ್ದಾರೆ. ಮುಖ್ಯವಾಹಿನಿಯಲ್ಲಿ ಗುರುತಿಸಿಕೊಂಡ ರಾಜಕೀಯ ವಿರೋಧಿಗಳ ನೇತೃತ್ವ ಇಲ್ಲದಿದ್ದರೂ ನಿರಂತರ ಆಂದೋಲನಗಳಿಂದ ಸರ್ಕಾರವನ್ನು ಹಿಮ್ಮೆಟ್ಟಿಸಲು ಸಾಧ್ಯ ಎಂಬುದನ್ನು ಮನಸ್ಸಿಗೆ ತೆಗೆದುಕೊಳ್ಳಲು ಸಾಧ್ಯವಾಗುತ್ತಿಲ್ಲ.

"ಪ್ರಜಾಸತ್ತಾತ್ಮಕ ಪ್ರತಿಭಟನೆಗಳಿಂದ ಏನನ್ನು ಸಾಧಿಸಲು ಸಾಧ್ಯವಿಲ್ಲವೋ ಅದನ್ನು ಮುಂಬರುವ ಚುನಾವಣೆಗಳ ಭಯದಿಂದ ಸಾಧಿಸಬಹುದು! ಮೂರು ಕೃಷಿ ಕಾಯ್ದೆಗಳನ್ನು ಹಿಂತೆಗೆದುಕೊಳ್ಳುವ ಕುರಿತು ಪ್ರಧಾನ ಮಂತ್ರಿಯವರ ಘೋಷಣೆಯು ನೀತಿಯ ಬದಲಾವಣೆ ಅಥವಾ ಮನಸಿನಿಂದ ಪ್ರೇರಿತವಾಗಿಲ್ಲ. ಇದು ಚುನಾವಣೆ ಭಯದಿಂದ ಪ್ರೇರೇಪಿಸಲ್ಪಟ್ಟಿದೆ," ಎಂದು ಹಿರಿಯ ಕಾಂಗ್ರೆಸ್ ನಾಯಕ ಪಿ ಚಿದಂಬರಂ ಟ್ವೀಟ್ ಮಾಡಿದ್ದಾರೆ.

## ಬಿಜೆಪಿಗೆ ಅಶುಭ ಸಂಕೇತಗಳನ್ನು ರವಾನಿಸಿದ ಕಾರ್ಯಕರ್ತರು

ಲೋಕಸಭೆಯಲ್ಲಿ ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ಮಾತನಾಡಿ, "ಹಿಂದಿ ಹೃದಯಭಾಗದಲ್ಲಿರುವ ರಾಜ್ಯಗಳಲ್ಲಿ ತನ್ನ ತಳಮಟ್ಟದ ಕಾರ್ಯಕರ್ತರಿಂದ ಬಿಜೆಪಿಗೆ "ಅಶುಭ ಸಂಕೇತಗಳು" ಬರುತ್ತಿವೆ. ಇದರಿಂದಾಗಿ ಕೃಷಿ ಕಾನೂನುಗಳನ್ನು ಹಿಂತೆಗೆದುಕೊಳ್ಳುವಂತೆ ಒತ್ತಾಯಿಸಿದೆ. ಹೀಗೆ ಮುಂದುವರಿದರೆ ಅವರಿಗೆ ಉಳಿಗಾಲವಿಲ್ಲ ಎಂಬುದನ್ನು ಅರಿತುಕೊಂಡಿದ್ದಾರೆ." ಈ ನಿರ್ಧಾರ ಮೋದಿಯ ನೈತಿಕ ಸೋಲು ಎಂದು ಚೌಧರಿ ಹೇಳಿದ್ದಾರೆ.

ರಾಜ್ಯಸಭೆಯಲ್ಲಿ ಕಾಂಗ್ರೆಸ್ ಉಪ ನಾಯಕ ಆನಂದ್ ಶರ್ಮಾ ಅವರು ಮಾತನಾಡಿ, "ಕಾನೂನು ರಚಿಸುವಾಗ
ಸಂಸತ್ತಿನ ಪರಿಶೀಲನೆಯನ್ನು ಹಾ
ಮಾಡುವುದರ ಪರಿಣಾಮಗಳನ್ನು
ಅರಿತುಕೊಂಡಿರಬೇಕು," ಎಂದರು.
ಜಾರಿಗೊಳಿಸುವಾಗ ಶಾಸಕಾಂಗ
ಪರಿಶೀಲನೆಯನ್ನು ಬೈಪಾಸ್ ಮಾ
ಯಾವಾಗಲೂ ಉದ್ವಿಗ್ನತೆ ಮತ್ತು
ಸಂಘರ್ಷವನ್ನು ಉಂಟುಮಾಡುತ್ತ
ಎಂದು ಈಗ ಅರಿವಾಗುತ್ತದೆ"
ಎಂದು ತಿಳಿಸಿದ್ದಾರೆ.

## ಕೃಷಿಕಾಯ್ದೆಗಳ ಒಳಮರ್ಮಗಳೇನು..?

ಈಗ ಕೇಂದ್ರ ಸರ್ಕಾರ ವಾಪಸ
ಪಡೆಯುತ್ತಿರುವ ಮೂರು ಕರಾಳ
ಕಾಯ್ದೆಗಳೂ ಅಸಾಂವಿಧಾನಿಕವಾ
2020ರಲ್ಲಿ ಜಾರಿಯಾಗಿದ್ದವು. ರೈತ
ಉತ್ಪಾದನೆ ವ್ಯಾಪಾರ ಮತ್ತು ವಾಣಿ
ಉತ್ತೇಜನ ಮತ್ತು ಸೌಲಭ್ಯ) ಮಸ
(ಸಬಲೀಕರಣ ಮತ್ತು ಸಂರಕ್ಷಣೆ)
ಸೇವೆಗಳ ಒಪ್ಪಂದ 2020, ಅಗತ್ಯ
ಮಸೂದೆ 2020, ಈ ಮೂರೂ
ಚರ್ಚೆಗೊಳಗಾಗದೆ, ಧ್ವನಿ ಮತದ
ದೇಶ ಕೋವಿಡ್ ಸಂಕಷ್ಟದ ನಡು
ಈ ಕರಾಳ ಶಾಸನಗಳನ್ನೂ ಜಾರಿ
ಸರ್ಕಾರದ ಅಸೂಕ್ಷ್ಮತೆ ಮತ್ತು ಪ್ರ
ಜನವಿರೋಧಿ ಧೋರಣೆಯ ಸಂಕೇ
ಕಾಯ್ದೆಗಳನ್ನು ಜಾರಿಗೊಳಿಸುವ ವ
ಆದಾಯವನ್ನು ದುಪ್ಪಟ್ಟು ಮಾಡಲ
ಸರ್ಕಾರದ ಭರವಸೆಗೆ ಯಾವುದೇ
ಇರಲಿಲ್ಲ.

ತಮ್ಮ ಕೃಷಿ ಭೂಮಿಯ ಮೇಲ
ತಾವು ಉತ್ಪಾದಿಸುವ ಆಹಾರ ಪದ
ಮೂಲಭೂತ ಹಕ್ಕುಗಳನ್ನೇ ಕಳೆದು
ತಮ್ಮ ಆದಾಯ ದುಪ್ಪಟ್ಟಾಗುತ್ತದೆ
ನಂಬುವುದಾದರೂ ಹೇಗೆ ? ಈ

# ಟನೆ ಜೊತೆ ಜಕಾರಣದ ಕ ಪಾತ್ರ



ೂ ಚರ್ಚೆಯನ್ನು
ಸರ್ಕಾರ ಈಗ
"ಕಾನೂನುಗಳನ್ನು
ಡುವುದು
ದೆ
ಕೃಷಿ
ಗಿ
ರ
ಜ್ಯ (
ೂದೆ 2020, ರೈತರ
ಬೆಲೆ ಖಾತರಿ ಮತ್ತು ಕೃಷಿ
ವಸ್ತುಗಳ (ತಿದ್ದುಪಡಿ)
ಕಾಯ್ದೆಗಳು ಸಂಸತ್ತಿನಲ್ಲಿ
ಮೂಲಕ ಜಾರಿಯಾಗಿದ್ದವು.
ವೆ ಸಿಲುಕಿದ್ದ ಸಂದರ್ಭದಲ್ಲೇ
ೊಳಿಸಿದ್ದು, ಕೇಂದ್ರ
ಜಾತಂತ್ರ ವಿರೋದಿ–
ೀತವಾಗಿತ್ತು. ಈ
ೂಲಕ ರೈತರ
ಾಗುತ್ತದೆ ಎಂಬ ಮೋದಿ
ವೈಜ್ಞಾನಿಕ ತಳಹದಿಯೂ
, ವ್ಯವಸಾಯದ ಮೇಲೆ,
ಾರ್ಥಗಳ ಮೇಲೆ ತಮ್ಮ
ಕೊಳ್ಳುವ ರೈತರು
ಎಂಬ ಭರವಸೆಯನ್ನು
ಕುರಿತು ಒಂದು ಸ್ಪಷ್ಟ



ನೀಲನಕ್ಷೆಯನ್ನು ಜನತೆಯ ಮುಂದಿಡುವಲ್ಲೂ ಮೋದಿ ಸರ್ಕಾರ ವಿಫಲವಾಗಿತ್ತು. ಭಾರತದ ಕೃಷಿ ವ್ಯವಸ್ಥೆಯನ್ನು ಅಮೂಲಾಗ್ರವಾಗಿ ಅಧ್ಯಯನ ಮಾಡಿ, ಸಣ್ಣ ಮತ್ತು ಅತಿಸಣ್ಣ ರೈತರ, ಭೂ ಹಿಡುವಳಿದಾರರ ಉನ್ನತಿಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳುವಂತೆ ಶಿಫಾರಸು ಮಾಡಿದ್ದ ಸ್ವಾಮಿನಾಥನ್ ಆಯೋಗದ ವರದಿಯನ್ನು ಮೂಲೆಗುಂಪು ಮಾಡಿದ್ದ ಕೇಂದ್ರ ಸರ್ಕಾರ, ಕಾರ್ಪೋರೇಟ್ ಔದ್ಯಮಿಕ ಹಿತಾಸಕ್ತಿಗಳಿಗೆ ಅನುಕೂಲಕರವಾಗುವಂತಹ ಬಂಡವಾಳ ಸ್ನೇಹಿ ಕೃಷಿ ನೀತಿಯನ್ನು ಜಾರಿಗೊಳಿಸಲು ಮುಂದಾಗಿದ್ದರಿಂದಲೇ, ದೇಶದ ದೊಡ್ಡ ರೈತರೂ ಸಹ ದಂಗೆಯೇಳುವಂತಾಗಿತ್ತು.

ರೈತರ ಉತ್ಪಾದನೆ ವ್ಯಾಪಾರ ಮತ್ತು ವಾಣಿಜ್ಯ ( ಉತ್ತೇಜನ ಮತ್ತು ಸೌಲಭ್ಯ) ಮಸೂದೆ 2020 ಮೆಲ್ನೋಟಕ್ಕೆ ರೈತ ಸ್ನೇಹಿಯಾಗಿಯೇ ಕಾಣುವಂತಹುದು. ರೈತನಿಗೆ ತನ್ನ ಫಸಲನ್ನು ಮಾರಾಟ ಮಾಡಲು ಎಪಿಎಂಸಿ/ ಮಂಡಿಗಳಿಂದಾಚೆಗೂ ಮುಕ್ತ ಅವಕಾಶ ದೊರೆಯುತ್ತದೆ, ಇದು ರೈತನಿಗೆ ಉತ್ತಮ ಬೆಲೆ ಪಡೆಯಲು ನೆರವಾಗುತ್ತದೆ ಮತ್ತು ತನ್ನ ಬೆಳೆಯನ್ನು ಬೇಕಾದಂತೆ ಮಾರಾಟ ಮಾಡುವ ಮುಕ್ತ ಸ್ವಾತಂತ್ರ್ಯ ದೊರೆಯುತ್ತದೆ ಎನ್ನುವುದು ಸರ್ಕಾರದ ವಾದವಾಗಿತ್ತು . ಮೇಲ್ನೋಟಕ್ಕೆ ಇದು ರೈತ ಸ್ನೇಹಿಯಾಗಿ ಕಾಣುವುದು ಸಹಜ. ಶ್ರಮವಹಿಸಿ ತಾನು ಬೆಳೆದ ಫಸಲನ್ನು ಎಪಿಎಂಸಿ ಮಾರುಕಟ್ಟೆಯಲ್ಲಿ ನಿಗದಿತ ಬೆಲೆಗೆ ಮಾರಾಟ ಮಾಡುವುದರ ಬದಲು, ಇನ್ನೂ ಹೆಚ್ಚಿನ ಬೆಲೆ ನೀಡುವ ವ್ಯಾಪಾರಿಗಳಿಗೆ ಮಾರಾಟ ಮಾಡಬಹುದು ಎಂಬ ಆಶಾಭಾವನೆಯನ್ನು ಈ ಕಾಯ್ದೆ ಮೂಡಿಸುತ್ತದೆ. ಆದರೆ ವಾಸ್ತವ ಹಾಗಾಗುವುದಿಲ್ಲ. ಕನಿಷ್ಠ ಬೆಂಬಲ ಬೆಲೆ ಇಲ್ಲದೆ, ಮಾರುಕಟ್ಟೆಯಲ್ಲಿ ಬಿಕರಿಯಾಗುವ ಸರಕುಗಳ ಮೇಲೆ ಕಾರ್ಪೋರೇಟ್ ನಿಯಂತ್ರಿತ ಔದ್ಯಮಿಕ ಒಕ್ಕೂಟ ತನ್ನ ಹಿಡಿತ ಸಾಧಿಸಿರುತ್ತದೆ. ಕಾರ್ಪೋರೇಟ್ ಮಾರುಕಟ್ಟೆಯ ಅಗತ್ಯತೆಗಳಿಗೆ ಅನುಸಾರವಾಗಿ ಬೆಲೆಯೂ ನಿರ್ಧಾರವಾಗುತ್ತದೆ. ಇದರಿಂದ ರೈತ ತನ್ನ ಬೆಳೆಯ ಮೇಲಿನ ಸ್ವಾಯತ್ತತೆ ಮತ್ತು ಸ್ವಾತಂತ್ರ್ಯ ಎರಡನ್ನೂ ಕಳೆದುಕೊಂಡು, ಮಾರುಕಟ್ಟೆ ಶಕ್ತಿಗಳ ಕೈಗೊಂಬೆಯಾಗುತ್ತಾನೆ.

ಎಪಿಎಂಸಿ ಮಾದರಿಯಲ್ಲಿ ಹಲವಾರು ಲೋಪಗಳಿವೆ. ದಲ್ಲಾಳಿಗಳ ಹಾವಳಿ ಹೆಚ್ಚಾಗಿದೆ. ರೈತರು ಶೋಷಣೆಗೊಳಗಾಗುತ್ತಿದ್ದಾರೆ. ಹಲವಾರು ಸಂದರ್ಭಗಳಲ್ಲಿ ರೈತರಿಗೆ ದಕ್ಕಬೇಕಾದ ಬೆಲೆ ದಕ್ಕುವುದಿಲ್ಲ. ಇವೆಲ್ಲವೂ ವ್ಯವಸ್ಥೆಯ ಲೋಪಗಳು, ರಾಜಕೀಯ ಭ್ರಷ್ಟಾಚಾರದ ಪರಿಣಾಮ. ಇದನ್ನು ಸರಿಪಡಿಸುವ ಮಾರ್ಗಗಳನ್ನೂ ಸ್ವಾಮಿನಾಥನ್ ಆಯೋಗ ಸೂಚಿಸಿದೆ. ಕನಿಷ್ಠ ಬೆಂಬಲ ಬೆಲೆಯನ್ನು ಕಟ್ಟುನಿಟ್ಟಾಗಿ ಪಾಲಿಸಿ ಪರಿಷ್ಕರಣೆಯಾಗುತ್ತಿದ್ದರೆ ಎಪಿಎಂಸಿಗಳಲ್ಲಿ ಸಮಸ್ಯೆಯೇ ಉದ್ಭವಿಸುದಿಲ್ಲ. ಉತ್ತರ ಭಾರತದಲ್ಲಿ ಪ್ರಚಲಿತವಾಗಿರುವ ಮಂಡಿ ಪದ್ಧತಿಯು ಎಪಿಎಂಸಿಯ ನಿಯಮಗಳಿಗೆ ಒಳಪಡದಿದ್ದರೂ, ಈ ಮಂಡಿಗಳಲ್ಲಿ ರೈತರಿಗೆ ಚೌಕಾಸಿ ಮಾಡುವ ಆಯ್ಕೆ ಇರುತ್ತದೆ. ಹಲವಾರು ಸಂದರ್ಭಗಳಲ್ಲಿ ಮಂಡಿ ವರ್ತಕರು ಸಣ್ಣ ಮತ್ತು ಅತಿಸಣ್ಣ ರೈತರಿಗೆ ಹಣಕಾಸು ನೆರವನ್ನೂ ನೀಡುವುದುಂಟು. ಇದು ಪಾರಂಪರಿಕ ಮಾರುಕಟ್ಟೆ ವ್ಯವಸ್ಥೆಯಲ್ಲಿ ಅನೂಚಾನವಾಗಿ ಅನುಸರಿಸಿಕೊಂಡು ಬಂದಿರುವ ಒಂದು ಪದ್ಧತಿ. ಈ ಪದ್ಧತಿಯೊಳಗಿನ ನ್ಯೂನತೆಗಳನ್ನು, ಲೋಪಗಳನ್ನು ಸರಿಪಡಿಸಲು ಸೂಕ್ತ ಕಾನೂನು ಕ್ರಮಗಳನ್ನು ಕೈಗೊಂಡಲ್ಲಿ ರೈತರ ಲಾಭಾಂಶ ಮತ್ತು ಆದಾಯ ತಂತಾನೇ ಹೆಚ್ಚಾಗುತ್ತದೆ. ಆದರೆ ಹೊಸ ಕಾಯ್ದೆಯನ್ನು ಜಾರಿಗೊಳಿಸುವ ಮೂಲಕ ಕೇಂದ್ರ ಸರ್ಕಾರ " ಸ್ನಾನದ ನೀರಿನೊಟ್ಟಿಗೆ ಮಗುವನ್ನೂ ಎತ್ತಿ ಬಿಸಾಡುವ " ನೀತಿಯನ್ನು ಅನುಸರಿಸಲು ಮುಂದಾಗಿದೆ.



ರೈತರ (ಸಬಲೀಕರಣ ಮತ್ತು ಸಂರಕ್ಷಣೆ) ಬೆಲೆ ಖಾತರಿ ಮತ್ತು ಕೃಷಿ ಸೇವೆಗಳ ಒಪ್ಪಂದ 2020, ಇದು ಮೊದಲನೆಯ ಕಾಯ್ದೆಯ ಒಂದು ಕೊಂಡಿಯಾಗಿ, ಆ ಕಾಯ್ದೆಯ ನಿಯಮಗಳಿಗೆ ಪೂರಕವಾಗಿ ಜಾರಿಯಾಗುವಂತಹ ಒಂದು ಶಾಸನ. ರೈತರ ಸಬಲೀಕರಣ ಮತ್ತು ಸಂರಕ್ಷಣೆಯ ವ್ಯಾಖ್ಯಾನವೇ ಇಲ್ಲಿ ದೋಷಪೂರಿತವಾಗಿರುವುದನ್ನು ಗಮನಿಸಬೇಕಿದೆ. ರೈತರಿಗೆ ಬೆಲೆ ಖಾತರಿಯಾಗಬೇಕಿರುವುದು ಸರ್ಕಾರದಿಂದಲೇ ಹೊರತು ಮಾರುಕಟ್ಟೆ ಶಕ್ತಿಗಳಿಂದಲ್ಲ. ಈ ಕಾಯ್ದೆಯ ಅನುಸಾರ ರೈತರು ತಾವು ಮಾರಾಟ ಮಾಡುವ ತಮ್ಮ ವ್ಯವಸಾಯೋತ್ಪನ್ನಗಳಿಗೆ ನಿಗದಿತ ದರದೊಂದಿಗೆ ಖರೀದಿದಾರರೊಡನೆ ಪೂರ್ವ ನಿರ್ಧಾರಿತ ಒಪ್ಪಂದಕ್ಕೆ ಕಡ್ಡಾಯ ಮಾಡಬೇಕಾಗುತ್ತದೆ. ಈಗಿರುವ ಮಂಡಿ ಅಥವಾ ಎಪಿಎಂಸಿ ಪದ್ಧತಿಯಿಂದಾಚೆಗೆ ಮುಕ್ತಮಾರುಕಟ್ಟೆಯಲ್ಲಿ ಆಹಾರೋತ್ಪನ್ನಗಳನ್ನು, ವ್ಯವಸಾಯೋತ್ಪನ್ನಗಳನ್ನು ಖರೀದಿಸುವ ವ್ಯಾಪಾರಿಗಳು ನಿಗದಿಪಡಿಸುವ ದರಕ್ಕೆ ರೈತರು ಮುಂಚೆಯೇ ಕರಾರು ಒಪ್ಪಂದಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಇಲ್ಲಿ ಕನಿಷ್ಠ ಬೆಂಬಲ ಬೆಲೆಗೆ ಮಾನ್ಯತೆ ಇಲ್ಲದಿರುವುದರಿಂದ ಖರೀದಿದಾರ ಉದ್ಯಮಿಗಳು, ಅಂದರೆ ಮೂಲತಃ ಕಾರ್ಪೋರೇಟ್ ವ್ಯಾಪಾರಿ ಉದ್ಯಮಿಗಳು ನಿಗದಿಪಡಿಸುವ ಬೆಲೆಗಳಿಗೆ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡುವ ಒತ್ತಡಕ್ಕೆ ರೈತರು ಒಳಗಾಗುತ್ತಾರೆ.

ಇಲ್ಲಿ ರೈತರಿಗೆ ಫಸಲು ಮಾರಾಟ ಮಾಡುವ ಮುಕ್ತ ಅವಕಾಶ ದೊರೆಯುತ್ತದೆಯಾದರೂ, ಅವರು ಮಾರುಕಟ್ಟೆಯ ಬಂಧಿಯಾಗಿರುತ್ತಾರೆ. ವ್ಯವಸಾಯೋತ್ಪನ್ನಗಳ ಬೆಲೆಯನ್ನು ಜಾಗತಿಕ ಮಾರುಕಟ್ಟೆ ನಿರ್ಧರಿಸುತ್ತದೆ. ಪೂರ್ವನಿರ್ಧಾರಿತ ದರದಲ್ಲಿ ಮಾರುವಾಗ ರೈತರು ತಮ್ಮ ಲಾಭಾಂಶವನ್ನು ಲೆಕ್ಕಿಸದೆ, ಕೈಸುಟ್ಟುಕೊಳ್ಳಬೇಕಾಗುತ್ತದೆ. ಸಹಜವಾಗಿಯೇ ಸರ್ಕಾರ ಅನುಸರಿಸುತ್ತಿರುವ ಮಾರುಕಟ್ಟೆ ಆರ್ಥಿಕ ನೀತಿಗಳ ವಾತಾವರಣದಲ್ಲಿ ರಿಲೈಯನ್ಸ್, ವಾಲ್ಮಾರ್ಟ್, ಅಂಬಾನಿ, ಅದಾನಿಯಂತಹ ಕಾರ್ಪೋರೇಟ್ ಕುಳಗಳು ಕೃಷಿಮಾರುಕಟ್ಟೆಗೆ ದಾಂಗುಡಿಯಿಡುತ್ತಾರೆ. ಈ ಜಾಗತಿಕ ಮಾರುಕಟ್ಟೆಯ ಪ್ರತಿನಿಧಿಗಳು ಭಾರತದ ಬಡ ರೈತನ ಮೇಲೆ ನೇರವಾದ ಹಿಡಿತ ಸಾಧಿಸುತ್ತಾರೆ. ಶೇ 85ರಷ್ಟು ಸಣ್ಣ ರೈತರನ್ನೇ ಹೊಂದಿರುವ ಭಾರತದಲ್ಲಿ ಇದು ರೈತ ಸಮುದಾಯದ ವಿನಾಶಕ್ಕೆ ಎಡೆಮಾಡಿಕೊಡುತ್ತದೆ. ಕೆಲವೇ ದೊಡ್ಡ ರೈತರಿಗೆ ಇದು ನೆರವಾಗಬಹುದಾದರೂ, ಸಣ್ಣ ಹಿಡುವಳಿದಾರರು, ತಮ್ಮ ಕುಟುಂಬ ನಿರ್ವಹಣೆಗಾಗಿ ವ್ಯವಸಾಯ ಮಾಡುವ ರೈತಾಪಿ ಕುಟುಂಬಗಳು ಬೀದಿ ಪಾಲಾಗುತ್ತವೆ.

ಇದು ಒಂದು ರೀತಿಯಲ್ಲಿ ಗುತ್ತಿಗೆ ಕೃಷಿ ಆಗಿದ್ದು, ಗುತ್ತಿಗೆಯ ಕರಾರಿನಂತೆ ರೈತರು ಪೂರೈಕೆ ಮಾಡಬೇಕಾಗುತ್ತದೆ. ಈ ವಹಿವಾಟುಗಳಲ್ಲಿನ ಯಾವುದೇ ಕುಂದುಕೊರತೆಗಳನ್ನು ಸರ್ಕಾರವೇ ನೇಮಿಸುವ ಒಂದು ಸಮಿತಿ ಅಥವಾ ಉಪವಿಭಾಗೀಯ ಮ್ಯಾಜಿಸ್ಟ್ರೇಟ್ ಮಟ್ಟದಲ್ಲಿ ನಿವಾರಿಸಬಹುದೇ ಹೊರತು, ರೈತನಿಗೆ ಅನ್ಯ ಮಾರ್ಗಗಳಿರುವುದಿಲ್ಲ. ರೈತರಿಗೆ ನ್ಯಾಯಾಂಗದ ಮೊರೆ ಹೋಗುವ ಅವಕಾಶವನ್ನೂ ನೀಡಲಾಗುವುದಿಲ್ಲ. ಸಹಜವಾಗಿಯೇ ಬಂಡವಾಳಶಾಹಿಗಳ ಹಿಡಿತಕ್ಕೆ ಇಡೀ ಕೃಷಿ ಮಾರುಕಟ್ಟೆಯನ್ನು ಒಪ್ಪಿಸಿದಂತಾಗುತ್ತದೆ. ತಾನು ಬೆಳೆದ ಬೆಳೆಯನ್ನು ರೈತನು ಗುತ್ತಿಗೆದಾರರನಿಗೆ ನಿಗದಿತ ದರದಲ್ಲಿ, ನಿಗದಿತ ಗುಣಮಟ್ಟದಲ್ಲಿ ಮಾರಾಟ ಮಾಡಬೇಕಾಗುತ್ತದೆ. ಸರಕನ್ನು ತಿರಸ್ಕರಿಸುವ ಹಕ್ಕು ಗುತ್ತಿಗೆದಾರರಿಗೆ ಸಹಜವಾಗಿಯೇ ಇರುತ್ತದೆ. ಗುಣಮಟ್ಟದ ಕಾರಣಗಳಿಂದಾಗಿ ತಿರಸ್ಕೃತವಾಗುವ ವ್ಯವಸಾಯೋತ್ಪನ್ನಗಳು ಸಹಜವಾಗಿಯೇ ಮಾರುಕಟ್ಟೆಯಲ್ಲಿ ಮೌಲ್ಯ ಕಳೆದುಕೊಳ್ಳುತ್ತವೆ. ಈ ಕಾಯ್ದೆ ಮೂಲತಃ ರೈತಾಪಿಯನ್ನು ಗುಲಾಮಗಿರಿಗೆ ತಳ್ಳುವ ಒಂದು ಪ್ರಯತ್ನವೇ ಆಗಿರುವುದನ್ನು ಅಲ್ಲಗಳೆಯಲಾಗುವುದಿಲ್ಲ.



ಅಗತ್ಯ ವಸ್ತುಗಳ (ತಿದ್ದುಪಡಿ) ಮಸೂದೆ 2020, ಇದು ರೈತರಿಗಷ್ಟೇ ಅಲ್ಲದೆ ಇಡೀ ಜನತೆಯ ಬದುಕಿಗೆ ಸವಾಲಾಗುವಂತಹ ಒಂದು ಕಾಯ್ದೆಯಾಗಿದೆ. ಈ ಮುನ್ನ ಅಗತ್ಯ ಸರಕುಗಳ ಕಾಯ್ದೆಯಡಿ ಕೆಲವು ನಿತ್ಯ ಬಳಕೆಯ ಆಹಾರ ಪದಾರ್ಥಗಳನ್ನು ದಾಸ್ತಾನು ಮಾಡುವುದಕ್ಕೆ ನಿಬಂಧನೆಗಳಿದ್ದವು. ಸರ್ಕಾರದ ಗೋದಾಮುಗಳಲ್ಲಿ ಅಥವಾ ಸರ್ಕಾರದಿಂದ ಪರವಾನಗಿ ಪಡೆದಿರುವ ಗೋದಾಮುಗಳಲ್ಲಿ ಮಾತ್ರವೇ ಈ ಪದಾರ್ಥಗಳನ್ನು ದಾಸ್ತಾನು ಮಾಡಲು ಅವಕಾಶವಿತ್ತು. ಹಾಗೂ ದಾಸ್ತಾನು ಮಾಡುವ ಸರಕುಗಳ ಪ್ರಮಾಣದ ಮೇಲೂ ನಿರ್ಬಂಧಗಳಿತ್ತು. ನಿಗದಿತ ಪ್ರಮಾಣವನ್ನು ಮೀರಿ ದಾಸ್ತಾನು ಮಾಡುವುದು ಕಾನೂನುಬಾಹಿರವಾಗಿತ್ತು. ಖಾದ್ಯತೈಲ, ಈರುಳ್ಳಿ, ಆಲೂಗಡ್ಡೆ ಮುಂತಾದ ನಿತ್ಯ ಬಳಕೆಯ ವಸ್ತುಗಳು ಈ ಕಾಯ್ದೆಯ ವ್ಯಾಪ್ತಿಗೊಳಪಡುತ್ತವೆ. ಆಲೂಗಡ್ಡೆ ಮಾರುಕಟ್ಟೆಯನ್ನು ಚಿಪ್ಸ್ ತಯಾರಿಕೆಯ ಉದ್ಯಮಗಳ ಒತ್ತಡಕ್ಕೆ ಮಣಿದು ಮುಕ್ತಗೊಳಿಸಿದ್ದರಿಂದ ಉಂಟಾದ ವ್ಯತಿರಿಕ್ತ ಪರಿಣಾಮವನ್ನು ಈಗಾಗಲೇ ರೈತರು ಅನುಭವಿಸಿದ್ದಾರೆ. ಈ ಕಾಯ್ದೆಯನ್ನು ಜಾರಿಗೊಳಿಸಿದರೆ, ಯಾವ ಪದಾರ್ಥವೂ ಸಹ ನಿರ್ಬಂಧಕ್ಕೊಳಗಾಗುವುದಿಲ್ಲ. ದಾಸ್ತಾನು ಪ್ರಮಾಣದ ಮೇಲೂ ನಿರ್ಬಂಧ ಇರುವುದಿಲ್ಲ. ಈರುಳ್ಳಿ ಮತ್ತು ಖಾದ್ಯ ತೈಲಗಳು ಖಾಸಗಿ, ಕಾರ್ಪೋರೇಟ್ ಮಾರುಕಟ್ಟೆ ಶಕ್ತಿಗಳ ವಶಕ್ಕೊಳಪಟ್ಟು, ಖಾಸಗಿ ವಲಯದ ಗೋದಾಮುಗಳಲ್ಲಿ ಅನಿಯಂತ್ರಿತವಾಗಿ ಸಂಗ್ರಹವಾಗುತ್ತವೆ.

ಈ ಕಾಯ್ದೆಯನ್ನು ಜಾರಿಗೊಳಿಸುವ ಮುನ್ನವೇ ಅಂಬಾನಿ ಮೊದಲಾದ ಕಾರ್ಪೋರೇಟ್ ಉದ್ಯಮಿಗಳು ಶೀತಲಾಗಾರಗಳನ್ನು, ಬೃಹತ್ ಪ್ರಮಾಣದ ದಾಸ್ತಾನು ಗೋದಾಮುಗಳನ್ನು ನಿರ್ಮಿಸಿರುವುದು ವರದಿಯಾಗಿದೆ. ಮಾರುಕಟ್ಟೆಯ ಬೆಲೆಗಳಿಗೆ ಅನುಗುಣವಾಗಿ ಆಹಾರ ಪದಾರ್ಥಗಳು ಬಿಡುಗಡೆಯಾಗುತ್ತವೆ. ವ್ಯವಸಾಯೋತ್ಪನ್ನಗಳ ಮತ್ತು ಆಹಾರ ಪದಾರ್ಥಗಳನ್ನು ತಮ್ಮಿಚ್ಚೆಯಂತೆ ದಾಸ್ತಾನು ಮಾಡಿ, ತಮ್ಮ ಲಾಭಕ್ಕೆ ತಕ್ಕಂತಹ ಬೆಲೆಗಳಿಗೆ ಮಾರುಕಟ್ಟೆಯಲ್ಲಿ ಪೂರೈಸಲು ಕಾರ್ಪೋರೇಟ್ ಉದ್ಯಮಿಗಳಿಗೆ ಮುಕ್ತ ಅವಕಾಶ ದೊರೆಯುತ್ತದೆ. ಇದರಿಂದ ಮಾರುಕಟ್ಟೆ ಶಕ್ತಿಗಳು ಕೃತಕ ಅಭಾವ ಸೃಷ್ಟಿಸಿ, ಬೆಲೆಗಳನ್ನು ಬೇಕಾಬಿಟ್ಟಿ ಏರಿಸುವ ಅವಕಾಶವೂ ಉದ್ಯಮಿಗಳಿಗೆ ಲಭ್ಯವಾಗುತ್ತದೆ.




● 12ನೇ ಪುಟಕ್ಕೆ...

# ಡೆಡ್ಲಿ ಚಂಡಮಾರುತಕ್ಕೆ ದಕ್ಷಿಣ ಭಾರತ ತತ್ತರ, ವಿಜ್ಞಾನಿಗಳಿಗೆ ಸಿಗುತ್ತಿಲ್ಲ ಉತ್ತರ..!

● ಪರಶಿವ ಧನಗೂರು

ಪ್ರಚಂಡ ಚಂಡಮಾರುತ..! ದಕ್ಷಿಣ ಭಾರತದ ಮೇಲೇಕೆ ಮುರಿದುಕೊಂಡು ಬಿದ್ದಿವೆ ಈ ಡೆಡ್ಲಿ ಚಂಡಮಾರುತಗಳು?ವಿಶ್ವ ಭೂಪಟದಲ್ಲಿ ಹಲವು ನಗರಗಳು ನಾಪತ್ತೆ ಯಾಗುವ ಕಾಲ ಬಂದೇ ಬಿಡ್ತಾ? ಭಾರತದ ಹನ್ನೆರಡು ಪ್ರಮುಖ ನಗರಗಳು ಈ ಶತಮಾನದಂತ್ಯಕ್ಕೆ ಸಮುದ್ರದೊಳಗೆ ಮುಳುಗಿಹೋಗಬಹುದು ಎಚ್ಚರಾ! ಎಂದು ನಾಸಾ ವಿಜ್ಞಾನಿಗಳು ಹೇಳಿದ್ದು ಯಾಕೆ?

ದಕ್ಷಿಣ ಭಾರತದ ರಾಜ್ಯಗಳಾದ ಕರ್ನಾಟಕ, ಆಂದ್ರ ಪ್ರದೇಶ, ಕೇರಳ, ತೆಲಂಗಾಣ, ತಮಿಳು ನಾಡುಗಳನ್ನು ಜಲಪ್ರಳಯ ದಲ್ಲಿ ಮುಳುಗಿಸಿ ತೇಲಿಸುತ್ತಿರುವ ಈ 'ವಾಟರ್ ವೈರಸ್!' ಗೆ ಪ್ರಬಲವಾದ ಕಾರಣವೇನೆಂಬುದನ್ನು ಕಂಡುಕೊಳ್ಳಲು ನಮ್ಮ ವಿಜ್ಞಾನಿಗಳು ತಲೆಕೆಡಿಸಿಕೊಂಡು ಕುಳಿತಿದ್ದಾರೆ. ಅಲ್ಲಲ್ಲಿ ರೆಡ್ ಅಲರ್ಟ್, ಆರೆಂಜ್ ಅಲರ್ಟ್,



ಯಲ್ಲೊ ಅಲರ್ಟ್, ಹೈ ಅಲರ್ಟ್ ಘೋಷಿಸುವುದನ್ನು ಬಿಟ್ಟು ಬೇರೇನನ್ನೂ ಮಾಡುವ ಪರಿಸ್ಥಿತಿಯಲ್ಲಿ ಅವರಿಲ್ಲ! ಸಂಶೋಧನೆಗೇ ನಿಲುಕದೆ ಭಾರತೀಯ ವಿಜ್ಞಾನಿಗಳನ್ನೇ ಗೊಂದಲಕ್ಕೆ ದೂಡಿರುವ ಈ ಅಕಾಲಿಕ ಚಂಡಮಾರುತಳಿಗೆ, ಬಂಗಾಳಕೊಲ್ಲಿಯಲ್ಲಿ ಪದೆ ಪದೇ ಉಂಟಾಗುತ್ತಿರುವ ವಾಯುಭಾರ ಕುಸಿತಕ್ಕೆ ನಿಜವಾದ ವೈಜ್ಞಾನಿಕ ಕಾರಣಕ್ಕಾಗಿ ವಿಜ್ಞಾನಿಗಳ ತಂಡವೇ ಹಗಲು ರಾತ್ರಿ ನಿದ್ದೆಗೆಟ್ಟು ಸಂಶೋಧನೆಗಿಳಿದಿದೆ!

## ದಾಖಲೆ ಮಳೆಗೆ ಸಂತೋಷವೇ ಇಲ್ಲ

ಈ ಶತಮಾನದ ದಾಖಲೆ ಮಳೆಯೆಂದು ಸಂತೋಷ ಪಡುವ ಪರಿಸ್ಥಿತಿಯಲ್ಲಿ ದಕ್ಷಿಣ ಭಾರತದ ಜನರಂತೂ ಇಲ್ಲ. ಎರಡು ಸಾವಿರಕ್ಕೂ ಹೆಚ್ಚಿನ ಕೆರೆಕುಂಟೆಗಳು ಹಲವಾರು ವರ್ಷಗಳ ನಂತರ ತುಂಬಿ, ಹರಿದು ಕೋಡಿ ಬಿದ್ದು, ಬಾಗಿನ ಅರ್ಪಸಲು ನಿಂತವರ ಕಣ್ಣಲ್ಲು ಕಣ್ಣೆರು ತರಿಸುತ್ತಿರುವ, ಎಡೆಬಿಡದೆ ಸುರಿಯುತ್ತಿರುವ, ಈ ಅಕಾಲಿಕ ಮಳೆ ಮಾರುತದಿಂದ ಲಕ್ಷಾಂತರ ಜನರು ಮನೆಕಳೆದುಕೊಂಡು ಬೀದಿಪಾಲಾಗಿ, ಊರಿಗೂರೇ ಮುಳುಗಿಹೋಗಿ, ನಿರಾಶ್ರಿತರಾಗಿ ಗಂಜಿ ಕೇಂದ್ರ ಸೇರಿದ್ದಾರೆ. ಸಾವಿರಾರು ಜನರು ಸಾವನ್ನಪ್ಪಿದ್ದು ನೂರಾರು ಮಂದಿ ನಾಪತ್ತೆಯಾಗಿದ್ದಾರೆ! ದಕ್ಷಿಣ ಭಾರತದ ನಾಲ್ಕು ರಾಜ್ಯಗಳ ರೈತರು ಲಕ್ಷಾಂತರ ಹೆಕ್ಟೇರ್ ಪ್ರದೇಶದಲ್ಲಿ ಬೆಳೆದಿದ್ದ ತರಕಾರಿ, ಭತ್ತ,ರಾಗಿ, ಈರುಳ್ಳಿ ಜೋಳ, ಶೇಂಗಾ ಮೆಣಸು, ಕಾಫಿ ಬೇಳೆಯ ಪಸಲು ನೀರುಪಿಲಾಗಿ ಹಲವಾರು ರೈತರು ಆತ್ಮಹತ್ಯೆ



ಮಾಡಿಕೊಂಡಿದ್ದಾರೆ! ಬರದಿಂದ ತತ್ತರಿಸಿ 'ಹುಯ್ಯೋ ಹುಯ್ಯೋ ಮಳೆರಾಯ! ಹೂವಿನ ತೋಟಕ್ಕೆ ನೀರಿಲ್ಲ!' ಎಂದು ಹಾಡುತ್ತಾ ಕೂಗುತ್ತಿದ್ದ ಜನರೆ ಈಗ 'ನಿಲ್ಲೋ ನಿಲ್ಲೋ ನಿನ್ ಮನೆಕಾಯ! ಮಳೆರಾಯ! ನಿನ್ನಿಂದ ಬೆಳೆಯೆಲ್ಲಾ ಹಾಳಾದೋ!' ಎನ್ನುತ್ತಿದ್ದಾರೆ. ವರ್ಷದಿಂದ ಬೆವರು ಹರಿಸಿ ಬೆಳೆದ ಬೆಳೆಗೆ ಜಲ ದಿಗ್ಬಂಧನ! ಗದ್ದೆಯಲ್ಲೆ ಮೊಳಕೆಯೊಡೆದು ಕೊಳೆತುಹೋದ ಪಸಲು! ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ! ರೈತರ ಗೋಳು ಕೇಳೋರು ಯಾರು? ಮುಂದೆ ಗಗನಕ್ಕೇರುವ ತರಕಾರಿ, ಆಹಾರಧಾನ್ಯಗಳ ಬೆಲೆಗೆ ಹೊಣೆಯಾರು? ಈಗಾಗಲೇ ಕೊರೋನಾ ಆಲೆಗಳ ಕಾಟದಿಂದ ಮಾನಸಿಕವಾಗಿ, ದೈಹಿಕವಾಗಿ ಜರ್ಜರಿತರಾಗಿ, ಆರ್ಥಿಕವಾಗಿ ಕುಸಿದು ಹೋಗಿದ್ದ ಜನರಿಗೆ ಈಗ ಮಹಾ ಮೇಘಸ್ಫೋಟದ ಹೊಡೆತ! ಋತುವೆಲ್ಲ ಹಿಂದೆ ಮುಂದೆ ಆಗುತ್ತಿದೆಯೇನೋ ಎಂಬ ಗೊಂದಲದಲ್ಲಿರುವ ಜನರು ಈಗ ಎಲ್ಲೆಡೆ ಸುರಿಯುತ್ತಿರುವ ಧಾರಾಕಾರ ಮಳೆಗೆ ತತ್ತರಿಸಿ ಹೋಗುತ್ತಿದ್ದಾರೆ. ಹಲವಾರು ನಗರಗಳಲ್ಲಿ ಮನೆಗಳಿಗೆ ನೀರು ನುಗ್ಗಿದೆ. ಮನೆಗಳು, ಶಾಲೆಗಳು, ಆಸ್ಪತ್ರೆಗಳು ಕುಸಿದುಬಿದ್ದಿವೆ! ಅಭಿವೃದ್ಧಿಯ ಮುಖವಾಡ ಧರಿಸಿ ನಿಂತಿದ್ದ ಸಿಟಿಯ ಹೈವೇ ರಸ್ತೆಗಳಲ್ಲಿ ಹಳ್ಳಗುಂಡಿ ಬಿದ್ದು, ಎದೆಮಟ್ಟ ನೀರು ಬಂದು, ನಡುರಸ್ತೆಯಲ್ಲೇ ವಾಹನಗಳು ಸವಾರರ ಸಮೇತ ತೇಲುತ್ತಾ ಹಳ್ಳಸೇರುತ್ತಿವೆ!

## ಇಲಾಖೆ ಎಚ್ಚರಿಕೆನೀಡಿ ಸುಸ್ತು..!

ಬಾರೀ ಮಳೆಯಾಗಲಿದೆ! ಇನ್ನೆರಡು ದಿನ ಕರಾವಳಿ ತೀರದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಳೆಯಾಗುವ ಸಂಭವವಿದೆ!ಎಂದು ಹವಾಮಾನ ಇಲಾಖೆ ಎಚ್ಚರಿಕೆ ನೀಡಿ ನೀಡಿ ಸುಸ್ತಾಗಿದೆ. ವರುಣನ ಆರ್ಭಟಕ್ಕೆ ಹೆದರಿದ ಕೆಲವು ರಾಜ್ಯಗಳ ಸರ್ಕಾರಗಳು ಸರ್ಕಾರಿ ರಜೆ ಘೋಷಿಸಿವೆ! ಸಮುದ್ರ ತೀರದ ಕರಾವಳಿ ನಗರಗಳಲ್ಲಿ ರಾಷ್ಟ್ರೀಯ ವಿಪತ್ತು ನಿರ್ವಹಣೆ ಪರಿಹಾರ ಪಡೆ 'ಜನರು ತಮಗೆ ಬೇಕಾದ ಅಗತ್ಯ ಆಹಾರ ಸಾಮಗ್ರಿಗಳನ್ನು ದಾಸ್ತಾನು ಮಾಡಿ!' ಎಂಬ ಸಂದೇಶ ಹೊರಡಿಸುವುದೊಂದು ಬಾಕಿ ಇದೆ. ಆಂದ್ರ ಕರಾವಳಿಯಿಂದ ಹೊರಟ ಮಳೆಯ ಮಾರುತಗಳು ತಿರುಪತಿಯ ಬೆಟ್ಟಕ್ಕೆ ಬಡಿದು ನದಿಯಾಗಿ ಧುಮುಕುತ್ತಿವೆ! ಬೆಟ್ಟಗಳು ಕುಸಿದು, ಮರಗಳು ದರೆಗುರುಳಿ ರಸ್ತೆಗಳೇ ನಾಪತ್ತೆಯಾಗಿವೆ! ತಮಿಳು ನಾಡಿನ ಇಪ್ಪತ್ತಕ್ಕೂ ಹೆಚ್ಚಿನ ಜಿಲ್ಲೆಗಳಲ್ಲಿ ಈಗಲೂ ರೆಡ್ ಅಲರ್ಟ್ ಘೋಷಿಸಲಾಗಿದೆ. ಮಾರುಕಟ್ಟೆ ವ್ಯಾಪಾರಸ್ಥರು, ಕೂಲಿಕಾರ್ಮಿಕರು ದುಡಿಮೆಯಿಲ್ಲದೆ ಪರಿತಪಿಸುವಂತಾಗಿದೆ. ಜನರಿಗೆ ಕೆಮ್ಮು ಶೀತ ನೆಗಡಿ ಜಾಸ್ತಿ ಆಗಿ ಎಲ್ಲೆಡೆ ವೈರಲ್ ಜ್ವರದ ಲಕ್ಷಣಗಳು ಗೋಚರಿಸುತ್ತಿವೆ! ಮತ್ತೊಂದೆಡೆ ಕೊರೋನಾ ರೂಪಾಂತರಿ ಹೊಸ ವೈರಸ್ ಆತಂಕ ಮನೆಮಾಡಿದೆ. ಇಷ್ಟೆಲ್ಲಾ ಆವಾಂತರಗಳಿಗೆ ಕಾರಣ ವರುಣ! ಕಳೆದ ಹತ್ತು ದಿನಗಳಿಂದ ಸುರಿಯುತ್ತಿರುವ ವರುಣನ ಆರ್ಭಟಕ್ಕೆ ಇಡೀ ದಕ್ಷಿಣ ಭಾರತವೇ ತತ್ತರಿಸಿ ತರಗುಟ್ಟಿಹೋಗಿದೆ! ಈಗ ಹೊಸರೀತಿಯ ಆರ್ಥಿಕ ಸಂಕಷ್ಟಕ್ಕೆ, ಸವಾಲಿಗೆ ಸರ್ಕಾರಗಳು ಸಿದ್ದರಾಗಬೇಕಿದೆ. ಮುಂದೆ ಈ ವಿಧ್ವಂಸಕ ಚಂಡಮಾರುಗಳ ಸರಣಿ ಅಟ್ಯಾಕ್ ಮುಂದುವರಿಯುವ ಮುನ್ನೆಚ್ಚರಿಕೆಗಳನ್ನು ಹವಾಮಾನ ಇಲಾಖೆ ತಿಳಿಸಿ ಎಚ್ಚರಿಸುತ್ತಿದೆ. ಈಗ ಆಗಿರುವ ಲಕ್ಷಾಂತರ ಹೆಕ್ಟೇರ್ ಪ್ರದೇಶದ ಆಹಾರ ಬೆಳೆಗಳ ನಾಶದ ಪರಿಣಾಮವಾಗಿ ಬೆಲೆಗಳೂ ಗಗನಮುಟ್ಟುವ ಸಂಭವ ಹೆಚ್ಚಾಗಿದೆ. ಆಹಾರ ಸಾಮಗ್ರಿಗಳ ಕೊರತೆಯನ್ನು ಸರ್ಕಾರವೇ ಸರಿದೂಗಿಸಬೇಕಾದ ಪ್ರಮೇಯ ಬರಬಹುದು. ಇಂತಹ ವಿಷಮ ಘಳಿಗೆಗೆ ದೂಡುತ್ತಿರುವ ಡೆಡ್ಲಿ ಸೈಕ್ಲೋನ್ ಗಳ ಬಗ್ಗೆ ನಾವು ಸರಿಯಾದ ವೈಜ್ಞಾನಿಕ ಮಾಹಿತಿಯನ್ನು ಇಟ್ಟುಕೊಂಡು ಮುಂದಿನ ದಿನಗಳಲ್ಲಿ ಈ ಹವಾಮಾನ ವೈಪರೀತ್ಯಗಳನ್ನು ಸರಿಪಡಿಸಿಕೊಳ್ಳದಿದ್ದರೆ, ಭಾರೀ ಬೆಲೆಯನ್ನೇ ಭಾರತೀಯರಾದ ನಾವು ತೆರಬೇಕಾಗುತ್ತದೆ.

## ಆಗಸ್ಟ್ ತಿಂಗಳಲ್ಲೇ ಎಚ್ಚರಿಕೆ ನೀಡಲಾಗಿತ್ತು

ಕಳೆದ ಆಗಸ್ಟ್ ತಿಂಗಳಲ್ಲೇ ನಾಸಾ ವಿಜ್ಞಾನಿಗಳು, 757ತಜ್ಞರು ಹೇಳಿದ್ದ ಜಲಪ್ರಳಯದ



ಕರಾಳ ಸತ್ಯವನ್ನು, ಭಾರತದ ವಿಜ್ಞಾನಿಗಳು, ಸರ್ಕಾರಗಳು ಗಂಭೀರವಾಗಿ ಪರಿಗಣಿಸಬೇಕು. ಇತ್ತೀಚೆಗೆ ಸಮುದ್ರದ ಮೇಲಾಗುತ್ತಿರುವ ಅಸಾಮಾನ್ಯ ಹವಾಮಾನ ಬದಲಾವಣೆ ಗಳಿಂದ, ಸಾಗರದ ಮೇಲೆ ನಡೆಯುತ್ತಿರುವ ಉಬ್ಬರಮಿಳಿತಗಳ ಚಲನಲನಗಳಿಂದ, ಮುಂಬರುವ ದಿನಗಳಲ್ಲಿ ಕರಾವಳಿ ಕಡಲ ತೀರದ ರಾಜ್ಯಗಳು ಹೆಚ್ಚಿನ ಚಂಡಮಾರುತ, ಪ್ರವಾಹ, ಅನಾವ್ರಷ್ಠಿಗೆ ತುತ್ತಾಗುವ ಅಪಾಯಕ್ಕೆ ಸಿಲುಕಬೇಕಾಗುತ್ತದೆಂದು ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಟ್ರಾಫಿಕಲ್ ಮೆಟ್ರಾಲಜಿಯ ಹವಾಮಾನ ಇಲಾಖೆ ವಿಜ್ಞಾನಿಗಳೇ ಹೇಳುತ್ತಿದ್ದಾರೆ! ಈ ಶತಮಾನದ ಒಳಗೆ ಎಚ್ಚೆತ್ತು ಕೊಳ್ಳದಿದ್ದರೇ ಭಾರತಕ್ಕೆ ಗಂಡಾಂತರ ಎದುರಾಗಲಿದೆ ಎಂದು ವಿಶ್ವಸಂಸ್ಥೆಯ ವರದಿಯನ್ನಾಧರಿಸಿ ನಾಸಾ ಎಚ್ಚರಿಕೆ ನೀಡಿಯಾಗಿದೆ. ಮಳೆಯ ರಿಮೋಟ್ ಎಂದು ವಿಜ್ಞಾನಿಗಳು ಕರೆಯುತ್ತಿದ್ದ 'ಎಲ್ ನಿನೋ' ಹವಾಮಾನ ವೈಪರೀತ್ಯದ ವಿದ್ಯಮಾನಕ್ಕೆ ಸವಾಲೆಸೆಯುವಂತೆ ಈಗ ಬಂಗಾಳಕೊಲ್ಲಿಯ ಸಮುದ್ರದ ಮೇಲೆ ಅಕಾಲಿಕ ಸರಣಿ ಚಂಡಮಾರುತಗಳ ವಿಚಿತ್ರ ವಿದ್ಯಮಾನಗಳು ಜರುಗುತ್ತಿವೆ!. ಮಧ್ಯ ಪೆಸಿಫಿಕ್ ಸಾಗರದಲ್ಲಿ ಎಲ್ ನಿನೋ ವಿದ್ಯಮಾನಗಳು ಕಂಡುಬಂದರೆ ಭಾರತದಲ್ಲಿ ಬರಗಾಲ! ಪೂರ್ವ ಪೆಸಿಫಿಕ್ ಸಮುದ್ರದಲ್ಲಿ ಎಲ್ ನಿನೋ ವಿದ್ಯಮಾನಗಳು ಕಂಡುಬಂದರೆ ಭಾರತಕ್ಕೆ



ಮುಂಗಾರುಮಳೆಯ ಸಿಂಚನ! ಎಂಬ ವಿಜ್ಞಾನಿಗಳ ಹಳೇ ಫಾರ್ಮೂಲಾಕ್ಕೆ ಈಗ ಬೆಲೆ ಇಲ್ಲದಂತಾಗಿದೆ! ವೈಜ್ಞಾನಿಕ ಪುರಾವೆಗಳೇ ಗೊಂದಲಕ್ಕೆ ಬೀಳುವಂತೆ ಇತ್ತೀಚಿನ ವರ್ಷಗಳಲ್ಲಿ ಅರಬ್ಬಿ ಸಮುದ್ರದಲ್ಲಿ, ಬಂಗಾಳಕೊಲ್ಲಿಯಲ್ಲಿ ಪದೇ ವಾಯುಭಾರ ಕುಸಿತ ಉಂಟಾಗಿ ಚಿತ್ರ ವಿಚಿತ್ರವಾದ ಡೇಂಜರಸ್ ಚಂಡಮಾರುತಗಳಿಗಳ ಹುಟ್ಟಿಗೆ ಕಾರಣವಾಗುತ್ತಿದೆ. ಇದಕ್ಕೆಲ್ಲ ವೈಜ್ಞಾನಿಕ ಉತ್ತರಗಳನ್ನೇ ಕಂಡುಕೊಳ್ಳಲೇಬೇಕಿದೆ.

ಕಳೆದ ಹತ್ತು ವರ್ಷಗಳಲ್ಲಿ ಭಾರತವೊಂದರಲ್ಲೇ 40ಕ್ಕೂ ಹೆಚ್ಚಿನ ಸಂಖ್ಯೆಯ ಚಂಡಮಾರುತಗಳ ದಾಳಿ! ಸಾವಿರಾರು ಜನರ ಸಾವು. ಲಕ್ಷಾಂತರ ಮಂದಿ ನಾಪತ್ತೆ. ಇದೆಲ್ಲವನ್ನು ನೋಡುತ್ತಿದ್ದರೇ ಬಂಗಾಳಕೊಲ್ಲಿಯೇ ಚಂಡಮಾರುತಗಳ ತವರೂರಾಗುತ್ತಿದೆಯೇನೋ ಎನ್ನಿಸುತ್ತಿದೆ! ಭಾರತೀಯ ಹವಾಮಾನ ವಿಜ್ಞಾನಿಗಳ ಪ್ರಕಾರ ಉಷ್ಣವಲಯದಲ್ಲಿಯೇ ಸೈಕ್ಲೋನ್ ಗಳ ಹಾವಳಿ ಜಾಸ್ತಿಯಂತೆ! ಹಾಗಾದರೆ ಬಂಗಾಳಕೊಲ್ಲಿಯಲ್ಲಿ ಪದೇ ಪದೇ ವಾಯುಭಾರ ಕುಸಿತಕ್ಕೆ ಕಾರಣ ಈಗಲಾದರೂ ನಾವು ಕಂಡುಕೊಂಡು ಶೀಘ್ರವಾಗಿ ಪರಿಹಾರ ಹುಡುಕಿಕೊಳ್ಳಬೇಕಿದೆ. ದೂರದ ಸಮುದ್ರ ದ ಮೇಲೆ ತೂಕ ಕಳೆದುಕೊಳ್ಳುವ ಗಾಳಿಗೆ ಅಪ್ಪಳಿಸಿ ಸುರುಳಿ ಸುತ್ತಿ ಕೊಳ್ಳುವ ಬಿಸಿಗಾಳಿಯ ಜುಗಲ್ ಬಂದಿಯೇ ಈ ಡೆಡ್ಲಿ ಸೈಕ್ಲೋನ್! ತಣ್ಣಗಿನ ಸಮುದ್ರದ ನೀರು ಮತ್ತು ಬೀಸಿ ಬರುವ ತಾಪಮಾನದ ಬಿಸಿಗಾಳಿಗುಳ್ಳೆಯ ನಡುವಿನ ಕಥನ ಈ ವಾಯುಭಾರ ಕುಸಿತದ ಚಂಡಮಾರುತ! ನಡು ಸಮುದ್ರ ಮೇಲೆ ಹವಾಮಾನ ದಲ್ಲಿ ಕಡಿಮೆ ಒತ್ತಡದ ಪ್ರದೇಶಗಳು ಸ್ರಷ್ಠಿಯಾದಾಗ ಅವುಗಳ ಸುತ್ತಲೂ ಚಕ್ರವ್ಯೂಹಾಕಾರದಲ್ಲಿ ಉಂಟಾಗುವ ಬಿರುಗಾಳಿ ಮತ್ತು ತೀವ್ರಮಳೆಯಿಂದ ಹೆಚ್ಚಿನ ಚಂಡಮಾರುತಗಳು ಎದ್ದೇಳುತ್ತವೆ. ಕಡಿಮೆ ಒತ್ತಡದ ವಲಯದ ಸುತ್ತ ಸುತ್ತುವ ಒಳಮುಖ ಸುರುಳಿ ಗಾಳಿಯಿಂದ ರೂಪಿತವಾಗುವ ವಾಯುದ್ರವ್ಯರಾಶಿಯ ಜಗತ್ತು ಈ ಚಂಡಮಾರುತಗಳ ತಾಕತ್ತು. ಶೀತಗಾಳಿಯ ದ್ರವ್ಯ ರಾಶಿಗಳು, ಅಕ್ಷಾಂಶದ ವ್ಯತಿರಿಕ್ತ ಪರಿಣಾಮಗಳು ತಾಪಮಾನದ ಏರಿಕೆಯ ಪರಿಣಾಮದಿಂದ ಉಂಟಾಗಿ ಚಂಡಮಾರುತಗಳ ರೂಪದಲ್ಲಿ ಬಂದು ಕರ್ಮ ರಿಟರ್ನ್ ರೀತಿ ಜನರನ್ನು ಕಾಡುತ್ತಿವೆ! ಹಿಂದೂ ಮಹಾಸಾಗರ ಪ್ರಾಂತ್ಯದಲ್ಲಿ ಉಂಟಾಗುವ ತೀವ್ರ ವಾಯುಭಾರ ಕುಸಿತವು ಬಿರುಗಾಳಿ ಯಾಗಿ ಬದಲಾದಾಗ ಈ ಚಂಡಮಾರುಗಳು ಸ್ರಷ್ಠಿಯಾಗುತ್ತಿವೆ ಎನ್ನಲಾಗುತ್ತಿದೆ. ಭಾರತವಂತೂ ಈ ಹತ್ತು ವರ್ಷಗಳಲ್ಲಿ ಅರಬ್ಬಿ ಸಮುದ್ರ ಮತ್ತು ಬಂಗಾಳ ಕೊಲ್ಲಿ ಗಳಲ್ಲಿ ಉದ್ಭವಿಸಿ ಬರುವ ಚಂಡಮಾರುತಗಳಿಂದ ಅಪಾರವಾದ ಪೆಟ್ಟು ತಿಂದು ತತ್ತರಿಸಿಹೋಗುತ್ತಿದೆ.

## ಹಿಂದಿನ ಚಂಡಮಾರುತಗಳ ಹಾವಳಿ

1999 ರಲ್ಲಿ ಮಹಾ ಚಂಡಮಾರುತ ಪೈಲೀನ್ ಗಂಟೆಗೆ 220ರಿಂದ 280 ಕಿ.ಮೀಟರ್ ವೇಗದಲ್ಲಿ ಒಡಿಸ್ಸಾ ಕರಾವಳಿಗೆ ಅಪ್ಪಳಿಸಿತ್ತು. ಹತ್ತುಸಾವಿರ ಮಂದಿ ಪ್ರಾಣಕಳೆದುಕೊಂಡು ಲಕ್ಷಾಂತರ ಜನರು ಬೀದಿಪಾಲಾಗಿದ್ದರು. 2009 ಫ್ಯಾನ್ ಚಂಡಮಾರುತ. 2010 ಜೈಲ್ ಚಂಡಮಾರುತ.2012ನೀಲಂ ಚಂಡಮಾರುತ. ತಮಿಳು ನಾಡು, 2013ಹೆಲನ್ ಚಂಡಮಾರುತ. 2014 ಅಕ್ಟೋಬರ್ ರಲ್ಲಿ ಅಂಡಮಾನ್ ಸಮುದ್ರದಲ್ಲಿ ಸ್ರಷ್ಠಿಯಾಗಿದ್ದ ಹುಡ್ ಹುಡ್ ಚಂಡಮಾರುತ ಒಡಿಸ್ಸಾ,ಆಂದ್ರ ಪ್ರದೇಶಕ್ಕೆ ಅಪ್ಪಳಿಸಿತ್ತು.125ಜನರನ್ನು ಬಲಿಪಡೆದಿದ್ದ ಈ ಚಂಡಮಾರುತ 21ಸಾವಿರ ಕೋಟಿ ನಷ್ಟವನ್ನುಂಟು ಮಾಡಿತ್ತು! 2015ರಲ್ಲಿ ಎ–ಆರ್–ಬಿ–02 ಚಂಡಮಾರುತ ಗುಜರಾತ್ ನಲ್ಲಿ ತನ್ನ ರೌದ್ರಾವತಾರ ತೋರಿತ್ತು.2016ಕ್ಯಾಂಟ್, ಬಂಗಾಳಕೊಲ್ಲಿ 2016ವಾರ್ಧಾ ಚಂಡಮಾರುತ ಅಂಡಮಾನ್ ನಿಕೋಬಾರ್ ದ್ವೀಪಗಳಲ್ಲಿ. 2016ನಾದಾ ಕೇರಳ–ತಮಿಳುನಾಡು. 2017 ಓಕಿ ಸೈಕ್ಲೋನ್ ಕೇರಳ, ತಮಿಳುನಾಡು . 2019 ಫಣಿ ಸೈಕ್ಲೋನ್ ಒಡಿಸ್ಸಾ. 2020 ಪಶ್ಚಿಮ ಬಂಗಾಳದ ಒಡಿಸ್ಸಾಗೆ ಅಂಫಾನ್ ಚಂಡಮಾರುತದಾಳಿ. ಇದು 20ವರ್ಷಗಳಲ್ಲೇ ಅತಿ ದೊಡ್ಡ ಸೈಕ್ಲೋನ್. ಅತ್ಯಂತ ಹಾನಿಕಾರಕ ಸೈಕ್ಲೋನ್ ಎನಿಸಿಕೊಂಡಿದ್ದ ಯಾಸ್ ಚಂಡಮಾರುತ ಮೇ 2021ರಲ್ಲಿ ಪಶ್ಚಿಮ ಬಂಗಾಳಕ್ಕೆ ಅಪ್ಪಳಿಸಿತ್ತು. ಈಗಾಗಲೇ ಬಂಗಾಳ ಕೊಲ್ಲಿಯಲ್ಲಿ ಉದ್ಭವಿಸಿ, ಆರ್ಭಟಿಸಿ ಮರೆಯಾದ ಹಲವಾರು ಚಂಡಮಾರುತಗಳ ಪಟ್ಟಿಯೇ ಇವೆ. ನೀಲಂ. ಥಾಣೆ. ಲಿನಾಯಿಸ್.ದುಮಿಲಾ.ಸೊಲಾಸಿ.ಉರಿಲಿಯಾ. ತಮೀಮ್.ಬಾಲ್ಡ್ ವಿನ್.ಸಿತರಾ ಅಮರ.ಸಾಯ.ಬನ್ಸಿ. ತಾರಿಕ್.ಕೇಶ.ಪುಂಡಿ.ಮಹರ.ಜಿಜಿಸಾ.ವಿಂದು. ಮತ್ತು ಹಿಂದೂ ಮಹಾಸಾಗರದಲ್ಲಿ ಹುಟ್ಟಿದ್ದ ಅಗ್ನಿ ಆಕಾಶ್.ಬಿಜ್ಲಿ.ವಾಯು.ಜಲ್ ಲೆಹರ್. ಪೆಸಿಫಿಕ್ ಸಾಗರದಲ್ಲಿ ಕಟ್ರೀನಾ.ಸ್ಯಾಂಡೀ.ರೀನಾ.

ಬಾರ್ಬರಾ.ಕ್ರಿಸ್. ಜೇಸ್. ಆಸ್ಕರ್ ಮಾರ್ಟಿ. ಟೋನಿ. ಕಿರ್ಕ್.ಅಗಾಥ ಮುಂತಾದ ಚಂಡಮಾರುಗಳು ದಾಳಿ ನಡೆಸಿ ತೊಂದರೆ ಕೊಟ್ಟಿವೆ. ಈಗ ನೈರುತ್ಯ ಮುಂಗಾರು ಅಂತ್ಯವಾಗಿದ್ದರೂ ಹಿಂಗಾರಿನಲ್ಲಿ ರೈತರ ಬೆಳೆಯ ಕುಯಿಲಿನ ಸಮಯದಲ್ಲಿ ಶಾಹೀನ್ ಚಂಡಮಾರುತ ಕರ್ನಾಟಕದಲ್ಲಿ ದಾಳಿ ಪ್ರಾರಂಭ ಮಾಡಿತ್ತು. ಸೆಪ್ಟೆಂಬರ್ ನಲ್ಲಿ ಮುಂಬೈ ನಗರವನ್ನೆ ನಡುಗಿಸಿದ್ದ

# ಅಣ್ಣಿಗೇರಿಯ ಆಕಸ್ಮಿಕ ತಲೆಬುರುಡೆಗಳತ್ತ

ಪರಿಶೋಧನೆ
ಡಾ.ಎಸ್.ವೈ.ಸೋಮಶೇಖರ್
ಕನ್ನಡ ವಿಶ್ವವಿದ್ಯಾಲಯ, ಹಂಪಿ



ಅಣ್ಣಿಗೇರಿ ಧಾರವಾಡ ಜಿಲ್ಲೆಯ ನವಲಗುಂದ ತಾಲೂಕಿನ ಪ್ರಾಚೀನ ಗ್ರಾಮ. ಇದು ಪ್ರಸಿದ್ಧವಾಗಿರುವುದು ಹೊಯ್ಸಳ ಕಾಲದ ಅಮೃತೇಶ್ವರ ದೇವಾಲಯದಿಂದ. ಕ್ರಿ.ಶ.1050ರಲ್ಲಿ ನಿರ್ಮಾಣವಾದ ಈ ದೇವಾಲಯವಲ್ಲದೆ, ಈ ಗ್ರಾಮವು ಬೆಳವೊಲ-300 ನಾಡಿನ ಪ್ರಸಿದ್ಧ ರಾಜಧಾನಿಯಾಗಿದ್ದುದು ಗಮನಾರ್ಹ. ಇಲ್ಲಿ ಹನ್ನೆರಡಕ್ಕೂ ಹೆಚ್ಚು ಪ್ರಾಚೀನ ದೇವಾಲಯ ಮತ್ತು ಜಿನಾಲಯಗಳು ಹಾಗೂ ಇಪ್ಪತ್ತೆಂಟಕ್ಕೂ ಹೆಚ್ಚು ಶಾಸನಗಳನ್ನು ಕಾಣಬಹುದು. ಅವುಗಳಲ್ಲಿ ರಾಮಲಿಂಗೇಶ್ವರ, ಬನಶಂಕರಿ, ಕಲ್ಮಠ(ತ್ರಿಕೂಟ), ಪುರದ ವೀರಭದ್ರೇಶ್ವರ, ಪಾರ್ಶ್ವನಾಥ ಬಸದಿ ಮುಖ್ಯವಾಗಿವೆ. ಇವು ಅಣ್ಣಿಗೇರಿಯ ಪ್ರಾಚೀನ ಚರಿತ್ರೆಯನ್ನು ಸಾರಿದರೆ, ಇತ್ತೀಚೆಗೆ ಕಂಡುಬಂದ ಚರಂಡಿ ಕಾಮಗಾರಿಯ ಅವಶೇಷಗಳದ್ದು ಮತ್ತೊಂದು ಇತಿಹಾಸ.

2010ರಿಂದ ಈಚೆಗೆ ಈ ಗ್ರಾಮವು ದೇಶದಲ್ಲೇ ಸುದ್ದಿಯ ಪ್ರಮುಖ ಕೇಂದ್ರವಾಯಿತು. ಅದಕ್ಕೆ ಕಾರಣ ಈ ಗ್ರಾಮದಲ್ಲಿ ಕೈಗೊಂಡ ಕಾಮಗಾರಿಯಲ್ಲಿ ಆಕಸ್ಮಿಕವಾಗಿ ಕಂಡುಬಂದ ಮುನ್ನೂರಕ್ಕೂ ಹೆಚ್ಚು ಮಾನವ ತಲೆಬುರುಡೆ ಮತ್ತು ಇತರೆ ಮೂಳೆಯ ಅವಶೇಷಗಳು. ಅದೂ ಜೆಸಿಬಿಯಿಂದ ಚರಂಡಿಯನ್ನು ಅಗೆಯುತ್ತಿದ್ದ ಸಂದರ್ಭದಲ್ಲಿ ಕಂಡುಬಂದ ಭಯಾನಕ ಚಿತ್ರಣವಿದು. ಅಷ್ಟೊಂದು ಸಂಖ್ಯೆಯಲ್ಲಿ ಕಂಡುಬಂದ ಮನುಷ್ಯರ ತಲೆಬುರುಡೆಗಳು ಒಂದು ಕಾಲದ ಕರಾಳಮುಖದ ಪ್ರತೀಕವೇ ಆಗಿದ್ದಿರಬೇಕು. ಆದರೆ ಯಾವ ಕಾಲದಲ್ಲಿ, ಯಾರು, ಏಕೆ ಮತ್ತು ಹೇಗೆ ? ಈ ಕೃತ್ಯವನ್ನು ಎಸಗಿದರೆಂಬುದರತ್ತ ದಿನಪತ್ರಿಕೆ, ದೃಶ್ಯ ಮತ್ತು ಶ್ರವ್ಯ ಮಾಧ್ಯಮಗಳಲ್ಲಿ ಸುದ್ದಿಯೋ ಸುದ್ದಿ. ಒಬ್ಬೊಬ್ಬರು ಒಂದೊಂದು ಬಗೆಯ ವಿವರಣೆ, ಹೇಳಿಕೆ, ವಿಶ್ಲೇಷಣೆಗಳನ್ನು ನೀಡಲೆತ್ನಿಸಿದ್ದರು. ಕೆಲವರು ಯುದ್ಧವೊಂದರಲ್ಲಿ ನಡೆದ ಭಯಾನಕ ನರಹಂತಕ ಕೃತ್ಯವೆಂದು ಹೇಳಿದರೆ, ಇನ್ನು ಕೆಲವರು ಧರ್ಮಾಧಾರಿತ ತಾಂತ್ರಿಕ ಆಚರಣೆಗಳ ಭಾಗವಾಗಿ ನಡೆದುದೆಂದೂ, ಕೆಲವರು ಸಾಮೂಹಿಕ ಆತ್ಮ ಬಲಿದಾನದ ಕುರುಹುಗಳೆಂದೂ, ಮತ್ತೆ ಕೆಲವರು ಪ್ರಾಚೀನ ಶೈವ ಧರ್ಮದಲ್ಲಿ ಬರುವ ಆತ್ಮಾರ್ಪಣೆಯಿಂದ ಆದ ಪ್ರಕರಣ ಎಂದು ಒಂದೊಂದು ಬಗೆಯಲ್ಲಿ ಹೇಳುತ್ತಿದ್ದ ಸುದ್ದಿಗಳು ರಾಜ್ಯವಲ್ಲದೆ ದೇಶದ ಅನೇಕ ಪತ್ರಿಕೆಗಳಲ್ಲಿ ಬಿತ್ತರಗೊಳ್ಳುತ್ತಿದ್ದವು. ಈ ಸುದ್ದಿಗಳನ್ನು ನೋಡಿ, ಕೇಳಿದ ನಮಗೆ ಅವುಗಳನ್ನು ನೋಡುವ ತವಕ ಮತ್ತು ಕುತೂಹಲ ಹೆಚ್ಚಾಯಿತು. ಸ್ನೇಹಿತರೊಂದಿಗೆ ಹೊರಟ ನಾವು ಬಸ್ಸನ್ನು ಹಿಡಿದು, ಅಣ್ಣಿಗೇರಿಯನ್ನು ತಲುಪಿ, ಅಲ್ಲಿನ ಸಂದಿಗೊಂದಿಗಳನ್ನು ದಾಟಿ ತಲೆಬುರುಡೆಗಳಿರುವ ಸ್ಥಳವನ್ನು ತಲುಪಿದ್ದೆವು. ಅವುಗಳನ್ನು ನೋಡಿದ ತಕ್ಷಣ ನಮಗೆ ಭಯ, ದುಗುಡ, ಆತಂಕಗಳು ಮನೆಮಾಡಿದವು. ನಾವು ಎಂದೂ ಕಂಡರಿಯದ, ಕೇಳಿರದ ಭಯಾನಕ ಚಿತ್ರಣವಿದು. ಪುರಾತತ್ವಜ್ಞರು ನಡೆಸಿದ್ದ ಅದುವರೆಗಿನ ಉತ್ಖನನಗಳಲ್ಲಿ ಸಾಮಾನ್ಯವಾಗಿ ಒಂದು ಶವ ಮತ್ತು ಅದರ ಮೂಳೆಯ ಅವಶೇಷಗಳು ಕಂಡುಬಂದದ್ದು ಇತಿಹಾಸ. ಆದೂ ಬೃಹತ್ ಶಿಲಾಯುಗದಲ್ಲಿ ಮಾನವ ನಿರ್ಮಿಸಿದ ದೊಡ್ಡದೊಡ್ಡ ಬಂಡೆಗಲ್ಲುಗಳನ್ನು ಒಳಗೊಂಡ ಶಿಲಾಸಮಾಧಿಗಳಲ್ಲೂ ಒಂದು, ಅಪರೂಪವೆನ್ನುವಂತೆ ಎರಡು ಶವಗಳ ಪಳಿಯುಳಿಕೆಗಳು ಕಂಡುಬಂದಿವೆ. ಆದರೆ ಅಣ್ಣಿಗೇರಿಯಲ್ಲಿ ಕಂಡುಬಂದ ಮನುಷ್ಯರ ತಲೆಬುರುಡೆಗಳು ಎಣಿಕೆಗೂ ನಿಲುಕದಷ್ಟಿದ್ದುದನ್ನು ಕಂಡ ನಮಗೆ ಇದಾವ ಭಯಾನಕ ಹತ್ಯಾಕಾಂಡ, ಅದೆಂತಹ ಘನಘೋರ ಹಾಗೂ ಕಂಡುಕೇಳರಿಯದ ಕೃತ್ಯವು ಜರುಗಿರಬಹುದೆಂಬ ನೂರಾರು ಪ್ರಶ್ನೆಗಳು ಎಲ್ಲರಂತೆ ನಮ್ಮಲ್ಲೂ ಮೂಡಿದ್ದುದು ಸಹಜವೇ? ವಿಜಯನಗರ ಕಾಲದ ಸೈನ್ಯವ್ಯವಸ್ಥೆ ಮತ್ತು ಯುದ್ಧನೀತಿಯಲ್ಲಿ ಪಿಎಚ್.ಡಿ. ಅಧ್ಯಯನ ಮಾಡಿದ ನನಗೆ ವಿಜಯನಗರ ಕಾಲ ಮತ್ತು ವಿಜಯನಗರಪೂರ್ವ ಮತ್ತು ನಂತರ ಕಾಲದಲ್ಲಿ ನಡೆದ ಅನೇಕ ಘನಘೋರ ಯುದ್ಧಗಳನ್ನು ಓದಿದ್ದಿದೆ. ವಿಜಯನಗರ ಸಾಮ್ರಾಜ್ಯ ಪತನಕ್ಕೆ ಕಾರಣವಾದ ರಕ್ಕಸಗಿ-ತಂಗಡಗಿ ಯುದ್ಧದ ಚಿತ್ರಣಗಳನ್ನು ಅನೇಕ ಆಕರಗಳ ಮೂಲಕ ಓದಿ ಪರಿಶೀಲಿಸಿದ್ದಿದೆ. ಆದರೆ ಯಾವ ಯುದ್ಧಗಳಲ್ಲೂ ಈ ಬಗೆಯಲ್ಲಿ ನಡೆದ ನರಮೇಧಕ್ಕೆ ಸಾಕ್ಷ್ಯಗಳಿಲ್ಲ. ಪ್ರಪಂಚದ ಮಹಾಯುದ್ಧಗಳಲ್ಲೂ ಹಿಟ್ಲರ್ ಇಂತಹ ನರಮೇಧಗಳನ್ನು ಕೈಗೊಂಡನೆಂಬ ಸಂಗತಿಗಳನ್ನು ಓದಿದ್ದೇವೆ. ಅಲ್ಲೂ ಇಲ್ಲಿಯಂತೆ ತಲೆಗಳನ್ನು ಕತ್ತರಿಸಿ ಒಪ್ಪವಾಗಿ ಜೋಡಿಸಿಟ್ಟ ಉದಾಹರಣೆಗಳೇ ಇಲ್ಲ. ಆದರೆ ಇಲ್ಲಿ ಕಂಡುಬರುವ ತಲೆಬುರುಡೆಗಳದು ವಿಚಿತ್ರವಾದುದಾಗಿತ್ತು. ಸಾಲಾಗಿ ಒಪ್ಪವೆನ್ನುವಂತೆ ಒಂದರ ಪಕ್ಕದಲ್ಲಿ ಒಂದರಂತೆ ಜೋಡಿಸಿ ಸಂಸ್ಕಾರ ಮಾಡಿದಂತೆ ಜೋಡಿಸಿಟ್ಟ ತಲೆಬುರುಡೆಗಳಾಗಿದ್ದವು. ಆಂಧ್ರಪ್ರದೇಶದ ಶ್ರೀಶೈಲ ಮಲ್ಲಿಕಾರ್ಜುನ ದೇವಾಲಯದ ಪ್ರಾಕಾರ ಗೋಡೆಯಲ್ಲಿ ತಾಂತ್ರಿಕ ಪಂಥಗಳ ಹಿನ್ನೆಲೆಯಲ್ಲಿ ಭಕ್ತರು ಆತ್ಮಾರ್ಪಣೆ ಮಾಡಿಕೊಳ್ಳುತ್ತಿರುವ ಶಿಲ್ಪಗಳನ್ನು ಆಗತಾನೆ ಅಲ್ಲಿ ನಾನು ಕಂಡಿದ್ದೆನು. ಭಕ್ತರು ತಮ್ಮ ದೇಹವನ್ನು ಶಿವಲಿಂಗಕ್ಕೆ ಸಮರ್ಪಿಸುತ್ತಿರುವ, ಭಕ್ತರ ಶಿರಗಳನ್ನು ವ್ಯಕ್ತಿಯೋರ್ವ ಕಡಿಯುತ್ತಿರುವಂತಹ ಶಿಲ್ಪಗಳೂ ಅಲ್ಲಿನ ಹೊರಗೋಡೆಯಲ್ಲಿವೆ. ಅಲ್ಲದೆ ಕಡಿದ ಶಿರಗಳನ್ನು ಸಾಲಾಗಿ ಜೋಡಿಸಿಟ್ಟಂತೆ ಕಡೆದ ಹತ್ತಾರು ಉಬ್ಬುಗೆತ್ತನೆಗಳನ್ನೂ ಅಲ್ಲಿ ಕಂಡಿದ್ದೆನು. ಅಂತಹ ಆತ್ಮ ಸಮರ್ಪಣೆಯ ಬಲಿದಾನಗಳೇನಾದರೂ ಅಣ್ಣಿಗೇರಿಯಲ್ಲಿ ನಡೆದಿರಬಹುದೇ ಎಂದು ನನಗನ್ನಿಸಿತು. ಇಂತಹ ಆತ್ಮಾರ್ಪಣೆಯ ಉಬ್ಬುಶಿಲ್ಪಗಳನ್ನು ನಾಡಿನ ಸಂಸ್ಕೃತಿ ಚಿಂತಕರಾದ ಡಾ. ಎಂ.ಎಂ ಕಲಬುರ್ಗಿ ಅವರಿಗೂ ಕಳುಹಿಸಿಕೊಟ್ಟೆನು. ಅವರು ಈ ಬಗೆಯ ಶಿಲ್ಪ ಮತ್ತಿತರ ಪ್ರಾಚೀನ ಆಚರಣೆಗಳಿಂದ ಆಗಿರಬಹುದಾದ ಸಂಗತಿಯನ್ನೂ ಪ್ರಕಟಪಡಿಸಿದ್ದರು. ಆದರೆ ಅಣ್ಣಿಗೇರಿಯಲ್ಲಿ ಕಂಡುಬಂದ ತಲೆಬುರುಡೆಗಳು ಶ್ರೀಶೈಲದ ಉಬ್ಬುಶಿಲ್ಪಗಳಂತೆ ಪೂರ್ಣಪ್ರಮಾಣದ ತಲೆಗಳಾಗಿರಲಿಲ್ಲ. ಅಲ್ಲಿ ಕಂಡುಬಂದ ತಲೆಬುರುಡೆಗಳ ವಿಶೇಷತೆಯೆಂದರೆ ದವಡೆ ಇಲ್ಲದ ತಲೆಯ ಮೇಲ್ಭಾಗ ಮಾತ್ರವಿದ್ದುದು. ಒಂದೇ ಒಂದು ತಲೆಬುರುಡೆಯಲ್ಲೂ ದವಡೆಯ ಭಾಗವಿಲ್ಲದುದು ವಿದ್ವಾಂಸರಿಗೆ ಅನೇಕ ಸಂದೇಹ, ಸಂಶಯಗಳಿಗೆ ಎಡೆಯಾಗಿತ್ತು. ತಲೆಯೊಂದಿಗೆ ಇರಬೇಕಾಗಿದ್ದ ದವಡೆಯಿಲ್ಲದೆ ಮನುಷ್ಯನ ದೇಹವಿರುವುದುಂಟೇ, ಹಾಗೆಯೇ ದೇಹದ ಇತರೆ ಭಾಗಗಳಾದ ಕೈ, ಕಾಲು, ಪಕ್ಕೆಲುಬಿನ ಹಂದರ, ಬೆನ್ನುಮೂಳೆ ಮತ್ತಿತರ ದೇಹದ ಮೂಳೆಯ ಅವಶೇಷಗಳೇನಾದರೂ ತಲೆಯೊಂದಿಗೆ ಇವೆಯೇ ಎಂದರೆ, ಆ ರೀತಿಯ ಒಂದೂ ದೇಹ ಅಲ್ಲಿ ಕಂಡುಬರದಿದ್ದುದು ನಿಜಕ್ಕೂ ಯೋಚನೆಗೂ ನಿಲುಕದಂತಹ ಸಂಗತಿಗಳಾಗಿದ್ದವು. ಈ ಹಿನ್ನೆಲೆಯಲ್ಲಿಯೇ ವಿದ್ವಾಂಸರಿಗೆ ಇವುಗಳ ಬಗೆಗಿನ ಕುತೂಹಲ ಹೆಚ್ಚಾಗಿದ್ದದ್ದು. ಹಾಗಿದ್ದೂ ತಲೆಯನ್ನುಳಿದು ದೇಹದ ಇತರೆ ಭಾಗಗಳ ಪಳಿಯುಳಿಕೆಗಳ್ನ ಎಲ್ಲಿವೆಯೆಂಬುದನ್ನು ಉತ್ಖನನದ ಮೂಲಕ ಪತ್ತೆಹಚ್ಚಲು ಪ್ರಯತ್ನಗಳು ನಡೆದವು. ಇಂತಹ ಪ್ರಯತ್ನಗಳಿಂದ ದವಡೆ ಭಾಗವನ್ನು ಹೊರತುಪಡಿಸಿ ಕೈಕಾಲು, ಇತರೆ ದೇಹಭಾಗದ ಮೂಳೆಗಳ ರಾಶಿ ಒಂದೆಡೆ ಕಂಡುಬಂದು, ಅದೂ ಕುಪ್ಪೆಯಂತೆ ಹಾಕಿದ್ದುದು ಗೋಚರವಾಗಿದೆ. ಇದರಿಂದ ಸಂಶೋಧಕರಿಗೆ ಚರಿತ್ರೆಯಲ್ಲಿ ಏನೋ ಒಂದು ವಿಚಿತ್ರವಾದ ಘಟನೆ ನಡೆದಿದೆ ಎಂಬ ಸತ್ಯವಂತೂ ಕಣ್ಣಮುಂದೆ ಕಾಣುತ್ತಿತ್ತು. ಇದು ಅನೇಕ ಸಂಶೋಧನೆಗಳಿಗೆ ನಾಂದಿಯಾಯಿತು. ಇದಕ್ಕೆ ಸಂಬಂಧಿಸಿದ ಐತಿಹ್ಯ, ಸ್ಥಳೀಯ ಹೇಳಿಕೆ, ಧರ್ಮ, ಆಚಾರ, ವಿಚಾರ, ಮಾಟ-ಮಂತ್ರದಂತಹ ಕಂದಾಚಾರಗಳೂ ಸೇರಿ ಒಂದೊಂದು ಬಗೆಯ ಹೇಳಿಕೆಗಳನ್ನು ಆಧರಿಸಿ ಮಾಧ್ಯಮಗಳು ದಿನನಿತ್ಯ ತಮ್ಮದೇ ಆದ ಪ್ರಚಾರವನ್ನು ರಾಜ್ಯದಾದ್ಯಂತ ಹರಡಿದ್ದವು.

ಅದೂ ಒಂದು ಬಗೆಯ ಇತಿಹಾಸವೇ. ಈ ಎಲ್ಲ ಬಗೆಯ ಆಲೋಚನೆ, ಸಂಶೋಧನೆಗಳಿಗೆ ಅವಕಾಶವಿತ್ತದ್ದು ಅಲ್ಲಿನ ಜಿಲ್ಲಾಡಳಿತ ಮತ್ತು ರಾಜ್ಯ ಪುರಾತತ್ವ ಇಲಾಖೆಗಳು. ಇದೊಂದು ಯಕ್ಷಪ್ರಶ್ನೆಯಾಗಿ ಎಲ್ಲರನ್ನೂ ಕಾಡಿದುದರಲ್ಲಿ ಸಂದೇಹವಿರದು. ಮೈಸೂರು ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕರಾದ ಡಾ. ಎಂ.ಎಸ್. ಕೃಷ್ಣಮೂರ್ತಿ ಮತ್ತು ಪುರಾತತ್ವ ಇಲಾಖೆಯ ನಿರ್ದೇಶಕರಾಗಿದ್ದ ಡಾ.ಆರ್.ಗೋಪಾಲ್ ಅವರ ತಂಡ ಕೈಗೊಂಡ ಕಾರ್ಯವನ್ನು ನಿಜಕ್ಕೂ ನೆನಯಬೇಕು.

ತಲೆಬುರುಡೆಗಳನ್ನು ಅನೇಕ ಚಾರಿತ್ರಿಕ ಸಂಗತಿಗಳು, ದಾಖಲೆಗಳಿಗೆ ಹೋಲಿಸಿ, ಪ್ರಯೋಗಿಸುವ ಪರಿಕ್ರಮಗಳು ನಡೆದವು. ಪುರಾತತ್ವ ಶಾಲೆಯ ಪ್ರಯೋಗಕ್ಕೂ ಒಳಪಡಿಸಲಾಯಿತು. ಭುವನೇಶ್ವರದ ಫ್ಲೋರೆನ್ಸಿಕ್ ವರದಿಯು 630 ವರ್ಷಗಳಷ್ಟು ಹಳೆಯವೆಂದು ಹೇಳಿತು. ಇದಕ್ಕೆ ಚಾರಿತ್ರಿಕ ಘಟನೆ, ಯುದ್ಧಗಳನ್ನೂ ಸಂಶೋಧಿಸುವ ಸಂಶೋಧನೆಗಳು ನಡೆದವು. ಅನೇಕ ಬಗೆಯ ವೈಜ್ಞಾನಿಕ ಸಂಶೋಧನೆಗಳಿಗೂ ಈ ತಲೆಬುರುಡೆಗಳು ಒಳಪಟ್ಟವು. ಕೊನೆಗೆ ಅಮೇರಿಕಾದ ಫ್ಲಾರಿಡಾಕ್ಕೂ ಅವಶೇಷಗಳನ್ನು ಕಳುಹಿಸಿಕೊಡಲಾಯಿತು. ಫ್ಲಾರಿಡಾದ ವಿದ್ವಾಂಸರು 17ನೆಯ ಶತಮಾನದವೆಂಬ ವರದಿಯನ್ನು ನೀಡಿದರು. ಇದನ್ನು ಆಧರಿಸಿ ನಡೆಸಿದ ಸಂಶೋಧನೆಯಲ್ಲಿ ಇದೊಂದು ಬರಗಾಲದ ಭಯಾನಕ ಚಿತ್ರಣ, ಭೀಕರ ಬರಗಾಲದ ಪಳಿಯುಳಿಕೆಗಳೆಂಬ ತೀರ್ಮಾನಕ್ಕೆ ಬರಲಾಯಿತು. ಅಲ್ಲದೆ ಇದು 1792-96ರಲ್ಲಾದ ಭೀಕರ ಬರಗಾಲ, ಅದನ್ನು ದಾಖಲೆಗಳಲ್ಲಿ ಡೌಗಿ(ಡೋಗಿ) ಬರಗಾಲವೆಂದೂ ಕರೆಯುತ್ತಿದ್ದುದನ್ನು ದೃಢಪಡಿಸಿದರು. ಡೋಗಿ ಬರಗಾಲದ ಭೀಕರತೆ ಎಷ್ಟಿತ್ತೆಂದರೆ ಆಹಾರ-ನೀರು ಸಿಗದೆ ಪ್ರಾಣಿಪಕ್ಷಿಗಳೆನ್ನದೆ ಎಲ್ಲೆಂದರಲ್ಲಿ ಹೆಣಗಳ ರಾಶಿಯೇ ಬಿದ್ದಿದ್ದವು. ಈ ಮಧ್ಯೆ ಸತ್ತ ಹೆಣಗಳನ್ನು ಪ್ರಾಣಿ-ಪಕ್ಷಿಗಳು ತಿಂದು ತಲೆಬುರುಡೆ, ಮೂಳೆಯ ಅವಶೇಷಗಳು ಎಲ್ಲೆಂದರಲ್ಲಿ ಹರಡಿದ್ದವು. ತಲೆಬುರುಡೆಯಲ್ಲಿ ದವಡೆಭಾಗ ನರಮಾಂಸವಿಲ್ಲದಾಗ ಸಹಜವಾಗಿ ಬೇರ್ಪಡುತ್ತದೆ. ಈ ಹಿನ್ನೆಲೆಯಲ್ಲಿ ಬರಗಾಲದಿಂದ ತತ್ತರಿಸಿ ಊರನ್ನು ತೊರೆದು ಜನ ಗುಳೆ ಹೋದ ಮತ್ತು ಬದುಕುಳಿದವರು ಎಲ್ಲೆಂದರಲ್ಲಿ ಕಂಡುಬಂದ ತಮ್ಮ ಹಿರಿಯರ ತಲೆಬುರುಡೆಗಳನ್ನು ಸಂಗ್ರಹಿಸಿ ಅಣ್ಣಿಗೇರಿಯ ಸ್ಥಳವೊಂದರಲ್ಲಿ ಸಾಲಾಗಿ, ಒಪ್ಪವಾಗಿ ಜೋಡಿಸಿ ಸಂಸ್ಕಾರ ನೀಡಿದ ಅವಶೇಷಗಳೆಂಬ ಸತ್ಯವನ್ನು ಸಂಶೋಧನೆಗಳು ದೃಢಪಡಿಸಿದವು. ಒಟ್ಟಿನಲ್ಲಿ ಗ್ರಾಮ ಪಂಚಾಯತಿಯ ಕಾಮಗಾರಿಯಲ್ಲಿ ಕಂಡುಬಂದ ಆಕಸ್ಮಿಕ ಶೋಧ ಜಿಲ್ಲಾಡಳಿತ, ಪುರಾತತ್ವ ಇಲಾಖೆಗಳಲ್ಲದೆ ದೇಶವಿದೇಶಗಳತ್ತ ಸಂಶೋಧನೆಯ ರಹದಾರಿಯನ್ನೇ ಸೃಷ್ಟಿಸಿ ವಿಸ್ತರಿಸಿತೆಂದರೆ ಅತಿಶಯೋಕ್ತಿಯಾಗಲಾರದು.

---

ಗುಲಾಬ್ ಚಂಡಮಾರುತದೊಂದಿಗೆ ಆರಂಭವಾದ ದಕ್ಷಿಣ ಭಾರತದ ರಾಜ್ಯಗಳ ಚಂಡಮಾರುತ ಕಂಟಕ ಇಂದಿಗೂ ಮುಗಿದಿಲ್ಲ. ಈಗ ಮತ್ತೊಂದು ಭೀಕರ ಡೆಡ್ಲಿ ಸೈಕ್ಲೋನ್ ದಾಳಿಯ ಮುನ್ಸೂಚನೆಯನ್ನು ಈಗ ಹವಾಮಾನ ಇಲಾಖೆ ತಿಳಿಸಿ ಎಚ್ಚರಿಸುತ್ತಿದೆ! 7516 ಕಿಲೋ ಮೀಟರ್ ಉದ್ದವಿರುವ ಭಾರತದ ಕರಾವಳಿ ತೀರವೇ ಸೈಕ್ಲೋನ್ ತವರುಮನೆಯಾಗಿದೆ! ಈಗ ಹವಾಮಾನ ವೈಪರೀತ್ಯಗಳಿಂದ ವರ್ಷಕ್ಕೊಂದು ಚಂಡಮಾರುತದ ಕಾಟ ದಕ್ಷಿಣ ಭಾರತದ ರಾಜ್ಯಗಳಿಗೆ ತಪ್ಪಿದ್ದಲ್ಲ ಎನ್ನುವಂತಾಗಿದೆ! 1970ರಲ್ಲೇ ಬಾಂಗ್ಲಾ ಮತ್ತು ಭಾರತದ ಕರಾವಳಿಗೆ ಅಪ್ಪಳಿಸಿದ್ದು ಭೋಲಾ ಎಂಬ ಚಂಡಮಾರುತ ಜಗತ್ತಿನ ಅತ್ಯಂತ ವಿನಾಶಕಾರಿ ಸೈಕ್ಲೋನ್ ಎಂಬ ಕುಖ್ಯಾತಿ ಹೊಂದಿದೆ. 1839ರಲ್ಲಿ ಕೊರಿಂಗ ಚಂಡಮಾರುತ ಬಂಗಾಳಕೊಲ್ಲಿಯಿಂದ ಭಾರತದ ಮೇಲೆ ಎರಗಿತ್ತು. 3ಲಕ್ಷಜನರು ಸಾವನ್ನಪ್ಪಿದ್ದರು. 1773ರಲ್ಲಿ ಹೋಗ್ಲಿ ನದಿ ಸೈಕ್ಲೋನ್ ಭಾರತ-ಬಾಂಗ್ಲಾ ಬಂಗಾಳ ಕೊಲ್ಲಿಯಲ್ಲಿ ಅಪ್ಪಳಿಸಿ ಮೂರುಲಕ್ಷ ಜನರನ್ನು ಬಲಿ ಪಡೆದಿತ್ತು. ಭಾರತಕ್ಕೆ ಈ ಡೆಡ್ಲೀ ಸೈಕ್ಲೋನ್ ಗಳೇನೂ ಹೊಸತಲ್ಲ ಆದರೆ ಇತ್ತೀಚಿನ ವರ್ಷಗಳಲ್ಲಿ ಮಾತ್ರ ಭಾರತದ ಕರಾವಳಿ ತೀರಗಳು ಈಶಾನ್ಯ ರಾಜ್ಯಗಳ ಮೇಲೆ ಹೆಚ್ಚಿನ ಚಂಡಮಾರುತಗಳ ದಾಳಿಯಾಗುತ್ತಿದೆ. ಉಗ್ರ ಚಂಡಮಾರುಗಳ (ವೆರಿ ಸಿವಿಯರ್ ಸೈಕ್ಲೋನಿಕ್ ಸ್ಟಾಮ್) ಗಾಳಿಯ ವೇಗ ಗಂಟೆಗೆ 116 ರಿಂದ 166 ಕಿಲೋ ಮೀಟರ್ ಇರುವುದಂತೇ! ಬಂಗಾಳ ಕೊಲ್ಲಿ ಸಮುದ್ರದಿಂದ ಎದ್ದು ಬಂದು ಇಡೀ ದಕ್ಷಿಣ ಭಾರತದ ರಾಜ್ಯಗಳನ್ನು ನೆರೆ ಪರಿಸ್ಥಿತಿಗೆ ದೂಡಿರುವ ಚಂಡಮಾರುತಗಳು ಗಂಟೆಗೆ 180ರಿಂದ 200ಕಿ.ಮೀಟರ್ ವೇಗದಲ್ಲಿ ತಮಿಳು ನಾಡಿನ ಕರಾವಳಿ ತೀರಕ್ಕೆ ಅಪ್ಪಳಿಸಿದ್ದರಿಂದಲೇ ಈ ಪರಿಸ್ಥಿತಿ ಬಂದಿದೆ. ಇನ್ನು ಮತ್ತೊಂದು ಭೀಕರ ಚಂಡಮಾರುತದ ಭೀತಿಯಲ್ಲಿರುವ ದಕ್ಷಿಣ ಭಾರತೀಯರು ಏರುತ್ತಿರುವ ಸಮುದ್ರದ ತಾಪಮಾನವೇ ಈ ಎಲ್ಲಾ ಸೈಕ್ಲೋನ್ ಅವಘಡಗಳಿಗೆ ಕಾರಣವೆಂಬುದನ್ನು ಎಲ್ಲಾ ಭಾರತೀಯರಿಗೂ ಮನವರಿಕೆ ಮಾಡಿಕೊಡಬೇಕಿದೆ. ಏಕೆಂದರೆ ಸಮುದ್ರ ಸೇರುತ್ತಿರುವ ಎಣ್ಣೆ ಪದಾರ್ಥಗಳು, ವಿಷಕಾರಕ ಕೆಮಿಕಲ್ ರಾಸಾಯನಿಕ ವಸ್ತುಗಳು, ಇಂಧನಗಳು, ಪ್ಲಾಸ್ಟಿಕ್ ವಸ್ತುಗಳನ್ನು ನಿಷೇಧಿಸಬೇಕಾಗಿದೆ. ಮತ್ತು ನಾವು ಬಳಸುತ್ತಿರುವ ಇಂಧನಗಳಿಂದ, ಪೆಟ್ರೋಲ್ ಡೀಸೆಲ್ ಗ್ಯಾಸ್ ತೈಲ ಗಳಿಂದಲೂ, ಕಲ್ಲಿದ್ದಲು, ಅಣುವಿದ್ಯುತ್ ಸ್ಥಾವರ ಗಳಿಂದಲೂ ವಾತಾವರಣದಲ್ಲಿ ಕಾರ್ಬನ್ ಡೈಆಕ್ಸೈಡ್ ಹೆಚ್ಚಾಗಿ ಜಾಗತಿಕ ತಾಪಮಾನ ಏರಿಕೆ ಯಾಗುತ್ತಿದೆ! ಇದರಿಂದ ಹಿಮಶಿಖರ ಪರ್ವತಗಳು. ಕರಗಿ ಸಮುದ್ರ ಸೇರುತ್ತಿರುವುದರಿಂದಲೂ ಸಮುದ್ರದ ಮಟ್ಟ ಏರಿಕೆಯಾಗಿದೆ!

## ಮೇಘಸ್ಫೋಟ ಚಂಡಮಾರುತಗಳು

ಮೇಘಸ್ಫೋಟ ಚಂಡಮಾರುತಗಳಿಂದ ನೆರೆಬಂದು ನದಿಗಳು ತುಂಬಿ ಸಮುದ್ರ ಸೇರುತ್ತಿರುವ ಮಾಲಿನ್ಯಯುಕ್ತ ನೀರು ವಾಯುಭಾರ ಕುಸಿತಕ್ಕೂ ಕಾರಣವಾಗುತ್ತಿದೆ. ಮೂರು ಕಡೆಯೂ ಸಮುದ್ರದಿಂದ ಆವೃತ್ತ ವಾಗಿರುವ ಈ ನಮ್ಮ ಜಂಬೂ ದ್ವಿಪ ಭಾರತಕ್ಕೆ ಕರಾವಳಿ ತೀರಗಳದ್ದೆ ಗಂಡಾಂತರವೆನಿಸಿದೆ. ಏಕೆಂದರೆ ಸಮುದ್ರಕ್ಕಂಟಿದ ನಗರಗಳು ತಮ್ಮೊಡಲ ಸರ್ವ ತ್ಯಾಜ್ಯವನ್ನು ಕಡಲ ಒಡಲಿಗೇ ಸುರಿಯುತ್ತಿವೆ. ಆದ ಕಾರಣವೇ ಎಲ್ ನಿನೋ ವಿದ್ಯಮಾನಗಳು ಕೂಡ ಸಮುದ್ರದಲ್ಲಿ ವ್ಯತ್ಯಾಸ ಗೊಂಡಿವೆ! ಮುಂದೊಂದು ದಿನ ಜಾಗತಿಕ ತಾಪಮಾನ 1.5 ಡಿಗ್ರಿ ಸೆಲ್ಸಿಯಸ್ ಮುಟ್ಟಿದರೂ ಈ ಜಗತ್ತಿನಲ್ಲಿರುವ ನಾವೆಲ್ಲರೂ ಘೋರ ದುರಂತಗಳಿಗೆ ಬೆಲೆ ತೆರಬೇಕಾಗುತ್ತದೆ. ಬಿಸಿಗಾಳಿಗೆ 35ಕೋಟಿ ಜನರು ಬಲಿಯಾಗಬಹುದೆಂದು ಜಿನಿವಾ ವಿಜ್ಞಾನಿಯೊಬ್ಬ ಭವಿಷ್ಯ ನುಡಿದಿದ್ದಾನೆ. ಭಾರತ ದೇಶವೇ ಉಷ್ಣ ವಿದ್ಯುತ್ ಸ್ಥಾವರದ ಕಾರಣಕ್ಕೆ 900ದಶ ಲಕ್ಷ ಟನ್ ಇಂಗಾಲವನ್ನು ಪ್ರತಿ ವರ್ಷ ಹೊರ ಹಾಕಿ ಜಗತ್ತಿನಲ್ಲಿ ಐದನೇ ಸ್ಥಾನದಲ್ಲಿದೆ!ತಾಪಮಾನ ಏರಿಕಯೂ ಈ ಅಕಾಲಿಕ ಚಂಡಮಾರುತಳಿಗೆ ಕಾರಣವಾಗಿರಬಹುದೆಂದು ವಿಜ್ಞಾನಿಗಳಳೇ ಹೇಳುತ್ತಿದ್ದಾರೆ. ಜಗತ್ತಿನ ಹಲವು ನಗರಗಳು ಈ ಶತಮಾದಲ್ಲೆ ಸಮುದ್ರದ ಮಟ್ಟದ ಏರಿಕೆಯಿಂದ ಮುಳುಗಿ ಕಣ್ಮರೆಯಾಗುತ್ತವೆಂದು ನಾಸಾ ಹೇಳುತ್ತಿದೆ.ಭಾರತದ ಕರಾವಳಿ ಕಡಲ ತೀರದ ರಾಜ್ಯಗಳು ಸಮುದ್ರ ಮಟ್ಟದ ಏರಿಳಿತಗಳಿಗೆ ತಕ್ಕುದಾದ ಸಿದ್ದತೆ ಮಾಡಿಕೊಂಡು ಅಲ್ಲಿನ ನಗರಗಳ ಜನರನ್ನು ಬೇರೆಡೆಗೆ ಸ್ಥಳಾಂತರಿಸದಿದ್ದರೇ ಅಪಾಯ ಕಟ್ಟಿಟ್ಟ ಬುತ್ತಿ ಎಂದು ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ವಿಜ್ಞಾನಿ ಸುನಿಲ್ ಗವಾಸ್ಕರ್ ಎಚ್ಚರಿಸಿದ್ದಾರೆ. ಜಾಗತಿಕ ಸಮುದ್ರ ಮಟ್ಟ 1993 ಮತ್ತು 2012ರ ನಡುವೆಯೇ 3.3ಮಿಮೀಟರ್ ಆಗುವ ಮೂಲಕ ದ್ವಿಗುಣ ಆಗಿದೆಯೆಂದು ಹವಾಮಾನ ತಜ್ಞೆ ಸ್ವಪ್ನ ಪಾನಿಕಲ್ ಹೇಳಿದ್ದಾರೆ. ಈ ಎಲ್ಲಾ ಕಾರಣಗಳಿಗಾಗಿ ನಾವು ಹಲವಾರು ಪರ್ಯಾಯಗಳನ್ನು ರೂಪಿಸಿಕೊಳ್ಳಲೇಬೇಕಿದೆ. ಕಲ್ಲಿದ್ದಲು ಬಳಸುವುದನ್ನು, ಅಣುವಿದ್ಯುತ್ ಬಳಸುವುದನ್ನು, ಪೆಟ್ರೋಲ್ ಡೀಸೆಲ್ ಬಳಸುವುದನ್ನು ಪ್ಲಾಸ್ಟಿಕ್ ವಸ್ತುಗಳನ್ನು ಬಳಸುವುದನ್ನು ಕಡಿಮೆಮಾಡಿ ಜಾಗತಿಕ ತಾಪಮಾನವನ್ನು ತಗ್ಗಿ ಸಲೇಬೇಕಿದೆ. ನದಿಗಳನ್ನು ಕಲುಷಿತ-ಮಾಲಿನ್ಯಗೊಳಿಸಿ ಸಮುದ್ರಕ್ಕೆ ವಿಷಹಾಕುವುದನ್ನು ತ್ಯಜಿಸಬೇಕಿದೆ. ನಮ್ಮನ್ನಾಳುವ ಸರ್ಕಾರಗಳು ಕಠಿಣ ಕಾನೂನುಗಳನ್ನು ಜಾರಿಗೊಳಿಸಿ ಜಗತ್ತಿನ ತಾಪಮಾನ ಕಡಿಮೆಗೊಳಿಸಲು, ಹೆಚ್ಚು ಹೆಚ್ಚು ಅರಣ್ಯ ಉಳಿಸಿ ಬೆಳೆಸಲು ಕಟಿಬದ್ದವಾಗಬೇಕಿದೆ. ಇಂದಿನ ಯುವ ಜನಾಂಗ ಪರಿಸರವನ್ನು ಶುದ್ಧ ಹವಾಮಾನ-ವಾತಾವರಣ ವನ್ನು ಕಾಪಾಡಲು-ಉಳಿಸಲು ಪಣತೊಬೇಕಿದೆ. ಏಕೆಂದರೆ ನಮಗೆ ಮಳೆಯ ಮಾರುತಗಳಷ್ಟೇ ಬೇಕಿದೆ;ಚಂಡಮಾರುತಗಳ ಹಿಂದೆ ಜಗತ್ತಿನ ಸಾವಿದೆ!

# ಅಕಾಲಿಕ ಮಳೆಗೆ ಕೊಚ್ಚಿಹೋದ ಬೆಳೆ ರೈತರ ಗೋಳು ಕೇಳುವವರ್ಯ್ಯಾರು..?

●5ನೇ ಪುಟದಿಂದ...

ಕೊಯ್ಲು ಮಾಡಿದ –ಸಲು ಖರೀದಿಸಲು ಖರೀದಿ ಕೇಂದ್ರಗಳನ್ನೂ ಆದ್ಯತೆಯ ಮೇಲೆ ತೆರೆಯಬೇಕು. ಬೆಂಗಳೂರು ಸೇರಿದಂತೆ ರಾಜ್ಯದ ನಗರ ಪ್ರದೇಶಗಳಲ್ಲಿ ಮಳೆಯಿಂದ ಬಹುತೇಕ ರಸ್ತೆಗಳು ಓಡಾಡಲು ಆಗದಷ್ಟು ಹಾಳಾಗಿವೆ. ಅದರಲ್ಲೂ ರಾಜಧಾನಿಯಲ್ಲಿ ಸಂಚಾರ ಎನ್ನುವುದು ದುಸ್ತರವಾಗಿದೆ. ರಸ್ತೆಗಳ ಗುಂಡಿ ಮುಚ್ಚುವ ಕಾರ್ಯವನ್ನೂ ಬೇಗ ಮುಗಿಸಿ, ಸಂಚಾರ ದಟ್ಟಣೆಯನ್ನು ಹೋಗಲಾಡಿಸಬೇಕು.

## ಎಲ್ಲೆಲ್ಲಿ ಎಷ್ಟು ನಷ್ಟವಾಗಿದೆ..

**ಗದಗ:** ಉತ್ತರ ಕರ್ನಾಟಕ ಜಿಲ್ಲೆಯ ಗದಗದಲ್ಲಿ, ಆರಂಭಿಕ ಅಂದಾಜಿನ ಪ್ರಕಾರ 2,200 ಹೆಕ್ಟೇರ್ ಬೆಳೆಗಳು ಮತ್ತು 1,300 ಹೆಕ್ಟೇರ್ ತೋಟಗಾರಿಕಾ ಉತ್ಪನ್ನಗಳಿಗೆ ನಷ್ಟವಾಗಿದೆ. ಈರುಳ್ಳಿ, ಮೆಣಸಿನಕಾಯಿ, ಬಾಳೆ, ಮೆಕ್ಕೆ ಜೋಳ ಬೆಳೆಗಳು ಮಳೆಯಿಂದ ಹಾನಿಗೀಡಾಗಿವೆ.

**ಧಾರವಾಡ:** ಜಿಲ್ಲೆಯ ಅಧಿಕಾರಿಗಳು ನಡೆಸಿದ ಪ್ರಾಥಮಿಕ ಸಮೀಕ್ಷೆ ಪ್ರಕಾರ ಇದುವರೆಗೆ 21,344 ಹೆಕ್ಟೇರ್ ಕೃಷಿ ಬೆಳೆ ಹಾಗೂ 8,759 ತೋಟಗಾರಿಕೆ ಬೆಳೆಗಳು ನಾಶವಾಗಿವೆ. ಕಂದಾಯ, ಕೃಷಿ, ತೋಟಗಾರಿಕೆ ಇಲಾಖೆ ಅಧಿಕಾರಿಗಳು ಜಂಟಿ ಸಮೀಕ್ಷೆ ನಡೆಸಿ ಹಾನಿಯ ಅಂದಾಜು ನಡೆಸುತ್ತಿದ್ದಾರೆ. ಹಾನಿಗೊಳಗಾದ ಬೆಳೆಗಳಲ್ಲಿ ಗೋಧಿ, ಮೆಕ್ಕೆ ಜೋಳ, ಸೋಯಾ, ಹತ್ತಿ ಇತರವು ಸೇರಿವೆ.

**ತುಮಕೂರು:** ತುಮಕೂರು ಜಿಲ್ಲೆಯಲ್ಲೂ ಧಾರಾಕಾರ ಮಳೆಯಿಂದಾಗಿ ರೈತರು ನಷ್ಟ ಅನುಭವಿಸಿದ್ದಾರೆ. ಪ್ರಾಥಮಿಕ ಅಂದಾಜಿನ ಪ್ರಕಾರ, ಸುಮಾರು 60,000 ಹೆಕ್ಟೇರ್ ಬೆಳೆ ಹಾನಿಯಾಗಿದೆ. ರಾಗಿ, ನೆಲಗಡಲೆ, ತೊಗರಿ ಬೇಳೆ ನಾಶವಾಗಿದೆ.

**ಕೊಪ್ಪಳ:** ಕೊಪ್ಪಳ ಜಿಲ್ಲೆಯನ್ನು ಭತ್ತದ ನಾಡು ಎಂದು ಕರೆಯಲಾಗುತ್ತದೆ. ಆದರೆ ಮಳೆಯಿಂದ ಸಾವಿರಾರು ಭತ್ತ ಬೆಳೆಗಾರರು ಬೆಳೆ ಕಳೆದುಕೊಂಡಿದ್ದು, ಸರಕಾರದ ನೆರವಿನ ನಿರೀಕ್ಷೆಯಲ್ಲಿದ್ದಾರೆ. ಕೊಪ್ಪಳದಲ್ಲಿ 2,500 ಹೆಕ್ಟೇರ್ ಕೃಷಿ ಭೂಮಿ ನಾಶವಾಗಿದೆ.

**ಚಿತ್ರದುರ್ಗ:** ಜಿಲ್ಲೆಯಲ್ಲಿ ಒಟ್ಟು 6 ಮಂದಿ ಪ್ರಾಣ ಕಳೆದುಕೊಂಡಿದ್ದು, ನೂರಾರು ಹೆಕ್ಟೇರ್ ಬೆಳೆ ಜಲಾವೃತವಾಗಿದೆ. 2000 ಎಕರೆ ತೋಟಗಾರಿಕೆ ಬೆಳೆಗಳು ಜಲಾವೃತವಾಗಿದೆ. ಕಳೆದ ವರ್ಷ ನಿರ್ಮಿಸಿದ ಅವೈಜ್ಞಾನಿಕ ಚೆಕ್ ಡ್ಯಾಂಗಳೇ ನಷ್ಟಕ್ಕೆ ಕಾರಣ ಎಂದು ರೈತರು ಆರೋಪಿಸಿದ್ದಾರೆ. ಅದೇ ರೀತಿ ಕಡಲೆ,ಈರುಳ್ಳಿ, ಜೋಳ ಕೂಡ ನಾಶವಾಗಿದೆ.

**ಹಾವೇರಿ:** ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ತವರು ಜಿಲ್ಲೆ ಹಾವೇರಿಯಲ್ಲಿ ನ.1ರಿಂದ ಇಲ್ಲಿಯವರೆಗೆ 18,444 ಹೆಕ್ಟೇರ್ ಬೆಳೆ ನಾಶವಾಗಿದ್ದು, ಹತ್ತಿ, ಸೋಯಾಬೀನ್, ಶೇಂಗಾ ಸೇರಿದಂತೆ ಇತರೆ ಬೆಳೆಗಳು ನಾಶವಾಗಿವೆ. ಸರಕಾರ ಮಧ್ಯಂತರ ಪರಿಹಾರ ನೀಡಬೇಕು ಎಂದು ರೈತರು ಆಗ್ರಹಿಸಿದ್ದಾರೆ.

**ಕೋಲಾರ:** ಜಿಲ್ಲೆಯಲ್ಲಿ ಅತಿವೃಷ್ಟಿಯಿಂದ 34,454 ಹೆಕ್ಟೇರ್ ಬೆಳೆ ನಾಶವಾಗಿದೆ. ರಾಗಿ, ಟೊಮೆಟೋ ಸೇರಿದಂತೆ ಇತರೆ ಬೆಳೆಗಳು ನಾಶವಾಗಿವೆ. ಕೋಲಾರ ತಾಲೂಕಿನಲ್ಲಿ ಸುರಿದ ಭಾರಿ ಮಳೆಗೆ ಆರು ಎಕರೆ ಟೊಮೆಟೋ ಬೆಳೆ ನಾಶವಾಗಿದೆ.



## ಇನ್ನೂ ಬೆಂಗಳೂರಿನಲ್ಲಿ ಅವಾಂತರ

ಮಳೆ ನಿಂತರು ಕೂಡ ಬೆಂಗಳೂರಿನ ಹಲವು ಪ್ರದೇಶದಲ್ಲಿ ಸಂಪೂರ್ಣ ನೀರು ಹರಿದು ಹೋಗಿಲ್ಲ ಹಲವಾರು ಪ್ರದೇಶಗಳಲ್ಲಿ ಅಪಾರ್ಟ್‌ಮೆಂಟ್ ಸುತ್ತ ನೀರು ತುಂಬಿದೆ. ಅದಲರಲ್ಲೂ ಯಲಹಂಕದಲ್ಲಿರುವ ಕೇಂದ್ರೀಯ ವಿಹಾರ ಅಪಾರ್ಟ್‌ಮೆಂಟ್ ಸುತ್ತ ನೀರು ತುಂಬಿದೆ ಅಲ್ಲಿ ರಾಜಕಾಲುವೆ ಇರುವ ಕಾರಣ ನೀರು ತುಂಬಿ ಹರಿದಿದ್ದು ನೀರು ಸುತ್ತ ಆವರಿಸಿಕೊಂಡಿತ್ತು.

ಈ ಅಪಾರ್ಟ್ ಮೆಂಟ್‌ಗೆ ಮುಖ್ಯಮಂತ್ರಿ ಕೂಡ ಭೇಟಿ ನೀಡಿ ಪರಿಶೀಲಿಸಿದ ಸಂದರ್ಭದಲ್ಲೂ ಕೂಡ ನೀರು ಇನ್ನೂ ಇಳಿಮುಖವಾಗಿರಲಿಲ್ಲ.

ಈ ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ ವಿವಿಧ ಭಾಷಿಕರು ನೆಲೆಸಿದ್ದಾರೆ. ಈಗ ಶೇ 30ರಷ್ಟು ಜನರನ್ನು ಮಾತ್ರ ಬೇರೆಡೆಗೆ ಸ್ಥಳಾಂತರಿಸಲಾಗಿದೆ. ಇನ್ನೂ ಶೇ 70ರಷ್ಟು ಜನರು ಇಲ್ಲಿಯೇ ಉಳಿದಿದ್ದಾರೆ. ಮೂರು ದಿನಗಳಿಂದ ವಿದ್ಯುತ್, ಜನರೇಟರ್ ಮತ್ತು ಲಿಫ್ಟ್ ಮೊದಲಾದ ಮೂಲಸೌಕರ್ಯಗಳಿಲ್ಲದೆ ತೊಂದರೆಯಾಗಿದೆ.

ಕೇಂದ್ರೀಯ ವಿಹಾರ ಅಪಾರ್ಟ್‌ಮೆಂಟ್‌ನ ತಳ ಮಹಡಿಯಲ್ಲಿ ನಿಲ್ಲಿಸಿದ ದ್ವಿಚಕ್ರವಾಹನಗಳು ನೀರಿನಲ್ಲಿ ತೇಲುತ್ತಿವೆ. ಇಲ್ಲಿ ನಿಲ್ಲಿಸಿದ್ದ ಅನೇಕ ಕಾರುಗಳ ಎಂಜಿನ್ ಒಳಗೆ ನೀರು ನುಗ್ಗಿದ್ದು, ಹಾನಿಗೊಳಗಾಗಿವೆ.'ಲವರು ದುರಸ್ತಿ ಮಾಡಿಸಲು ದ್ವಿಚಕ್ರವಾಹನಗಳನ್ನು ನೀರಿನಲ್ಲೇ ತಳ್ಳಿಕೊಂಡು ಗ್ಯಾರೇಜ್‌ಗೆ ಸಾಗಿಸಿದ್ದಾರೆ.ನೀರು ನುಗ್ಗಿದ್ದ ಮನೆಗಳನ್ನು ಸ್ವಚ್ಛಗೊಳಿಸುವ ಕಾರ್ಯವೂ ನಡೆಯಿತು. ನೀರು ನುಗ್ಗಿ ರೆಫ್ರಿಜರೇಟರ್, ಟಿ.ವಿ. ಮತ್ತಿತರ ಉಪಕರಣಗಳು ಹಾನಿಗೊಳಗಾಗಿವೆ.

## '175 ಮನೆಗಳಿಗೆ ಹಾನಿ'

'ನೀರು ನುಗ್ಗಿ 175 ಮನೆಗಳಿಗೆ ಹಾನಿ ಉಂಟಾಗಿದೆ ಎಂದು ಪ್ರಾಥಮಿಕ ಸಮೀಕ್ಷೆಯಿಂದ ತಿಳಿದುಬಂದಿದೆ. ಯಾವ ಮನೆಗೆ ಎಷ್ಟು ಪ್ರಮಾಣದಲ್ಲಿ ಹಾನಿಯಾಗಿದೆ 'ಯಲಹಂಕದ ಸುರಭಿ ಬಡಾವಣೆಯಲ್ಲಿ 40 ಮಂದಿ ಕಾರ್ಮಿಕರು ಧವಸ ಧಾನ್ಯವಿಲ್ಲದೇ ಸಮಸ್ಯೆಗೆ ಸಿಲುಕಿದ್ದರು. ಅವರಿಗೆ ಬಿಬಿಎಂಪಿಯಿಂದ ಆಹಾರ ಧಾನ್ಯಗಳನ್ನು ಪೂರೈಸಲಾಗಿದೆ. ಅಲ್ಲದೆ ಇನ್ನೂ ಹಲವಾರು ಪ್ರದೇಶದಲ್ಲಿ ಅದರಲ್ಲೂ ಬೆಂಗಳೂರಿನ ಸುತ್ತಲಿರುವ ಪ್ರದೇಶದಲ್ಲಿ ಸಾಕಷ್ಟು ಹಾನಿಗೊಳಗಾಗಿವೆ ಇವೆಲ್ಲಕ್ಕೂ ರಾಜಕಾಲುವೆ ದುರಸ್ತಿ ಮಾಡದೆ ಇರುವುದು.

# ರೈತರ ಪ್ರತಿಭಟನೆ ಜೊತೆ ಜೊತೆಗೆ ರಾಜಕಾರಣದ ಆಂತರಿಕ ಪಾತ್ರ

●9ನೇ ಪುಟದಿಂದ...

ಅತಿ ಕಡಿಮೆ ಬೆಲೆಗೆ ಗುತ್ತಿಗೆ ಕೃಷಿಯ ಆಧಾರದಲ್ಲಿ ಆಹಾರೋತ್ಪನ್ನಗಳನ್ನು ಖರೀದಿಸುವ ಉದ್ಯಮಿಗಳು, ಮಾರುಕಟ್ಟೆಯ ಮೇಲೆ ಸಂಪೂರ್ಣ ಹಿಡಿತ ಸಾಧಿಸುವುದೇ ಅಲ್ಲದೆ, ಪದಾರ್ಥಗಳನ್ನು ತಮ್ಮ ಗೋದಾಮುಗಳಲ್ಲಿ ಶೇಖರಿಸಿ, ಲಾಭದಾಯಕ ಬೆಲೆಗೆ ಮಾರಾಟ ಮಾಡುವ ಒಂದು ಲೂಟಿಕೋರ ಪದ್ಧತಿಗೆ ಈ ಕಾಯ್ದೆ ನೆರವಾಗುತ್ತದೆ.

ಬೀಜ ಬಿತ್ತನೆಯಿಂದ ಹಿಡಿದು ತನ್ನ ಉತ್ಪನ್ನಗಳು ಗ್ರಾಹಕರಿಗೆ ತಲುಪುವವರೆಗೂ ತನ್ನ ಸಂಪರ್ಕ ಮತ್ತು ಸಂಬಂಧವನ್ನು ಉಳಿಸಿಕೊಳ್ಳುತ್ತಿದ್ದ ರೈತ ಈಗ ತನ್ನ ಹೊಲ ಗದ್ದೆಗಳಲ್ಲೇ ಎಲ್ಲ ಅವಕಾಶಗಳನ್ನೂ ಕಳೆದುಕೊಳ್ಳುತ್ತಾನೆ. ಈ ಮೊದಲೂ ಮಧ್ಯವರ್ತಿಗಳ ಉಪಟಳದಿಂದ ರೈತರು ಸಾಕಷ್ಟು ನಷ್ಟ ಅನುಭವಿಸುತ್ತಿದ್ದುದು ವಾಸ್ತವವೇ ಆದರೂ, ಈ ಹೊಸ ಕಾಯ್ದೆಗಳಿಂದ ಸ್ಥಳೀಯ ಮಧ್ಯವರ್ತಿಗಳ ಸ್ಥಾನವನ್ನು ಕಾರ್ಪೋರೇಟ್ ಉದ್ಯಮಿಗಳು ಆಕ್ರಮಿಸಿಕೊಳ್ಳುತ್ತಾರೆ. ಹೆಚ್ಚಿನ ಬಂಡವಾಳ ಮತ್ತು ಅತ್ಯುತ್ತಮ ಮೂಲ ಸೌಕರ್ಯಗಳನ್ನು ಹೊಂದಿರುವ ಬೃಹತ್ ಬಂಡವಾಳದ ಕಾರ್ಪೋರೇಟ್ ಉದ್ದಿಮೆಗಳು ನೆಲದಿಂದ ಮಾರುಕಟ್ಟೆಯವರೆಗೆ ತಮ್ಮ ಹಿಡಿತ ಸಾಧಿಸುತ್ತಾರೆ. ಈ ಪ್ರಕ್ರಿಯೆಯಲ್ಲಿ ರೈತ ತನ್ನ ಸ್ವಾಯತ್ತತೆಯನ್ನು ಕಳೆದುಕೊಂಡು, ಮಾರುಕಟ್ಟೆಯ ಗುಲಾಮಗಿರಿಗೆ ಒಳಗಾಗುತ್ತಾನೆ.

ಇದನ್ನು ಹೊರತುಪಡಿಸಿ ಕೇಂದ್ರ ಸರ್ಕಾರ ಜಾರಿಗೊಳಿಸಿರುವ ವಿದ್ಯುಚ್ಛಕ್ತಿ (ತಿದ್ದುಪಡಿ) ಮಸೂದೆ 2020 ಸಹ ರೈತ ವಿರೋಧಿಯಾಗಿದೆ. ಈ ಕಾಯ್ದೆಯನ್ನು ಜಾರಿಗೊಳಿಸುವುದಾಗಿ ಈ ವರ್ಷದ ಬಜೆಟ್‌ನಲ್ಲಿ ಘೋಷಿಸಲಾಗಿದ್ದು, ಈಗಾಗಲೇ ಹೊಸ ನಿಯಮಗಳನ್ನು ಜಾರಿಗೊಳಿಸುವ ಸಿದ್ಧತೆಗಳು ನಡೆದಿವೆ. ಈ ಕಾಯ್ದೆಯನ್ವಯ ವಿದ್ಯುತ್ ಪ್ರಸರಣವನ್ನು ಮುಕ್ತಗೊಳಿಸಿ ಖಾಸಗಿ ಉದ್ದಿಮೆಗಳಿಗೂ ವಿದ್ಯುತ್ ಉತ್ಪಾದನೆ, ವಿತರಣೆ ಮತ್ತು ಪ್ರಸರಣದ ಹಕ್ಕುಗಳನ್ನು ನೀಡಲಾಗುತ್ತದೆ. ಈಗಿರುವ ರಾಜ್ಯಾವಾರು ವಿದ್ಯುತ್ ನಿಗಮಗಳಿಗೆ ಹೊಸ ಕಾರ್ಪೋರೇಟ್ ಉದ್ಯಮಿಗಳು ಪ್ರಬಲ ಪ್ರತಿಸ್ಪರ್ಧಿಗಳಾಗುತ್ತಾರೆ. ಗ್ರಾಹಕರಿಗೆ ವಿದ್ಯುತ್ ಸರಬರಾಜುದಾರರನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯವನ್ನೂ ನೀಡಲಾಗುತ್ತದೆ. ಇದು ವಿದ್ಯುಚ್ಛಕ್ತಿ ಕ್ಷೇತ್ರವನ್ನು ಹಂತಹಂತವಾಗಿ ಖಾಸಗೀಕರಣಗೊಳಿಸುವ ಪ್ರಥಮ ಹೆಜ್ಜೆಯಾಗಿದೆ ಎಂದು ಹೇಳಬೇಕಿಲ್ಲ. ಈ ಕಾಯ್ದೆ ಜಾರಿಯಾದರೆ ಕ್ರಮೇಣ ಖಾಸಗಿ ವಿದ್ಯುತ್ ಉದ್ದಿಮೆಗಳು ಮಾರುಕಟ್ಟೆಗೆ ಪೂರಕವಾದಂತಹ ನೀತಿಗಳನ್ನು ಅನುಸರಿಸುತ್ತವೆ. ವಾಣಿಜ್ಯೋದ್ಯಮಿಗಳಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗುತ್ತದೆ. ಗೃಹ ಬಳಕೆಯ ವಿದ್ಯುತ್ ದರಗಳು ಗಗನಕ್ಕೇರುತ್ತವೆ. ವಿದ್ಯುತ್ ಶುಲ್ಕದ ಮೇಲೆ ಯಾವುದೇ ನಿಯಂತ್ರಣವಿಲ್ಲದೆ ಮಾರುಕಟ್ಟೆಯ ವ್ಯಾಪ್ತಿಗೊಳಪಡುತ್ತದೆ. ಕ್ರಮೇಣವಾಗಿ ರೈತರಿಗೆ ನೀರಾವರಿ ಪಂಪ್‌ಸೆಟ್‌ಗಳಿಗಾಗಿ ಈಗ ನೀಡಲಾಗುತ್ತಿರುವ ಉಚಿತ ವಿದ್ಯುತ್ ಸರಬರಾಜು ಸ್ಥಗಿತಗೊಳ್ಳುತ್ತದೆ. ಪಂಪ್‌ಸೆಟ್ ನೀರಾವರಿಯನ್ನೇ ಅವಲಂಬಿಸಿದ ರೈತರು ಮತ್ತೊಮ್ಮೆ ಕಾರ್ಪೋರೇಟ್ ಗುಲಾಮಗಿರಿಗೆ ಒಳಗಾಗುವಂತಾಗುತ್ತದೆ.





ಕೃಷಿ ವಲಯವನ್ನು ಖಾಸಗೀಕರಣಗೊಳಿಸುವ ಮತ್ತು ಕಾರ್ಪೋರೇಟ್ ಬಂಡವಾಳಕ್ಕೆ ಕೃಷಿಯಲ್ಲಿ ಮುಕ್ತವಾಗಿ ಪ್ರವೇಶಿಸಲು ಅವಕಾಶ ನೀಡುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಮತ್ತು ಕರ್ನಾಟಕವನ್ನೂ ಸೇರಿದಂತೆ ಹಲವು ರಾಜ್ಯ ಸರ್ಕಾರಗಳು ಭೂ ಸುಧಾರಣಾ (ತಿದ್ದುಪಡಿ) ಮಸೂದೆಗಳನ್ನು ಜಾರಿಗೊಳಿಸಿವೆ. ಕರ್ನಾಟಕದಲ್ಲಿ ಜಾರಿಗೊಳಿಸಲಾಗಿರುವ ನೂತನ ಭೂ ಸುಧಾರಣಾ ಕಾಯ್ದೆಯಲ್ಲಿ ಹಲವು ಮಾರಕ ತಿದ್ದುಪಡಿಗಳನ್ನು ಮಾಡಲಾಗಿದೆ. ಹಳೆಯ ಭೂ ಸುಧಾರಣಾ ಕಾಯ್ದೆಯ ಸೆಕ್ಷನ್ 79ಎ ಅನ್ವಯ ಕೃಷಿ ಭೂಮಿಯನ್ನು ಖರೀದಿಸುವವರ ವಾರ್ಷಿಕ ಆದಾಯ 25 ಲಕ್ಷ ರೂಗಳಿಗೂ ಕಡಿಮೆ ಇರಬೇಕಿತ್ತು. ಮತ್ತು ಸೆಕ್ಷನ್ 79ಬಿ ಅನ್ವಯ ಕೃಷಿಯನ್ನೇ ಅವಲಂಬಿಸಿರುವವರು ಮಾತ್ರವೇ ಕೃಷಿ ಭೂಮಿಯನ್ನು ಖರೀದಿಸಬಹುದಿತ್ತು. ಈ ಎರಡೂ ನಿಯಮಗಳನ್ನು ಈಗ ಅಸಿಂಧುಗೊಳಿಸಲಾಗಿದ್ದು, ಯಾವುದೇ ಕಾರ್ಪೋರೇಟ್ ಉದ್ಯಮಿಯೂ ಸಹ ಕೃಷಿ ಭೂಮಿಯನ್ನು ಖರೀದಿಸಲು ಅವಕಾಶ ನೀಡಲಾಗಿದೆ. ಖರೀದಿಸಬಹುದಾದ ಕೃಷಿಭೂಮಿಯ ಪ್ರಮಾಣವನ್ನೂ ತಿದ್ದುಪಡಿ ಮಾಡಲಾಗಿದ್ದು ನೂತನ ಕಾಯ್ದೆಯನ್ವಯ ಕುಟುಂಬದ ಒಬ್ಬ ವ್ಯಕ್ತಿ 216 ಎಕರೆ ಕೃಷಿ ಭೂಮಿಯನ್ನು ಹೊಂದಿರಬಹುದಾಗಿದೆ. ಇದು ದೊಡ್ಡ ಭೂಮಾಲೀಕರಿಗೆ ನೆರವಾಗುವುದೇ ಅಲ್ಲದೆ ಕಾರ್ಪೋರೇಟ್ ಉದ್ಯಮಿಗಳು ನೂತನ ಭೂಮಾಲೀಕ ವರ್ಗಗಳಾಗಿ ರೂಪುಗೊಳ್ಳಲು ನೆರವಾಗುತ್ತದೆ.

# ಅನ್ವೇಷಣೆಗಳ ಕರಾಳ ಹಾಗೂ ಬೆಳಕಿನ ಸಂಕೀರ್ಣ ಲೋಕ



ಸ್ಥಿತಿಬಿಂಬ

ಡಾ.ಶಿವಕುಮಾರ್ ಕಂಪ್ಲಿ



ಸಂಪ್ರದಾಯಿಕ ಚರಿತ್ರೆಯೆಂದರೆ ಏಕಮುಖಿಯಾದುದು. ಆಡಳಿತ ಮೂಲವಾದದು.ಪ್ರಭು ಪ್ರಧಾನವಾದುದು. ರಾಜಕೀಯವೇ ಮುಖ್ಯವಾದ ಇದರ ಆವರಣದೊಳಗೆ ಉತ್ಪಾದನಾ ಪ್ರಧಾನರ ಕಥನಗಳು ನಿರ್ಲಕ್ಷ್ಯಕ್ಕೆ ಒಳಗಾಗಿವೆ.ತೆಳುವಾದ ಸರಳವಾದ ಚರಿತ್ರೆಯ ಈ ರೂಪಗಳ ಮಿತಿಯನ್ನ ಗ್ರಹಿಸಿಯೇ ಹೊಸ ಬಗೆಯ ಚರಿತ್ರೆಗಳನ್ನ ಕಟ್ಟುವ ರೂಪಿಸುವ ಪರಂಪರೆಗಳು ಈಗೀಗ ಗಟ್ಟಿಗೊಳ್ಳುತ್ತಿವೆ.ಜನ ಚರಿತ್ರೆ,ಮಹಿಳಾ ಚರಿತ್ರೆ,ಪ್ರಾದೇಶಿಕ ಚರಿತ್ರೆ,ಸಬಾಲ್ಟರ್ನ್ ಚರಿತ್ರೆ..ಹೀಗೆ ಹೊಸ ಹೊಸ ಅನ್ವೇಷಣಾ ಬರಹಗಳ ಕ್ರಮಗಳನ್ನ ಕಾಣಬಹುದಾಗಿದೆ. ಈ ನೆಲೆಯಲ್ಲಿ ಪರಂಪರೆಯ ಸಂಪ್ರದಾಯಿಕ ಚರಿತ್ರೆಯು ಗುರ್ತಿಸಲಾರದ ಚರಿತ್ರೆಯ ಬುನಾದಿಯಂತೆಯೇ ಆಗಿರುವ ಕಥನವೇ ರೈತರ ಚರಿತ್ರೆ.


ಆಡಳಿತ ಪರ ಒಲವಿನ ಸಂಪ್ರದಾಯಿಕ ಚರಿತ್ರೆಯ ಚೌಕಟ್ಟಿನ ದಿಕ್ಕನ್ನ ಬಿಟ್ಟು ಜನಪರವಾದ ಶ್ರಮಿಕರ ಚರಿತ್ರೆಯನ್ನ ಬರೆದವರು ಮಾರ್ಕ್ಸವಾದಿಗಳು.ಪರಂಪರಾ ಬರಹಗಳಲ್ಲಿ ಭಾರತವೆಂದರೆ ಹಳ್ಳಿಯೆಂದು ಭಾರತದ ಆತ್ಮವೆಂದರೆ ರೈತರೆಂದು ಕರೆಯಲ್ಪಡುವ ಆದರ್ಶ ಪ್ರಧಾನವಾದ ಕಾಲ್ಪನಿಕ ಬರಹಗಳ ಆವರಣಗಳಲ್ಲಿ ಹುದುಗಿದ ನೋವು ಸಂಕಟಗಳ ಎಳೆಗಳನ್ನ ವಾಸ್ತವದ ಅವರ ಹರಿದ ಅಂಗಿಗಳ ಬೆವರ ಕ್ಷಣಗಳನ್ನ ಜನಪರ ಬರಹಗಳು ಮೋಕ್ಷ ಪ್ರಧಾನ, ಧರ್ಮ ದೃಷ್ಟಿಯ ಸಂತಮಾದರಿಯ ನೋಟವನ್ನ ಛಿದ್ರಿಸಿ ತೋರಿಸಿವೆ.ರೈತರನ್ನ ಕರುಣೆಯ,ದಯನೀಯ ರೂಪಕಗಳಲ್ಲೇ ನಿಲ್ಲಿಸುವ ಅವರ ಏಕರೂಪಿ ಶಿಲ್ಪವನ್ನ ಇವರ ಬರಹಗಳು ತುಳಿದು ಹಾಕಿ ರೈತ ಶಕ್ತಿಯ ಬಹುರೂಪಗಳನ್ನ ನಿರ್ಬಿಡೆಯಿಂದ ಕಡೆದು ಕೊಟ್ಟಿವೆ. ಈ ಬಗೆಯ ನೋಟಕ್ಕೆ ಸಾಕ್ಷಿಯೆಂಬಂತೆ ಕಾಣುವ ಪುಸ್ತಕವೇ ಇರ್ಫಾನ್ ಹಬೀಬ್ ರ 'ಭಾರತ ಚರಿತ್ರೆಯಿಲ್ಲಿ ರೈತ'.

ಅನುವಾದವೆಂಬುದು ಮತ್ತೊಂದು ಭಾಷೆಯಿಂದ ಹಾಲೀ ಭಾಷೆಗೆ ಪರಿಚಿತವಾಗುವಂತಹ ಹೊಸ ಬರಹ ಮಾತ್ರವಲ್ಲ.ಅನುವಾದವೆಂಬುದು ತನ್ನಲ್ಲಿಲ್ಲದ ಹೊಸ ಆಲೋಚನೆ, ಹೊಸ ಹೊಸ ತತ್ವಗಳ ಬೆಳಕು ಎಂದು ಭಾವಿಸಿದವರು ಡಾ.ಬಿ.ಸುಜ್ಞಾನಮೂರ್ತಿ ಇವರು ಕನ್ನಡಕ್ಕೆ ತೆಲುಗಿನಿಂದ ಇಂತಹ ಅನೇಕ ಬೆಳಕಿನ ಅಲೆಗಳನ್ನ ಮೊಗೆ ಮೊಗೆದು ತಂದು ಕನ್ನಡದ ವಿಚಾರಗಳ ಬೇರಿಗೆ ಸತ್ವದ ಗೊಬ್ಬರ ಹಾಗೂ ಜೀವಸೆಲೆಯ ನೀರೆರೆದಿದ್ದಾರೆ. ಯಾರದೀ ಕಾಡು,ಜಾತಿವಿನಾಶ ವರ್ಗವಿನಾಶ,ಪೆರಿಯರ್ ಜೀವನ ಚಳುವಳಿ,ಕಂಚ ಐಲ ಯ್ಯ ಅವರ ಬರಹಗಳು,ತೆಲಂಗಾಣ ಹೋರಾಟದಂತಹ ಅಪೂರ್ವ ಜೀವಪರ ನೋಟದ ಪುಸ್ತಕಗಳ ಲೇಖಕರಿವರು.

ಇವರು ಅನುವಾದಿಸಿದ 'ಭಾರತ ಚರಿತ್ರೆಯಲ್ಲಿ ರೈತ' ಪುಸ್ತಕವು ಚರಿತ್ರೆಯ ಹುಟ್ಟು ಬೆಳವಣಿಗೆಯ ಹೊಸ ರೂಪಗಳನ್ನ ರೈತರ ಕಥನಗಳ ಮೂಲಕ ಅನ್ವೇಷಿಸುತ್ತಾ ಹೋಗುತ್ತದೆ. ರೈತನೆಂದರೆ ಯಾರು?,ರೈತರ ವರ್ಗೀಕರಣಗಳು ಹೇಗೆ ಸೃಷ್ಟಿಯಾದವು?,ಪರಂಪ 'ರೆಯೊಳಗಿನ ರೈತರ ಸವಾಲು ಸಾಹಸಗಳು,ರೈತರ ಜೀವನ ಪಲ್ಲಟಗಳಿಂದಾದ ಸಾಮಾಜಿಕ ರೂಪಗಳು, ರೈತರು ಚರಿತ್ರೆಯ ಉದ್ದಕ್ಕೂ ತಣ್ಣಗೆ ಅನುಭವಿಸಿದ ಶೋಷಣೆಯ ಭಿನ್ನ ಭಿನ್ನ ಸ್ವರೂಪಗಳು,ಪಟ್ಟ ಭದ್ರರ ವಿರುದ್ಧ ನಡೆದ ರೈತರ ದಂಗೆಗಳನ್ನ ಈ ಪುಸ್ತಕವು ಕಟ್ಟಿಕೊಡುತ್ತಾ ಹೋಗಿದೆ.

ಚರಿತ್ರೆ ಪ್ರಧಾನವಾದ ಈ ಕಥನದ ವಿಶೇಷವೆಂದರೆ ಶೋಷಿತ ಮತ್ತು ಶೋಷಕ ಎಂಬ ಎರಡೂ ಎಳೆಗಳು ಹೇಗೆ ರೈತವರ್ಗಗಳನ್ನ ಆವರಿಸಿಕೊಂಡಿವೆ ಎಂಬುದನ್ನ ತೋರಿಸಿಕೊಟ್ಟಿರುವುದು.ಭೂಮಿ ಹೊಂದಿರುವ ರೈತ,ಗೇಣಿ ರಹಿತ ರೈತ,ದಿನಗೂಲಿ ರೈತ ಎಂದು ವಿಭಜಿಸುವ ಈ ನೋಟವು ಭೂಮಿ ಹೊಂದಿರುವ ರೈತ ಭೂಮಿ ಇಲ್ಲದ ರೈತರನ್ನ ಶೋಷಿಸುವ ಸೂಕ್ಷ್ಮ ರೀತಿಯನ್ನ ತೋರುತ್ತಾರೆ.ನದಿಯ ಮೂಲಕ ಕೃಷಿಯ ಇತಿಹಾಸ ಕಟ್ಟಿಕೊಡುವ ಈ ಪುಸ್ತಕವು ಸಿಂಧೂ ಕಣಿವೆಯ ರೈತರ ಹುಟ್ಟನ್ನ ಆ ನಂತರದಲ್ಲಿನ ಗಂಗಾನದಿಯ ಕಣಿವೆಯಲ್ಲಿನ ರೈತರ ಬೆಳವಣಿಗೆಯನ್ನ ವಿಶ್ಲೇಷಿಸಿದ್ದಾರೆ.ಸಿಂಧೂ ನದಿಯ ಪರಂಪರೆಯೊಳಗೇ ಕೃಷಿಯಿಂದ ದೂರವಾದವರು ವೈಶ್ಯ,ಶೂದ್ರರಾದವರು ಎಂಬ ನೋಟವು ಕುತೂಹಲಕಾರಿಯಾದುದು.ಭೂವಿ ‌ಯನ್ನ ಸೀತಾ ಎಂದು ಕರೆದ ಜಮೀನ್ದಾರರು ಅದನ್ನ ಗುಲಾಮರು ಮತ್ತು ಕೂಲಿಗಳ ಮೂಲಕ ನಡೆಸುತ್ತಿದ್ದ ರೀತಿಯು ಪ್ರಾಚೀನ ಮತ್ತು ಮಧ್ಯಕಾಲೀನ ಚರಿತ್ರೆಯಲ್ಲಿ ಧರ್ಮ ಪ್ರಧಾನ ರೈತ ಪರಂಪರೆಯು ಭೂರಹಿತ ಹಾಗೂ ಕೂಲಿ ಕೃಷಿಕರ ಮೇಲೆ ಹೇಗೆ ಶೋಷಣೆಯನ್ನ ಬಹು ಬಣ್ಣಗಳ ಹೂವು,ಮುಳ್ಳು,ಕಾಯಿಗಳ ಕಥನಗಳಾಗಿಸಿವೆ ಎಂಬುದನ್ನ ತೋರಿಸಿಕೊಟ್ಟಿದ್ದಾರೆ.

ರೈತನೆಂದರೆ ಯಾರು? ಎಂಬ ಪ್ರಶ್ನೆ ಹಾಕಿಕೊಂಡು " ಭೂಮಿಯ ಮೇಲೆ ಮಾನವ ಆಹಾರ ಸಂಪಾದನೆಗಾಗಿ ರೈತನು ಹಲವು ಮಾರ್ಗಗಳನ್ನ ಅನುಸರಿಸಿದ್ದಾನೆ ಎಂಬ ಕಾಯಕ ನೆಲೆಗೆ ಒತ್ತು ನೀಡುತ್ತಲೇ ಪರಂಪರೆಯ ಲ್ಲಿ ದುಡಿವವರೆಲ್ಲಾ ಒಂದೇ ಅಲ್ಲ ಎಂಬ ಅರ್ಥ ವಿಸ್ತರಿಸುತ್ತಾ ಇಲ್ಲಿ ರೈತಾಪಿ ವರ್ಗಗಳನ್ನ ಮೂರು ಬಗೆಗಳಲ್ಲಿ ನಿರ್ವಚಿಸಿಕೊಂಡಿದ್ದಾರೆ.1) ಶ್ರೀಮಂತ ರೈತರು 2) ಮಧ್ಯಮ ವರ್ಗದ ರೈತರು 3) ಬಡ ರೈತರು




ಮೊದಲ ಉನ್ನತವರ್ಗ ಉತ್ಪಾದನೆಯನ್ನ ಕೂಲಿಗಳ ಮೂಲಕವೇ ಮಾಡಿಸುವವರು.ಎರಡನೆಯ ಮಧ್ಯಮವರ್ಗ ತಮ್ಮ ಕುಟುಂಬದ ಶ್ರಮದ ಮೇಲೆಯೇ ಆಧಾರ ಪಡುವವರು.ಮೂರನೇ ವರ್ಗ ಬಡ ರೈತವರ್ಗವೆಂದರೆ ಭೂಮಿ ಇಲ್ಲದವರು ಕೃಷಿ ಕೂಲಿಕಾರ ವರ್ಗ.

ವ್ಯವಸಾಯಕ್ಕೂ ಮೊದಲು ರೈತ ಅಲೆಮಾರಿಯಾಗಿದ್ದ.ಬೇಟೆಯಾಡಿ ಕಾಯಿ ಕಸರನ್ನ ಆಯ್ದುಕೊಂಡು ತಿಂದು ಬದುಕುತಿದ್ದ.ಆನಂತರ ಈತ ಆಹಾರ ಸಂಗ್ರಹಿಸಿಕೊಳ್ಳುವ ಸ್ಥಿತಿಯಿಂದ ಸ್ವತಃ ಉತ್ಪಾದನಾ ಹಂತಕ್ಕೆ ಬಂದ.ನೇಗಿಲ ಶೋಧನೆಗೂ ಮೊದಲು ಸ್ತ್ರೀ ಪ್ರಧಾನವಾಗಿದ್ದ ಕೃಷಿಯು ಕುಟುಂಬದಲ್ಲೂ ಸ್ತ್ರೀ ಪ್ರಧಾನ್ಯತೆಯನ್ನೇ ಪಡೆದಿತ್ತು. ನೇಗಿಲು ಶೋಧನೆಯ ನಂತರದ ವ್ಯವಸಾಯ ಹಂತದಿಂದ ಸಮಾಜ ರಚನೆಯಲ್ಲಿ ಪಿತೃ ಪ್ರಧಾನತೆಯ ಕುಟುಂಬದ ಹುಟ್ಟಿಗೆ ಕಾರಣವಾಯಿತಲ್ಲದೆ ಏಕಪತ್ನಿ ವ್ರತಕ್ಕೂ ಕಾರಣವಾಯಿತು.

ಸಿಂಧೂ ಕಣಿವೆಯ ನಾಗರೀಕತೆಯಲ್ಲಿ ರಂಗ ಪ್ರವೇಶ ಮಾಡಿದ ಆರ್ಯರ ಆಗಮನದ ನಂತರ ಪುರೋಹಿತ ಸಮಾಜ ಪ್ರಧಾನ್ಯತೆಗೆ ಕಾರಣವಾಯಿತು.ಪ್ರಧಾನ ಹಂತದಲ್ಲಿದ್ದ ಕೃಷಿಕ ರೈತರು ಶೂದ್ರ ಸ್ಥಾನಕ್ಕಿಳಿದರು.ಭೂಮಿ ಇಲ್ಲದ ರೈತರು ದಸ್ಯುಗಳೆಂದು ಗುಲಾಮರೆಂದು ಕರೆಸಿಕೊಂಡರು. ವ್ಯವಸಾಯದಲ್ಲಿ ಶ್ರೀಮಂತವರ್ಗವು ಎತ್ತುಗಳಿಂದ ಹಾಗೂ ಗುಲಾಮರಿಂದ ಭೂಮಿಯಲ್ಲಿ ನೇಗಿಲನ್ನ ಎಳೆಸುತ್ತಿದ್ದರು.ಬುದ್ಧ ಜಾತಕ ಕತೆಗಳು ಕೂಡ ಒಬ್ಬೊಬ್ಬ ಯಜಮಾನನ ಹತ್ತಿರ ಮುವ್ವತ್ತು ಸಾವಿರದ ತನಕ ಪಶುಗಳು,ಹನ್ನೆರಡು ಸಾವಿರದ ಐವತ್ತರ ತನಕ ಗುಲಾಮರನ್ನ ಒಳಗೊಂಡಿದ್ದರು ಎಂಬ ಅಂಶವೇ ಈ ನಾಡಿನ ಶೋಷಕ ಪ್ರಧಾನ ಚರಿತ್ರೆಗೆ ಮುನ್ನುಡಿಯಂತಿದೆ.

ಪೂರ್ವದ ಸ್ತ್ರೀ ವ್ಯವಸಾಯ ಕಾಲದಲ್ಲಿ ಜಾತಿ ರಹಿತ ಸಮಾಜವಿತ್ತು. ಪುರುಷ ರೈತರ ಆವಿರ್ಭಾವದ ನಂತರ ಶ್ರಮವಿಭಜನೆ ಹಂತ ಶುರುವಾಗಿ ಕಮ್ಮಾರ,ಅಕ್ಕಸಾಲಿ,ರಥಚೋದಕ ,ವೈದ್ಯ ಎಂಬ ವೃತ್ತಿಗಳು ಜಾತಿಗಳಾದವು.ಭೂರಹಿತರು ಕೀಳು ಕುಲಗಳೆಂದು ಕರೆಸಿಕೊಂಡವು.ಕಾಡು ಮತ್ತು ನಾಡಿನ ಜನರ ನಡುವೆ ಸಂಘರ್ಷಗಳು ಏರ್ಪಟ್ಟವು. ಕಾಡ ಆಹಾರ ಸಂಗ್ರಹಿಸುವ ಬೇಟೆಯಾಡುವ ,ಮೀನು ಹಿಡಿಯುವ ಜನರನ್ನ ಬಹಿಷ್ಕೃತರೆಂದು, ಚಾಂಡಾಳರೆಂದು,ಶ್ವಪಚರೆಂದು ಇವರನ್ನ ಊರ ಹೊರಗೇ ಇರಿಸಬೇಕೆಂಬ ನಿಂಬಂಧನೆಗಳೂ ಹುಟ್ಟಿಕೊಂಡವು.

ಮಧ್ಯಮವರ್ಗದ ಕುಟುಂಬದ ಶ್ರಮದ ಮೂಲಕ ವ್ಯವಸಾಯ ಮಾಡುತಿದ್ದ ರೈತರನ್ನ ಜಮೀನ್ದಾರರೆನಿಸಿಕೊಂಡ ಬ್ರಾಹ್ಮಣ ಅಗ್ರಹಾರಗಳು ಹಾಗೂ ಪ್ರಭುಗಳು ತೆರಿಗೆಗಳ ಮೂಲಕ ಉದ್ದಕ್ಕೂ ಶೋಷಿಸುತ್ತಲೇ ಇದ್ದರು.ಸುವರ್ಣಯುಗವೆಂದು ಕರೆಸಿಕೊಂಡ ಗುಪ್ತರ ಕಾಲದಲ್ಲೂ ಹಲವು ಬಗೆಯ ಇಂತಹ ತೆರಿಗೆಗಳ ಜೊತೆಯಲ್ಲಿ ಸದ್ಭಾಗ (ಧರ್ಮಭಾಗ) ಎಂಬ ತೆರಿಗೆಯೂ ಇತ್ತು.ಜಮೀನ್ದಾರಿಕೆಯ ವ್ಯವಸ್ಥೆ ಯು ಬೆಳೆದಂತೆಲ್ಲಾ ರೈತರನ್ನ ಶೋಷಿಸುವ ಹಲವು ವರ್ಗಗಳೇ ಹುಟ್ಟಿಕೊಂಡವು.ಸಾಮಂತ,ಠಾಕೂರರು ,ರಣಕರು, ರೌತರು ಜೊತೆಗೆ ರಾಜರುಗಳ ಯೋಧ ವರ್ಗಗಳು ರೈತಾಪಿವರ್ಗಗಳನ್ನ ದಂಡಿಸುತ್ತಲೇ ಬಂದಿವೆ.

ರೈತರು ತಮ್ಮ ಮೇಲಿನ ವಿಪರೀತ ತೆರಿಗೆಗಳ ವಿರುದ್ದ ದಂಗೆ ಎದ್ದ ಚಿತ್ರಗಳನ್ನ ದಾಖಲಿಸುವ ಈ ಪುಸ್ತಕವು ತುಘಲಕ್ಕನ ವಿರುದ್ದ ದ ರೈತರ ದಂಗೆಯನ್ನ ಚಿತ್ರಿಸುತ್ತ ಅದರ ಪರಿಣಾಮ ಶೂಲಕ್ಕೇರುವ ಕಣ್ಣು ಕೀಳಿಸಿಕೊಳ್ಳುವ ಶಿಕ್ಷೆಗೆ ಗುರಿಯಾದ ಸಂಗತಿಯನ್ನ ದಾಖಲಿಸಿದೆ.ಇಂತಹ ಶಿಕ್ಷೆಯಿಂದ ತಪ್ಪಿಸಿಕೊಂಡು ಕಾಡು ಪಾಲಾದ ರೈತರನ್ನ ಸುಲ್ತಾನರ ಸೈನ್ಯಗಳು ಸಿಕ್ಕಿದವರನ್ನ ಸಿಕ್ಕಿದಂತೆ ಕೊಂದ ಕ್ರೌರ್ಯದ ಕರಾಳ ಚಿತ್ರಗಳೂ ಇಲ್ಲಿ ದಾಖಲಿಸಲಾಗಿವೆ.

ತೆರಿಗೆಯ ಕ್ರೌರ್ಯ ಸಹಿಸದ ರೈತರು ಮರಾಠ ಸೈನ್ಯವನ್ನ ಸೇರಿ ಮುಸ್ಲಿಂ ಸೈನ್ಯದ ವಿರುದ್ದ ಜಯಗಳಿಸಿದ ಬಗೆಯೂ ಕುತೂಹಲಕಾರಿಯಾದುದು. ತೆರಿಗೆ ಭರಿಸದೆ ಶೋಷಣೆ ಸಹಿಸದ ರೈತರು, ಕುರಿಕಾಯುವವರು, ಬಡಗಿಗಳು, ಚಮ್ಮಾರರು ಉಳುಮೆ ಮಾಡದೇ ಜಮೀನ್ದಾರಿಕೆ ನಡೆಸುತಿದ್ದ ಮುಸ್ಲಿಂ ಪರವಾದ ರೈತರ ವಿರುದ್ದ ಜಯಗಳಿಸಿದರು. ಆದರೆ ಗೆದ್ದ ಮರಾಠ ಪಡೆಯೂ ತಮಗೆ ಸಹಾಯ ಮಾಡಿದ ರೈತರ ಜೀವನ ಬದಲಿಸಲಿಲ್ಲ ಎಂಬ ವಿಪರ್ಯಾಸವನ್ನೂ ಈ ಕಥನವು ಗಮನಿಸಿದೆ.

ಹೊಗಳಿಕೆಯ ಸಾಲಿನೊಂದಿಗಿನ ರೈತರ ಚಿತ್ರವನ್ನೂ ಚರಿತ್ರೆಯ ವಾಸ್ತವದ ರೈತರ ಚಿತ್ರಗಳನ್ನೂ ಎದುರಾಗಿಸಿ ಕವಿ ಬರಹಗಳ ಟೊಳ್ಳುತನವನ್ನ ಬಯಲಿಗೆಳೆಯುವ ಈ ಪುಸ್ತಕವು ಪ್ರಭುತ್ವಗಳಿಗೆ ಬುನಾದಿಯಾದ ರೈತವರ್ಗ ಹೇಗೆ ಶಿಲಾಯುಗ, ಕಬ್ಬಿಣ ಯುಗಗಳಿಂದ, ಮಾನವ ಲೋಕಕ್ಕೆ ಅನ್ನ ನೀಡುತ್ತಲೇ ಶೋಷಣೆಯನ್ನೂ ತನ್ನ ಹೆಗಲ ಮೇಲೆ ಹೊತ್ತುಕೊಂಡೇ ಬಂದಿದೆ ಎಂಬ ಅಂಶಗಳತ್ತ ಬೆರಳು ಮಾಡುವ ಸೂಕ್ಷ್ಮ ವಿವರಗಳನ್ನ ದಾಖಲಿಸಲಾಗಿದೆ.

ಏಕಮುಖಿಯಾದ ಲಾಭ ಪ್ರಧಾನ ರಾಜಕೀಯ ಚರಿತ್ರೆಗಿಂತಲೂ ಬಹುಮುಖಿಯಾದ ಉತ್ಪಾದನಾ ಪ್ರಧಾನ ರೈತ ಚರಿತ್ರೆಯು ಹಲವು ಅನ್ವೇಷಣೆಗಳ ಕರಾಳ ಮತ್ತು ಬೆಳಕುಗಳ ಸಂಕೀರ್ಣ ಲೋಕವಾಗಿದೆ ಹಾಗಾಗಿ ರೂಢಿಗತ ಮಾದರಿಯ ಬೆನ್ನು ಬೀಳದೆ ಇಂತಹ ಹೊಸ ಅನ್ವೇಷಣಾ ಪರ ಶೋಧನಾ ಮೂಲದ ಚರಿತ್ರೆಗಳು ಓದುಗರನ್ನೂ ಆಲೋಚಿಸುವಂತೆ ಮಾಡಬಲ್ಲವು.

ಧರ್ಮವನ್ನ ರೈತರ ಮೂಲಕ ಕಾಣುವ ಕವಿ ಬರಹಗಳ ಮುಂದೆ ಚರಿತ್ರೆಯನ್ನ ರೈತರ ಮೂಲಕ ಕಾಣುವ ಬರಹಗಳು ಹೇಗೆ ಭಿನ್ನ ಕೇಂದ್ರಗಳನ್ನ ಸೃಷ್ಟಿಸಬಲ್ಲವು ವರ್ತಮಾನಕ್ಕೂ ಬೆಳಕು ನೀಡಬಲ್ಲವು ಎಂಬಂತಹ ಉಪಯುಕ್ತ ಕೃತಿ ನೀಡಿದ ಲೇಖಕರ ಆಸ್ತೆ ಮತ್ತು ಅನುವಾದಕರ ಜೀವಪರ ಅಕ್ಕರೆಯನ್ನ ಅಭಿನಂದಿಸಲೇಬೇಕಲ್ಲವೇ?

## ಗುಲಗಂಜಿ ಜಾಗ ಕೊಡ್ರಿ




ಚೌಕಿಯಗಲ ಬಣ್ಣದ ಚಾದರ
ಮೂಲ್ಯಾಗ ಮುದುಕಿ
ಮ್ಯಾಲ್ ಹೊದಿಕಿ
ಮುಡಿಯಿಂದ
ಅಡಿಗಂಟ ಸಿಂಗಾರ
ಪಚ್ಚೆ ಹವಳ ರನ್ನದ ಗೊಂಬಿ
ಥೇಟ್ ಸ್ವರ್ಗದಿಂದಿಳಿದ ರಂಭಿ
ಮೈಪೂರ ಮಲ್ಲಿಗೆ ಜಾಜಿ ಗಂಧ
ಕೂಸಂದ್ರ ಸೂಸ್ಯಾಳ
ಪ್ರೀತಿ ಬಂಧ
ಸೀಮ್ಯಾಗಿಲ್ಲದ ನದಿ
ಹೊಳೆ ಹರಿದಾವು
ನುಡಿದ್ರೆ ಮುತ್ತು
ಮಾಣಿಕ್ಯ ಉದ್ರಾವು
ನಕ್ಕರೆ ಹಸಿರು ಅತ್ತರೆ
ಝರಿಯಾದಾವು
ಚಿತ್ತಾರದ ಕಲ್ಲಿಗೂ
ಜೀವ ಹಚ್ಯಾವು
ಬಡವಿ ಅಲ್ಲ ಮೈತುಂಬ ಒಡವಿ
ಮಣಭಾರ ಹೊತ್ತ
ಚಿನ್ನದ ಚೆಲುವಿ
ದಂತ ಕೆತ್ತಿದ
ಮೈಮಾಟ ಯವ್ವೀ
ದನಿ ತೆಗೆದ್ರ ಹಾಡ್ತಾಳ ಸುವ್ವೀ

ಪ್ರೀತಿಗೆ ಬದಲು
ಕೆಂಪು ಹಳದಿ ಕುಲಾವಿ ಹಾಕಿ
ಗೋಸುಂಬಿ ಹಂಗೆ
ಬಣ್ಣ ಬದಲಿಸ್ತೀವಿ
ಹಡೆದಾಕಿ ಅಂದ್ರೆ
ತುಟಿಬಿಚ್ಚದವಳು
ಕಾಣದ್ಹಂಗೆ ಕದದ
ಹಿಂದೆ ಅವಿತವಳು
ಹೊಟ್ಟೆ ತುಂಬ
ರಾಗಿ ಕಣಜ ವಾಡೆ ಗುಡಾಣ
ಆದರೂ ಕೈಯಾಗ ಬ್ರಹ್ಮ
ಕಪೋಲ ಹಿಡಿದಾಕಿ
ಬಲಗೈಯಾಗ ತುತ್ತಿಕ್ಕಿ
ಎಡದಾಗ ಬೇಡಿ
ಭಿಕ್ಷೆ ಹೊರಟಾಳ
ಮಕ್ಕಳ ಮುಂದೆ
ಅಮ್ಮ ಅಂದ್ರೆ ಬರಿ
ಗೋಡೆ ಪಟ ಅಲ್ಲ
ಎದೆ ಗೂಡಾಗೂ
ಗುಲಗಂಜಿ ಜಾಗ ಕೊಡ್ರಿ
ಗೋಳಿಡ್ತಾಳ
ಅದೇ ಹೊದಿಕಿ ಮುದುಕಿ
ಹಡೆದವ್ವನ ಹಾಗೆಯೆ
ತಾನೆ ತಾಯಿ ಕನ್ನಡತಿ.



● ಶ್ರೀವಲ್ಲಿ ಶೇಷಾದ್ರಿ
ಚಂದಾಪುರ

# ಅಂದು ಗಾಂಧಿ ಇಂದು ರೈತ ಗಾಂಧಿ





ನಾಗೇಶ್ ಕೆ.ಎನ್

ಕಳೆದ ವರ್ಷ ಸುಗ್ರೀವಾಜ್ಞೆ ಮುಖೇನ ತಂದಿದ್ದ ಮೂರು ವಿವಾದಾತ್ಮಕ ಕೃಷಿ ಕಾಯಿದೆಗಳನ್ನು ಹಿಂಪಡೆಯುವುದಾಗಿ ಇತ್ತೀಚೆಗೆ ಮಾನ್ಯ ಪ್ರಧಾನಿ ನರೇಂದ್ರ ಮೋದಿ ಪ್ರಕಟಿಸಿದ್ದಾರೆ. ಇದೇ ತಿಂಗಳ ಕೊನೆಯಲ್ಲಿ ಬರುವ ಸಂಸತ್ ಅಧಿವೇಶನದಲ್ಲಿ ಕಾಯಿದೆಗಳನ್ನು ಹಿಂಪಡೆಯಲು ಬೇಕಾದ ಸಂವಿದಾನಾತ್ಮಕ ಪ್ರಕ್ರಿಯೆಯನ್ನು ಮಾಡಲಾಗುವುದೆಂದೂ ತಿಳಿಸಿದ್ದಾರೆ. ದಿಲ್ಲಿಯಲ್ಲಿ ಚಳುವಳಿ ನಿರತ ರೈತರು ಪ್ರಧಾನಿ ಅವರ ಈ ನಿಲುವನ್ನು ಸ್ವಾಗತಿಸಿದ್ದಾರಾದರೂ ಸಂಸತ್ ನಲ್ಲಿ ಈ ಕಾಯಿದೆಗಳನ್ನು ಹಿಂಪಡೆಯುವತನಕ ಚಳುವಳಿ ಮುಂದುವರೆಸುವುದಾಗಿಯೂ ಮತ್ತು ಇನ್ನಿತರೆ ಬೇಡಿಕೆಗಳಾದ ಕನಿಷ್ಟ ಬೆಂಬಲ ಬೆಲೆಯನ್ನು ಶಾಸನಬದ್ಧಗೊಳಿಸುವುದೂ ಸೇರಿದಂತೆ ವಿದ್ಯುತ್ಶಕ್ತಿ ಖಾಸಗಿಕರಣಗೊಳಿಸಬಾರದೆಂಬ ಒತ್ತಾಯವನ್ನೂ ಮಾನ್ಯಮಾಡಬೇಕು ಎಂದು ಪಟ್ಟುಹಿಡಿದಿದ್ದಾರೆ. ಈ ವಿಷಯ ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದ ಚರ್ಚಾ ವಸ್ತುವೆನ್ನುವುದೇನೋ ಹೌದು. ಆದರೆ ರೈತರು ಸಾಧಿಸಿದ್ದೇನು ಮತ್ತು ಸಾಧಿಸಬೇಕಾದ್ದೇನು ಎನ್ನುವುದು ಪ್ರಶ್ನೆಯಾಗಿಯೇ ಉಳಿದಿದೆ.

ಇದೀಗ ಕಾಯಿದೆಗಳನ್ನು ಹಿಂಪಡೆದಿರುವುದರಿಂದ ರೈತರ ಬದುಕಿನಲ್ಲಿ ಆಗಬಹುದಾದ ಬದಲಾವಣೆ ಏನು ? ಏನೇನೂ ಇಲ್ಲ. ಮೊದಲಿನ ಪರಿಸ್ಥಿತಿಯಲ್ಲಿಯೇ ಇರುತ್ತಾರೆ ಯಾ ರೈತರ ಯತಾಸ್ಥಿತಿ ಮುಂದುವರೆಯುತ್ತದೆ. ಹಾಗಿದ್ದರೆ ಏಕೆ ಸಂಭ್ರಮಿಸಬೇಕು? ಈ ಕಾಯಿದೆಗಳು ಬರುವ ಮುನ್ನ ರೈತರ ಬದುಕು ಹಸನಾಗಿತ್ತೆ? ಖಂಡಿತಾ ಇಲ್ಲ. ಆದಾಗ್ಯೂ ಇದೀಗ ಕಾಯಿದೆಗಳನ್ನು ವಾಪಸ್ ಪಡೆದಿರುವ ಹಿನ್ನೆಲೆಯಲ್ಲಿ ರೈತರಿಗೇಕು ಖುಷಿ ಇದೆ ಎಂದರೆ, ಮೊದಲೇ ಸಂಕಷ್ಟದಲ್ಲಿ ಬದುಕಿದ್ದ ರೈತರನ್ನು ಈ ಕಾಯಿದೆಗಳು ಸಂಪೂರ್ಣ ನಾಶಮಾಡಬಲ್ಲಷ್ಟು ಸಮರ್ಥವಾಗಿದ್ದವು, ಹಾಗಾಗಿ ಈ ಕಾಯಿದೆಗಳನ್ನು ಹಿಂಪಡೆದಿರುವುದಕ್ಕೆ ಸಂಭ್ರಮಿಸಲೇಬೇಕಿದೆ. ಅಂದ ಮಾತ್ರಕ್ಕೆ ಹೋರಾಟ ನಿಲ್ಲಬೇಕೆಂದಲ್ಲ. ಇನ್ನೂ ತೀವ್ರವಾದ ಹೋರಾಟಕ್ಕೆ ಕೇಂದ್ರದ ಈ ತೀರ್ಮಾನ ರೈತರಿಗೆ ಪ್ರೇರಣೆಯಾಗಬೇಕಿದೆ.

ಕೇಂದ್ರ ಸರ್ಕಾರ ಪ್ರತಿ ವರ್ಷ 23 ಬೆಳೆಗಳಿಗೆ ನಿಗಧಿಮಾಡುವ ಕನಿಷ್ಟ ಬೆಂಬಲ ಬೆಲೆಗೆ ಎ.ಪಿ.ಎಂ.ಸಿಗಳಲ್ಲೇ ಮಾರಾಟವಾಗುತ್ತಿಲ್ಲ. ಅಂದ ಮೇಲೆ ಬೆಂಬಲ ಬೆಲೆ ಪ್ರಕಟಿಸುವುದರಿಂದಾಗುವ ಪ್ರಯೋಜವಾದರೂ ಏನು ? ಕನಿಷ್ಟ ಬೆಂಬಲ ಬೆಲೆಗಿಂತ ಕಡಿಮೆ ಬೆಲೆಗೆ ಮಾರುವಂತೆಯೂ ಮತ್ತು ಕೊಳ್ಳುವಂತೆಯೂ ಇಲ್ಲವೆಂಬುದು ಶಾಸನವಾಗಬೇಕು, ಅದಾಗ ಮಾತ್ರ ರೈತರಿಗೆ ಒಂದಿಷ್ಟು ಆದಾಯ ಸಿಕ್ಕಂತಾಗುತ್ತದೆ. ರೈತನ ಬಳಿ ಹಣ ಇರುವುದೆಂದರೆ ಗ್ರಾಮ ಭಾರತ ಸಮೃದ್ಧವಾಗಿದೆ ಎಂದರ್ಥ. ರೈತರ ಆದಾಯ ದ್ವಿಗುಣಗೊಳಿಸುತ್ತೇವೆಂದ ಮೋದಿ ಸರ್ಕಾರ ಈಗಾಗಲೇ ಅನೇಕ ದೇಶಗಳಲ್ಲಿ ಸೋತಿರುವ ಆರ್ಥಿಕ ನೀತಿಗಳನ್ನು ಮುನ್ನೆಲೆಗೆ ತರುವ ಬದಲು ರೈತರಿಗೆ ಖಾತ್ರಿಯಾದ ಆದಾಯಬರುವ ನೈಜ ಆರ್ಥಿಕ ನೀತಿಗಳ ಬಗ್ಗೆ ಯೋಚಿಸಬೇಕಿದೆ.

ಇದೀಗ ಮುಂದಿನ ವರ್ಷ ಮೊದಲ ಅರ್ಧದಲ್ಲಿ ಬರುವ ಪಂಚ ರಾಜ್ಯಗಳ ಚುನಾವಣೆಯ ಹಿನ್ನೆಲೆಯಲ್ಲಿ ವಿಶೇಷವಾಗಿ ಪಂಜಾಬ್ ಮತ್ತು ಉತ್ತರ ಪ್ರದೇಶದ ಚುನಾವಣೆಯಲ್ಲಿ ಭಾರತೀಯ ಜನತಾ ಪಕ್ಷಕ್ಕೆ ಹಿನ್ನಡೆ ಉಂಟಾಗಬಹುದೆಂಬ ಭಯದಿಂದ ಕಾಯಿದೆಗಳನ್ನು ಹಿಂಪಡೆದಿದ್ದಾರೆ ಎಂಬ ತರ್ಕವೂ ಕೇಂದ್ರದ ಈ ನಡೆಯ ಹಿಂದೆ ಕೇಳಿಬರುತ್ತಿದೆ. ಆ ಮಾತನ್ನು ಯಾರೂ ಅಲ್ಲಗಳೆಯುವಂತಿಲ್ಲ.

ಕಳೆದ ವರ್ಷ ನವೆಂಬರ್ ತಿಂಗಳಲ್ಲಿ ದಿಲ್ಲಿ ಚಲೋ ಹೊರಟಿದ್ದ ರೈತರನ್ನು ದಿಲ್ಲಿಯೊಳಗೆ ಬಿಟ್ಟುಕೊಳ್ಳದೆ, ರಸ್ತೆಗೆ ಅಡ್ಡಲಾಗಿ ಕಂದಕಗಳನ್ನು ತೋಡಿ, ವಾಟರ್ ಜೆಟ್ ಗಳನ್ನು ಸಿಡಿಸಿ, ಲಾಠಿ ಬೀಸಿ, ಇಲ್ಲ ಸಲ್ಲದ ಕೇಸುಗಳನ್ನಾಕಿ, ರಸ್ತೆಗೆ ಮೊಳೆಗಳನ್ನೊಡೆದು ಇನ್ನಿಲ್ಲದ ಕಿರುಕುಳ ಕೊಟ್ಟ ಪ್ರಭುತ್ವ ಇದು. ಏಳುನೂರು ಮಂದಿ ಚಳುವಳಿ ನಿರತ ಸತ್ಯಾಗ್ರಹಿಗಳು ಹುತಾತ್ಮರಾದರೂ ಚಳುವಳಿಯ ಅಂಗಳಕ್ಕೆ ಬಾರದೆ ಏನೂ ಆಗಿಲ್ಲವೇನೋ ಎಂಬಂತೆ ಮುಗುಮ್ಮನೆ ಇರುವ ಪ್ರಭುತ್ವವಿದು. ಚಳುವಳಿ ನಿರತರನ್ನು ಭಯೋತ್ಪಾದಕರು, ಖಲೀಸ್ಥಾನಿಗಳು ಎಂದ ಪ್ರಭುತ್ವವಿದು. ಇದೀಗ ಚುನಾವಣೆ ಹತ್ತಿರ ಬಂದಾಗ ತಾನು ಮಾಡಿದ್ದು ಸದುದ್ದೇಶದಿಂದ ಆದರೆ ಅದನ್ನು ಒಂದು ವರ್ಗದ ರೈತರಿಗೆ ಮನವರಿಕೆ ಮಾಡಿಕೊಡಲಾಗಲಿಲ್ಲ ಹಾಗಾಗಿ ಕಾಯಿದೆಗಳನ್ನು ಹಿಂಪಡೆಯುತ್ತೇವೆ ಎಂದ ಪ್ರಭುತ್ವವಿದು. ರೈತರು ಇದಾವುದನ್ನೂ ಮರೆಯಬಾರದು ಮತ್ತು ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಸಾರ್ವಜನಿಕರ ಅಭಿಪ್ರಾಯಗಳಿಗೆ ವಾಕ್ ಸ್ವಾತಂತ್ರ್ಯಕ್ಕೆ ಮತ್ತು ನ್ಯಾಯಯುತ ಹೋರಾಟವನ್ನು ಕಡೆಗಣಿಸುವ ಮನಸ್ಸುಗಳು ಈ ದೇಶಕ್ಕೆ ಎಂದಿಗೂ ಅಪಾಯಕಾರಿಯಾಗಿರುತ್ತವೆ ಎಂಬುದನ್ನೂ ರೈತರು ಮತ್ತು ಜನಸಾಮಾನ್ಯರು ಗಮನದಲ್ಲಿಟ್ಟುಕೊಳ್ಳಬೇಕಿದೆ.

ದೇಶದಲ್ಲಿ ವಿರೋಧ ಪಕ್ಷಗಳಿಗೇ ಧ್ವನಿ ಅಡಗಿರುವ ಈ ಸಂದರ್ಭದಲ್ಲಿ ರೈತ ಚಳುವಳಿ ಭರವಸೆಯ ಬೆಳಕಾಗಿದೆ. ಇದೇ ಪಟ್ಟಿನಲ್ಲಿ ರೈತರ ಬದುಕು ಹಸನಾಗಲು ಬೇಕಾದ ರೈತರ ಆದಾಯ ಖಾತ್ರಿ ಆಯೋಗವನ್ನು ರಚಿಸಲು ಒತ್ತಾಯ ಹೇರಬೇಕಿದೆ. ಕಂಪನಿ ಸರ್ಕಾರವನ್ನು ದೇಶಬಿಟ್ಟು ತೊಲಗಿಸಲು ಅಂದು ಗಾಂಧಿಗೆ ಜನ್ಮವಿತ್ತಳು ಭಾರತಾಂಬೆ, ಇದೀಗ ರೈತರು ಕಂಪನಿಗಳ ಕಪಿಮುಷ್ಟಿಯಲ್ಲಿ ಸಿಲುಕಿ ನರಳುವುದನ್ನು ತಪ್ಪಿಸಲು ಇಂದು ರೈತನ ರೂಪದಲ್ಲಿ ಲಕ್ಷಾಂತರ ಗಾಂಧಿಗಳಿಗೆ ಜನ್ಮವಿತ್ತಿದ್ದಾಳೆ ಅದೇ ಭಾರತಾಂಬೆ. ಈ ನೆಲದ ಮಕ್ಕಳ ನೆತ್ತರಲ್ಲಿ ಚಳುವಳಿಯ ಕಿಡಿ ಎಂದಿಗೂ ಆರುವುದಿಲ್ಲ. ಚಳುವಳಿ ನಿರಂತರ. ಅಂದು ಗಾಂಧಿ ಇಂದು ರೈತ ಗಾಂಧಿ.

# ಐಪಿಎಲ್ 2022ರ ಹರಾಜಿಗೆ ಈಗಲೇ ಜಿದ್ದಾ-ಜಿದ್ದಿ

● ಮಲ್ಲಿಕಾರ್ಜುನ ಹಿರೇಮಠ್



ಈಗಾಗಲೇ ಟಿ20 ಪಂದ್ಯ ಮುಗಿದಿದ್ದು ಭಾರತೀಯ ತಂಡ ಹೀನಾಯವಾಗಿ ಸೋತಿದೆ. ಅದರ ನಂತರ ನ್ಯೂಜಿಲೆಂಡ್ ವಿರುದ್ಧದ ಪಂದ್ಯದಲ್ಲೂ ಕೂಡ ಅಂತ ಸಾಧನೆಯೇನು ಮಾಡುತ್ತಿಲ್ಲ ಆದರೆ ಈಗಾಗಲೇ ಮತ್ತೆ 2022ರ ಇಂಡಿಯನ್ ಪ್ರೀಮಯಿಯರ್ ಲೀಗ್ ಬಗ್ಗೆ ಚರ್ಚೆಗಳು ನಡೆಯುತ್ತಿವೆ 15 ನೇ ಆವೃತ್ತಿಗೆ ಯಾರು ಎಷ್ಟಕ್ಕೆ ಹರಾಜಾಗಲಿದ್ದಾರೆ ಎನ್ನುವ ಚರ್ಚೆಗಳು ನಡೆಯುತ್ತಿವೆ.

ಇದಕ್ಕಾಗಿ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ಈಗಾಗಲೇ ತಯಾರಿ ಆರಂಭಿಸಿದೆ. ಮುಂದಿನ ತಿಂಗಳು ಡಿಸೆಂಬರ್‌ನಲ್ಲಿ ಐಪಿಎಲ್ 2022ರ ಮೆಗಾ ಹರಾಜು ಪ್ರಕ್ರಿಯೆ ನಡೆಯಲಿದೆ. ನಿಯಮದಂತೆ ಎಂಟು ಮೂಲ ತಂಡಗಳು ಗರಿಷ್ಠ ನಾಲ್ಕು ಆಟಗಾರರನ್ನು ರಿಟೇನ್ ಮಾಡಬಹುದಾಗಿದೆ. ಹಾಗೆಯೇ ಹೊಸತಾಗಿ ಸೇರ್ಪಡೆಯಾಗಿರುವ ಎರಡು ಹೊಸ ಫ್ರಾಂಚೈಸಿಗಳಾದ ಲಖನೌ ಹಾಗೂ ಅಹಮದಾಬಾದ್ ಹರಾಜಿಗೂ ಮುಂಚಿತವಾಗಿ ಮೂವರು ಆಟಗಾರರನ್ನು ಪಡೆಯುವ ಆಯ್ಕೆಯನ್ನು ಒದಗಿಸಿದೆ. ಈಗಿರುವ ಎಂಟು ಫ್ರಾಂಚೈಸಿಗಳು ನವೆಂಬರ್ 1ರಿಂದ 30ರ ಅವಧಿಯೊಳಗೆ ಆಟಗಾರರ ರಿಟೇನ್ ದೃಢಪಡಿಸಬೇಕಿದೆ. ಹೀಗಿರುವಾಗ ಡೆಲ್ಲಿ ಕ್ಯಾಪಿಟಲ್ಸ್ ತಂಡ ದೊಡ್ಡ ನಿರ್ಧಾರವೊಂದನ್ನು ತೆಗೆದುಕೊಂಡಿದೆ ಎಂದು ರವಿಚಂದ್ರನ್ ಅಶ್ವಿನ್ ಬಹಿರಂಗ ಪಡಿಸಿದ್ದಾರೆ.

ಅಶ್ವಿನ್ ತಮ್ಮಯೂಟ್ಯೂಬ್ ಚಾನೆಲ್ ಸಂಭಾಷಣೆ ವೇಳೆ, "ಮುಂಬರುವ ಇಂಡಿಯನ್ ಪ್ರೀಮಿಯರ್ ಲೀಗ್‌ಗೂ ಮುನ್ನ ಶ್ರೇಯಸ್ ಅಯ್ಯರ್ ಮತ್ತು ನನ್ನನ್ನು ಡೆಲ್ಲಿ ಕ್ಯಾಪಿಟಲ್ಸ್ ಫ್ರಾಂಚೈಸಿ ರೀಟೈನ್ ಮಾಡಿಕೊಳ್ಳುವ ಸಾಧ್ಯತೆ ಇಲ್ಲ" ಎಂಬ ವಿಚಾರವನ್ನು ತಿಳಿಸಿದ್ದಾರೆ. ಈ ಮೂಲಕ ಅಯ್ಯರ್ ಹಾಗೂ ಅಶ್ವಿನ್ ಮುಂದಿನ ಮೆಗಾ ಹರಾಜಿಗೆ ಲಭ್ಯರಿದ್ದಾರೆ ಎಂಬ ಸಂಗತಿ ಬಹಿರಂಗವಾಗಿದೆ.

2022ರ ಐಪಿಎಲ್ ಮೆಗಾ ಹರಾಜಿಗೂ ಮುನ್ನ ಎಲ್ಲಾ ಫ್ರಾಂಚೈಸಿಗಳು ತಲಾ 4 ಆಟಗಾರರನ್ನು ರಿಟೇನ್ ಮಾಡಿಕೊಳ್ಳುವುದಕ್ಕೆ ಬಿಸಿಸಿಐ ತಿಳಿಸಿದೆ. ಅದು ತಲಾ ಇಬ್ಬರು ವಿದೇಶಿ ಆಟಗಾರರಾಗಿರಬಹುದು ಅಥವಾ 3 ಭಾರತೀಯರು ಮತ್ತು ಒಬ್ಬ ವಿದೇಶಿಗನನ್ನು ಉಳಿಸಿಕೊಳ್ಳಬಹುದೆಂದು ನಿಯಮದಲ್ಲಿ ತಿಳಿಸಿದೆ. ಹೀಗಾಗಿ ಡೆಲ್ಲಿ ಅಶ್ವಿನ್ ಮತ್ತು ಅಯ್ಯರ್ ಅವರನ್ನು ತಂಡದಿಂದ ಕೈಬಿಡುವ ನಿರ್ಧಾರ ಮಾಡಿದೆ. ಡೆಲ್ಲಿ ಕ್ಯಾಪಿಟಲ್ಸ್ ತಂಡದಲ್ಲಿ ರಿಷಭ್ ಪಂತ್, ಕಗಿಸೋ ರಬಾಡ, ಎನ್ರಿಚ್ ನಾಕಿಯಾರನ್ನು ಭಾಗಶಃ ರಿಟೇನ್ ಮಾಡಿಕೊಳ್ಳುವುದು ಖಚಿತ. ಇನ್ನು ನಾಯಕತ್ವವನ್ನು ಕಳೆದುಕೊಂಡಿರುವ ಶ್ರೇಯಸ್ ಅಯ್ಯರ್ ತಾವಾಗಿಯೇ ಫ್ರಾಂಚೈಸಿಯಿಂದ ಹೊರಬರಲು ಮುಂದಾಗಿದ್ದಾರೆ. ಅವರು ಹೊಸ 2 ಫ್ರಾಂಚೈಸಿಯಲ್ಲಿ ನಾಯಕತ್ವವನ್ನು ಬಯಸುತ್ತಿರುವ ಪ್ರಮುಖರ ಲಿಸ್ಟ್‌ನಲ್ಲಿದ್ದಾರೆ. ಹಾಗಾಗಿ ಪೃಥ್ವಿ ಶಾ, ಶಿಖರ್ ಧವನ್ ಅಕ್ಸರ್ ಪಟೇಲ್ ಸೇರಿದಂತೆ ಇನ್ನು ಕೆಲವು ಉಳಿದ ಒಂದು ಸ್ಥಾನಕ್ಕಾಗಿ ಪೈಪೋಟಿ ನಡೆಸಲಿದ್ದಾರೆ.

ಆಟಗಾರರನ್ನು ಉಳಿಸಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ಪರ್ಸ್‌ನಿಂದ ಎಷ್ಟು ಮೊತ್ತವನ್ನು ಕಡಿತಗೊಳಿಸಲಾಗುತ್ತದೆ ಎಂಬುದನ್ನು ಬಿಸಿಸಿಐ ತಿಳಿಸಿದೆ. ನಾಲ್ವರು ಆಟಗಾರರನ್ನು ಉಳಿಸಿಕೊಳ್ಳುವುದಾದರೆ 42 ಕೋಟಿ, ಮೂವರು ಆಟಗಾರರಿಗೆ 33 ಕೋಟಿ, ಇಬ್ಬರು ಆಟಗಾರರಿಗೆ 24 ಕೋಟಿ ಮತ್ತು ಓರ್ವ ಆಟಗಾರನಿಗೆ 14 ಕೋಟಿ ಕಡಿತಗೊಳಿಸಲಾಗುವುದು. ಹಾಗೆಯೇ ಅನ್‌ಕ್ಯಾಪ್ಡ್ ಆಟಗಾರನನ್ನು ಉಳಿಸಿಕೊಳ್ಳುವುದಾದರೆ ತಲಾ 4 ಕೋಟಿ ವ್ಯಯಿಸಬೇಕಿದೆ. ಹಾಗೊಂದು ವೇಳೆ ಆಟಗಾರರ ವೇತನವು ಮೇಲೆ ಸೂಚಿಸಿದ ಮೊತ್ತಕ್ಕಿಂತ ಹೆಚ್ಚಿದ್ದರೆ, ಅದನ್ನು ತಂಡಗಳ ಪರ್ಸ್‌ನಿಂದ ಕಡಿತಗೊಳಿಸಲಾಗುವುದು ಎಂದು ತಿಳಿಸಿದೆ.

ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಬಿಡುಗಡೆ ಮಾಡಿದ ಪ್ರಕಾರ ಫ್ರಾಂಚೈಸಿಗಳು ಗರಿಷ್ಠ 4 ಆಟಗಾರರನ್ನು ಉಳಿಸಿಕೊಳ್ಳಬಹುದು. ಮತ್ತು ಡಿಸಿ ಅವರನ್ನು ಮತ್ತು ಅಯ್ಯರ್ ಅವರನ್ನು ಉಳಿಸಿಕೊಳ್ಳುವುದಿಲ್ಲ ಎಂದು ಅಶ್ವಿನ್ ಭಾವಿಸಿದ್ದಾರೆ. ದೆಹಲಿ ಕ್ಯಾಪಿಟಲ್ಸ್ 3 ಕ್ಕಿಂತ ಹೆಚ್ಚು ಆಟಗಾರರನ್ನು ಉಳಿಸಿಕೊಳ್ಳುವುದಿಲ್ಲ ಮತ್ತು ಅವರ ಪ್ರಕಾರ ರಿಷಭ್ ಪಂತ್, ಪೃಥ್ವಿ ಶಾ ಮತ್ತು ಅನ್ರಿಚ್ ನಾರ್ಟ್ಜೆ ಎಂದು ಅವರು ಭಾವಿಸುತ್ತಾರೆ ಎಂದು ಅಶ್ವಿನ್ ವೀಡಿಯೊದಲ್ಲಿ ಹೇಳಿಕೊಂಡಿದ್ದಾರೆ.

ಅಶ್ವಿನ್ ಫ್ರಾಂಚೈಸ್‌ನೊಂದಿಗೆ ಸೂಪರ್-ಯಶಸ್ವಿಯಾಗಿದ್ದರು ಮತ್ತು ಐಪಿಎಲ್ 2020 ಮತ್ತು ಐಪಿಎಲ್ 2021 ರಲ್ಲಿನ ಪ್ರದರ್ಶನಗಳೊಂದಿಗೆ ಅವರು ಟಿ20 ವೃತ್ತಿಜೀವನವನ್ನು ಪುನರುತ್ಥಾನಗೊಳಿಸಿದ್ದಾರೆ.

# ಕತ್ತಿವರಸೆಯಲ್ಲಿ ವಿಸ್ಮಯ ಮೂಡಿಸಿದ ರಾಜಕುಮಾರ್ ಕಲಾವಿದರಿಗೆ ಆಶ್ರಯ ನೀಡಿದ್ದ ಗುಗ್ಗುಮಹಲ್

ತೆರೆಮರೆ

ಕನ್ನಡ ಚಿತ್ರ ಇತಿಹಾಸ

ಭಾಗ–53



ಅ.ನಾ.ಪ್ರಹ್ಲಾದರಾವ್
ವಾರ್ತಾ ಇಲಾಖೆ, ನಿವೃತ್ತ ಅಧಿಕಾರಿ

ಗಿರಿಜಾ ಮತ್ತು ಸೂರ್ಯಪ್ರಭಾ ಪ್ರೊಡಕ್ಷನ್ಸ್ ಲಾಂಛನದಲ್ಲಿ 1960ರಲ್ಲಿ ಬಿಡುಗಡೆಗೊಂಡ ರಾಣಿ ಹೊನ್ನಮ್ಮ ಕಪ್ಪು ಬಿಳುಪು ಜಾನಪದ ಚಿತ್ರವನ್ನು ಟಿ.ಎಸ್.ಕರಿಬಸಯ್ಯ ನಿರ್ಮಿಸಿದರು. ಕು.ರ.ಸೀತಾರಾಮಶಾಸ್ತ್ರಿ ನಿರ್ದೇಶಿಸಿದ ಈ ಚಿತ್ರಕ್ಕೆ ಎಸ್.ರಾಮನಾಥನ್ ಮತ್ತು ಬಿ.ಎಸ್. ವಿಶ್ವನಾಥ್ ಸಹಾಯಕ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದರು. ರಾಜಕುಮಾರ್, ಲೀಲಾವತಿ, ಲಲಿತಾರಾವ್, ಬಾಲಕೃಷ್ಣ, ನರಸಿಂಹರಾಜು, ಲಕ್ಷ್ಮಿ, ವೀರಭದ್ರಯ್ಯ, ಈಶ್ವರಪ್ಪ, ಸುಬ್ಬಣ್ಣ, ರಾಮಚಂದ್ರಶಾಸ್ತ್ರಿ, ಗುಗ್ಗು, ಜಿ.ವಿ.ಅಯ್ಯರ್, ಶಿವಾಜಿರಾವ್ ಅಭಿನಯಿಸಿದರು. ಕು.ರ.ಸೀತಾರಾಮಶಾಸ್ತ್ರಿ ಕಥೆ, ಚಿತ್ರಕಥೆ, ಸಂಭಾಷಣೆ ಹಾಗೂ ಗೀತೆಗಳನ್ನು ರಚಿಸಿದರು. ವಿಜಯಭಾಸ್ಕರ್





ಸಂಗೀತ ನೀಡಿದ್ದ ಚಿತ್ರದಲ್ಲಿ ಹಾರುತ ದೂರ ದೂರ ಮೇಲೇರುವ ಬಾರಾ.. ಒಳಗೊಂಡಂತೆ 9 ಹಾಡುಗಳನ್ನು ಅಳವಡಿಸಲಾಗಿತ್ತು. ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ ಹಾಗೂ ಪಿ.ಸುಶೀಲ ಗೀತೆಗಳಿಗೆ ದನಿಯಾಗಿದ್ದರು.

ಬಾಲ್ ಜೆ.ಯಾದವ್ ಮತ್ತು ಎಂ.ತಾತಯ್ಯ ಸಂಕಲನ, ಕೆ.ಪ್ರಭಾಕರ್ ಹಾಗೂ ಬಾಬುಲ್‌ನಾಥ್ ಛಾಯಾಗ್ರಹಣ, ಎಸ್.ಅಮ್ಮೆಯಪ್ಪನ್ ಕಲೆ, ಕೆ.ತಂಗಪ್ಪನ್ ನೃತ್ಯ ನಿರ್ದೇಶನ ಚಿತ್ರಕ್ಕಿತ್ತು. ಮದರಾಸಿನ ಫಿಲಂ ಸ್ಟುಡಿಯೊದಲ್ಲಿ ಚಿತ್ರೀಕರಣಗೊಂಡ ಚಿತ್ರ 16,150 ಅಡಿ ಉದ್ದ ಇದ್ದು, 1960ರ ಏಪ್ರಿಲ್ 8ರಂದು ಸೆನ್ಸಾರ್ ಆಯಿತು.

ಹೊನ್ನಮ್ಮನಾಗಿ ಲೀಲಾವತಿ ಪಾತ್ರಕ್ಕೆ ಜೀವ ತುಂಬಿದ್ದು, ವೀರಣ್ಣನ ಪಾತ್ರದಲ್ಲಿ ರಾಜಕುಮಾರ್ ಲವಲವಿಕೆಯಿಂದ ಪಾತ್ರ ನಿರ್ವಹಿಸಿದ್ದಾರೆ. ರಾಜಕುಮಾರ್ ಅಭಿನಯದಲ್ಲಿ ಕತ್ತಿವರಸೆ, ಸಂಭಾಷಣೆಯ ಏರಿಳಿತ, ಕುದುರೆ ಸವಾರಿ, ಹಾಡಿನ ದೃಶ್ಯಗಳಲ್ಲಿನ ಮಧುರ ಭಾವ ಎಲ್ಲದರಲ್ಲೂ ಒಂದು ಲಯವಿದೆ. ನರಸಿಂಹರಾಜು ಚಿತ್ರದುದ್ದಕ್ಕೂ ನಾಯಕನ ಗೆಳೆಯನಾಗಿ ರಂಜಿಸಿದರೆ, ನರಸಿಂಹರಾಜು ಜೋಡಿಯಾಗಿ ಎಂ.ಎನ್.ಲಕ್ಷ್ಮೀದೇವಿ ಮನಸೆಳೆಯುತ್ತಾರೆ. ಲೀಲಾವತಿ ತಂದೆಯ ಪಾತ್ರದಲ್ಲಿ ರಾಮಚಂದ್ರಶಾಸ್ತ್ರಿ, ಅರಮನೆಯ ಕಾವಲು ಭಂಟನಾಗಿ ಚಿ. ಉದಯಶಂಕರ್ ಅಭಿನಯಿಸಿದ್ದಾರೆ. ಆರಂಭಿಕ ದೃಶ್ಯದಲ್ಲಿ ಚಿತ್ರದ ಕಥೆಯನ್ನು ದಾರಿಹೋಕನಿಗೆ ಹೇಳುವ ದೇವಸ್ಥಾನದ ಅರ್ಚಕನ ಪಾತ್ರದಲ್ಲಿ ಜಿ.ವಿ.ಅಯ್ಯರ್ ನಟಿಸಿದ್ದು, ದೇವಸ್ಥಾನದ ಇತಿಹಾಸದಿಂದ ಇಡೀ ಚಿತ್ರಣ ಕಟ್ಟಿಕೊಡುವ ಪ್ರಯತ್ನ ವಿಭಿನ್ನವಾಗಿದೆ.

ದಳವಾಯಿಯ ಕಾಟದಿಂದ ತಪ್ಪಿಸಿಕೊಂಡ ಚೆಲುವೆ, ಅಪವಾದಗಳ ಸಾಲುಸಾಲೇ ಎದುರಾದಾಗ ದಿಟ್ಟವಾಗಿ ನಿಲ್ಲುತ್ತಾಳೆ. ವಿವಾಹವಾದ ಬಳಿಕ ಗಂಡನನ್ನು ಅಪ್ಸರೆಯೊಬ್ಬಳು ಮಾಯ ಮಾಡುತ್ತಾಳೆ. ಬಂದ ಅಪವಾದ, ಕಾಡಿನವಾಸ ಎಲ್ಲವನ್ನೂ ನಿವಾರಿಸಿಕೊಂಡು




ಹೆತ್ತ ಮಗ ನಿಂದಲೇ ಸೇಡು ತೀರಿಸಿಕೊಳ್ಳುತ್ತೇನೆಂದು ತನ್ನ ಶಪಥವನ್ನು ಪೂರೈಸಿ, ಗಂಡನನ್ನು ಹೊಂದುವ ಪತಿವ್ರತೆಯ ಕಥೆ.

ಮದರಾಸಿನಲ್ಲಿ ಕಲಾವಿದರಿಗೆ ಆಶ್ರಯ ನೀಡಿದ್ದ ಗುಗ್ಗುಮಹಲ್ ಕಮೇಡಿಯನ್ ಗುಗ್ಗು ಎಂದೇ ಕನ್ನಡ ಚಿತ್ರರಂಗದಲ್ಲಿ ಹೆಸರಾದ ಮಾಕಂ ಅಶ್ವತ್ಥನಾರಾಯಾಣಶೆಟ್ಟಿ 1918ರ ಮಾರ್ಚ್ 18ರಂದು ಮಾಗಡಿ ತಾಲ್ಲೂಕಿನ ಗುಡೇಮಾರನಹಳ್ಳಿಯಲ್ಲಿ ಜನಿಸಿದರು. ತಂದೆ ಮಾಕಂ ಕೃಷ್ಣಯ್ಯಶೆಟ್ಟಿ ಬಟ್ಟೆ ವ್ಯಾಪಾರ ಮಾಡುತ್ತಿದ್ದರು. ಕೆ.ಹಿರಣ್ಣಯ್ಯನವರ ನಾಟಕ ಕಂಪೆನಿಯಲ್ಲಿ ಬಣ್ಣ ಹಚ್ಚಿದ ಶೆಟ್ಟರಿಗೆ ಹಿರಣ್ಣಯ್ಯನವರು "ಪಂಗನಾಮ" ನಾಟಕದಲ್ಲಿ ಗುಗ್ಗು ಪಾತ್ರ ನೀಡುವ ಮೂಲಕ ಜನಪ್ರಿಯಗೊಳಿಸಿದರು. 1954ರಲ್ಲಿ ತೆರೆ ಕಂಡ ನಟಶೇಖರ ಚಿತ್ರದ ಮೂಲಕ ಕನ್ನಡ ಚಿತ್ರರಂಗಕ್ಕೆ ಪದಾರ್ಪಿಸಿದರು. ಮುಂದೆ ಚಿತ್ರ ಕ್ಷೇತ್ರದಲ್ಲಿ ಗುಗ್ಗು ಎಂದೇ ಪರಿಚಿತರಾದರು. ಮದರಾಸಿನಲ್ಲಿ ತಂಗಿದ ಅವರು ತ್ಯಾಗರಾಜನಗರದಲ್ಲಿ ಒಂದು ಮನೆಯನ್ನು ಕೊಂಡು ಅದನ್ನು 'ಗುಗ್ಗು ಮಹಲ್' ಎಂದು ಹೆಸರಿಸಿದರು. ಅವರ ಸಣ್ಣ ಮನೆ 'ಗುಗ್ಗು ಮಹಲ್' ಕನ್ನಡ ಕಲಾವಿದರ ಸ್ವಂತ ಮನೆಯಂತಿತ್ತು. ಅನೌಪಚಾರಿಕವಾಗಿ ಕಲಾವಿದರ ಸ್ವಂತದಂತೆ ಆಗಿದ್ದ ಈ 'ಮಹಲ್' ಕಲಾವಿದರ ಆಶ್ರಯತಾಣವಾಗಿತ್ತು. ಸಹಾಯ ಗುಣದ ಗುಗ್ಗು ಮದರಾಸಿಗೆ ಬರುವ ಕನ್ನಡ ಕಲಾವಿದರು, ತಂತ್ರಜ್ಞರಿಗೆ ಆಸರೆ ನೀಡುತ್ತಿದ್ದರು. ರಾಜಕುಮಾರ್, ಬಾಲಕೃಷ್ಣ, ನರಸಿಂಹರಾಜು ಅಂತಹ ನಟರು ಗುಗ್ಗು ಮಹಲಿನಲ್ಲಿ ತಂಗಿದ್ದರು. 'ಗುಗ್ಗು ಮಹಲ್' ಗುಗ್ಗು ಅವರ ಪ್ರೀತಿ, ಸ್ನೇಹಗಳ ಪ್ರತೀಕವಾದದ್ದು. ಕನ್ನಡ ಚಿತ್ರರಂಗದ ಕಹಳೆಯ ತಲೆಮಾರಿನ ಪ್ರಮುಖ ಕಲಾವಿದರೆಲ್ಲರೂ ಗುಗ್ಗು ಮಹಲ್‌ನಲ್ಲಿ ಅವರ ಆತಿಥ್ಯವನ್ನು ಸವಿದಿದ್ದಾರೆ.

'ಗುಗ್ಗು' ನೋಡಲು ಸುಂದರರಲ್ಲ, ಸಣ್ಣ ಪುಟ್ಟ ಪಾತ್ರಗಳಿಗೆ ತಮ್ಮನ್ನು ಸೀಮೀತಗೊಳಿಸಿಕೊಂಡರು. ರಾಜಕುಮಾರ್ ಅಭಿನಯದ ಭಕ್ತ ವಿಜಯ ಚಿತ್ರದಿಂದ ಆರಂಭಿಸಿ, ಮಯೂರ, ನಾ ನಿನ್ನ ಮರೆಯಲಾರೆ ಮುಂತಾದ ಚಿತ್ರಗಳಲ್ಲಿ ಗುಗ್ಗು ಪಾತ್ರ ಮಾಡಿದರು. ಕಳಸಾಪುರದ ಹುಡುಗರು ಚಿತ್ರಕ್ಕೆ ಕಥೆ, ಚಿತ್ರಕಥೆ ರಚಿಸಿ ತಮ್ಮ ಬಹು ದಿನಗಳ ಕನಸು ನನಸು ಮಾಡಿಕೊಂಡರು. ಕನ್ನಡ ಚಿತ್ರರಂಗ ಮದರಾಸಿನಿಂದ ಕರ್ನಾಟಕಕ್ಕೆ ಬರಬೇಕೆಂಬ ಆಶಯ ಹೊಂದಿದ್ದ ಗುಗ್ಗು 1976ರಲ್ಲಿ ಬೆಂಗಳೂರಿನ ಮಲ್ಲೇಶ್ವರದಲ್ಲಿ ಮೈಸೂರು



ಮೂವಿಟೋನ್ ಸಂಸ್ಥೆಯನ್ನು ಹುಟ್ಟು ಹಾಕಿದರು. ನಿರ್ದೇಶಕ ಸಿ.ವಿ.ಶಿವಶಂಕರ್ 'ಸಂಭಾವಿತ ನಟ ಗುಗ್ಗು' ಪುಸ್ತಕ ರಚಿಸಿದ್ದಾರೆ.

ಸುಮಾರು 250ಕ್ಕೂ ಹೆಚ್ಚು ಚಿತ್ರಗಳಲ್ಲಿ ಅಭಿನಯಿಸಿದ್ದ ಗುಗ್ಗು ಅಭಿನಯದ ಕೊನೆಯ ಚಿತ್ರ 1985ರಲ್ಲಿ ತೆರೆ ಕಂಡ ಗೂಂಡಾಗುರು. 1984ರ ಜೂನ್ 22ರಂದು ತಮ್ಮ 66ನೆಯ ವಯಸ್ಸಿನಲ್ಲಿ ನಿಧನರಾದರು.

# ನಿಮ್ಮ ಮಾತು

## ಕೆಂಧೂಳಿ ಆಂದೋಲನ ಮಾಡುತ್ತಿದೆ

ಕೆಂಧೂಳಿ ಪತ್ರಿಕೆ ಇತ್ತೀಚೆಗೆ ವಾರ ವಾರವೂ ಉತ್ತಮವಾಗಿ ಮೂಡಿ ಬರುತ್ತಿದೆ ಹಿರಿಯ ಪತ್ರಕರ್ತರಂತಹವರು ಲೇಖನಗಳನ್ನು ಬರೆಯುವ ಮೂಲಕ ಪತ್ರಿಕೆಯ ಘನತೆ ಹೆಚ್ಚಿದೆ ಡಿ.ಉಮಾಪತಿ ಯವರಂತಹ ಲೇಖರನ್ನು ಹೊಂದಿರುವುದು ವಿಶೇಷವಾಗಿದ್ದು ಅವರ ಲೇಖನಗಳನ್ನು ಓದುವುದೆ ಒಂದು ವಿಶೇಷ ಅವರ ಭಾಷಾ ಶೈಲಿ ಮತ್ತು ಅವರ ವಿಷಯಗಳು ಕೂಡ ಅಷ್ಟೆ ಚನ್ನಾಗಿರುತ್ತವೆ ಇನ್ನೂ ಹಿರಿಯ ಪತ್ರಕರ್ತರಾದ ಭಾಸ್ಕರ್ ರಾವ್ ಕೂಡ ಅಷ್ಟೆ ಚನ್ನಾಗಿ ರಾಜಕೀಯ ವಿಶ್ಲೇಷಣೆಯನ್ನು ಮಾಡುತ್ತಿದ್ದಾರೆ ಇನ್ನೂ ಕಾಲಂಗಳು ಒಳ್ಳೆ ವಿಷಯಗಳಿರುತ್ತವೆ ಒಟ್ಟಾರೆಯಾಗಿ ಪತ್ರಿಕೆ ಉತ್ತಮವಾಗಿದೆ ಒಂದು ಆಂದೋಲನದ ರೀತಿಯಲ್ಲಿ ಮೂಡಿ ಬರುತ್ತಿದೆ ಹಾಗೆ ಮುಂದುವರೆಯಲಿ..

• ವೆಂಕಟೇಶ್ ರಾವ್ ಬೆಂಗಳೂರು

## ಪ್ರತಿವಾರವೂ ಕ್ರಿಯಾಶೀಲವಾಗುತ್ತಿದೆ.

ಕೆಂಧೂಳಿ ಹೆಸರೇ ಹೇಳುವಂತೆ ರಾಜ್ಯಾದ್ಯಂತ ಧೂಳೆಬ್ಬಿಸುತ್ತಿದೆ. ಯಾವ ವಾರಪತ್ರಿಕೆ ಇಲ್ಲದ ಈ ಸಂದರ್ಭದಲ್ಲಿ ಛಲಬಿಡದೆ ಹೊರತರುತ್ತಿರುವುದು ಮೆಚ್ಚುವಂತ ಕೆಲಸ. ಪ್ರತಿವಾರವೂ ಕೊಂಡು ಓದುತ್ತಿದ್ದೇನೆ. ಪುನೀತ್‌ರಾಜ್ ಕುಮಾರ್ ವಿಶೇಷ ಸಂಚಿಕೆ ಸಾಕಷ್ಟು ಅರ್ಥಪೂರ್ಣವಾಗಿತ್ತು ಒಳ್ಳೊಳ್ಳೆಲೇಖನಗಳನ್ನೊಳಗೊಂಡ ಸಂಚಿಕೆ ಕ್ರಿಯಾಶೀಲವಾಗಿತ್ತು.ನಿಜಕ್ಕೂ ವಾರ ವಾರವೂ ಕ್ರಿಯಾಶೀಲವಾಗಿ ಬರುತ್ತಿದೆ ಸರ್ಕಾರವನ್ನು ಎಚ್ಚರಿಸುವಂತ ಲೇಖನಗಳು ಹಿಂದಿನ ವಾರಪತ್ರಿಕೆಗಳಷ್ಟೆ ಹರಿತವಾದ ಭಾಷೆ ಇದೆ. ಹೀಗೆ ಮೂಡಿಬರಲಿ ಎಂದು ಆಶಿಸುತ್ತೇನೆ

• ಬಸಪ್ಪ ಯರ್‍ರಪ್ಪ ಮೂಗೇರಿ ಬಳ್ಳಾರಿ

## ರಾಜ್ಯದ ಅತ್ಯುತ್ತಮ ಪತ್ರಿಕೆಯಾಗುತ್ತದೆ

ಇತ್ತೀಚಿನ ಸಾಕಷ್ಟು ಪತ್ರಿಕೆಗಳನ್ನು ನೋಡಿದ್ದೆನೆ ಓದಿದ್ದೇನೆ. ನನಗೆ ಓದುವ ಹುಚ್ಚು ಅದರಲ್ಲೂ ವಾರಪತ್ರಿಕೆಗಳ ಬಗ್ಗೆ ಹೆಚ್ಚು ಆಸಕ್ತಿವುಳ್ಳವನು ಆದರೆ ಕಳೆದ ಲಾಕ್‌ಡೌನ್ ಹೊತ್ತಿಗೆ ಎಲ್ಲಾ ವಾರಪತ್ರಿಕೆಗಳು ನಿಂತು ಹೋಗಿದ್ದವು ಆ ನಂತರ ಯಾವ ವಾರ ಪತ್ರಿಕೆಗಳು ನಾನು ನೋಡಿಲ್ಲ ಆದರೆ ಸಣ್ಣ ಪುಟ್ಟ ಬರೀ ಜಾಹೀರಾತು ಮತ್ತು ಅವರಿವರ ಒಬ್ಬ ವ್ಯಕ್ತಿಯನ್ನು ವರ್ಣಮಯವಾಗಿ ಬರೆಯುವ ಪತ್ರಿಕೆಗಳನ್ನು ನೋಡಿದ್ದೇನೆ ಆದರೆ ಅವು ಓದುವ ಪತ್ರಿಕೆಗಳಲ್ಲ ಆದರೆ ಕಳೆದ ಮೂರು ತಿಂಗಳಿನಿಂದ ನಿಮ್ಮ ಪತ್ರಿಕೆ ನನ್ನ ಕಣ್ಣಿಗೆ ಬಿತ್ತು ಅಂದಿನಿಂದ ನಾನು ತಪ್ಪದೆ ಓದುತ್ತಿದ್ದೇನೆ ಉತ್ತಮವಾದ ಅಂಕಣಗಳು, ಸರ್ಕಾರದ ಸ್ಥಿತಿಯನ್ನು ಕುರಿತು ಬರೆಯುವ ಲೇಖನಗಳು ಒಟ್ಟಾರೆ ಒಂದು ಉತ್ತಮ ಪತ್ರಿಕೆ ಹೇಗಿರಬೇಕೋಹಾಗೆ ಇದೆ ನಿಜಕ್ಕೂ ಇಂದಲ್ಲ ನಾಳೆ ಈ ರಾಜ್ಯದ ಅತ್ಯುತ್ತಮ ಪತ್ರಿಕೆ ಎಂಬ ಹೆಗ್ಗಳಿಕೆಗೆ ಪಾತ್ರವಾಗುತ್ತದೆ ಎನ್ನುವುದರಲ್ಲಿ ಸಂಶಯವಿಲ್ಲ.

• ಬಸಪ್ಪ ಅಂಗಡಿ ಬಿಜಾಪುರ

## ಪತ್ರಿಕೆ ಚನ್ನಾಗಿ ಮೂಡಿ ಬಂದಿದೆ

'ಕೆಂಧೂಳಿ' ವಾರಪತ್ರಿಕೆಯು ತುಂಬಾ ಚನ್ನಾಗಿ ಬರುತ್ತಿದೆ. ರಾಜಕೀಯ ವಿಶ್ಲೇಷಣೆಗಳು ಸರ್ಕಾರದ ಕಿವಿ ಹಿಂಡುವ ಕಾರ್ಯವನ್ನು ನಿಮ್ಮಪತ್ರಿಕೆಮಾಡುತ್ತಿದೆ. ನಾನು ಕಳೆದ ಕೆಲ ತಿಂಗಳಿನಿಂದ ತಪ್ಪದೆನಿಮ್ಮ ಪತ್ರಿಕೆ ಕೊಂಡು ಓದುತ್ತಿದ್ದೇನೆ ಸಾಕಷ್ಟು ವಿಷಯಗಳು ತುಂಬಿರುತ್ತವೆ ಒಂದು ಪತ್ರಿಕೆ ಹೇಗಿರಬೇಕು ಎನ್ನುವುದನ್ನು ಚನ್ನಾಗಿ ಅರಿತಿದೆ ಎನಿಸುತ್ತದೆ ಲಂಕೇಶ್ ನಂತರದ ಪತ್ರಿಕೆ ಇಷ್ಟೊಂದು ವಿಚಾರಪೂರ್ಣವಾಗಿ ಬರುತ್ತಿರುವುದು ಎನಿಸುತ್ತದೆ ಕಳೆದ ವಾರದ ನಿಮ್ಮ ಪತ್ರಿಕೆ ಮುಖಪುಟದ 'ನಕಲಿ ಛಾಪಾಕಾಗದದ ಜಾಲ ಮತ್ತೆ ರೀ ಆಕ್ಟೀವ್' ಎನ್ನುವ ಲೇಖನ ತುಂಬಾ ಚನ್ನಾಗಿದೆ ನಿಮ್ಮ ಲೇಖನದ ನಂತರ ಇತರೆ ಪತ್ರಿಕೆಗಳಲ್ಲಿ ನೋಡಿದೆ ನಿಜಕ್ಕೂ ತುಂಬಾ ಚನ್ನಾಗಿ ಮೂಡಿ ಬರುತ್ತಿದೆ.

• ಧರಣೇಶ್,ಕೆ.ಎಚ್. ದಾವಣಗೆರೆ.

ಬೇಕಾಗಿದ್ದಾರೆ : 'ಕೆಂಧೂಳಿ' ವಾರ ಪತ್ರಿಕೆಗೆ ಜಿಲ್ಲಾ ವರದಿಗಾರರು/ಏಜೆಂಟರು ಬೇಕಾಗಿದ್ದಾರೆ. ಎಲ್ಲಾ ಜಿಲ್ಲೆಗಳಿಂದಲೂ ವರದಿಗಾರರನ್ನು ನೇಮಕ ಮಾಡಲಾಗುತ್ತಿದೆ ಆಸಕ್ತರು ಈ ದೂರವಾಣಿಗೆ ಸಂಪರ್ಕಿಸಬಹುದು. 9900633109

**KENDHOOLI** *Kannada Weekly*
kendhooli.com/e-paper/
ಸಂಪುಟ - 02 | ಸಂಚಿಕೆ - 54 | ಪುಟ - 16 | ರೂ. 16/- | ನವೆಂಬರ್ 25 ರಿಂದ ಡಿಸೆಂಬರ್ 1, 2021
MAG(2)Npp/49/2020-21



# ಕುತೂಹಲ ಸೃಷ್ಟಿಸಿದ ಮದಗಜ ಟ್ರೈಲರ್

ಮದಗಜ ಟ್ರೇಲರ್‌ಗೆ ಭಾರಿ ಮೆಚ್ಚುಗೆ ವ್ಯಕ್ತವಾಗಿದ್ದು ಶ್ರೀಮುರಳಿ ನಟನೆಯನ್ನು ಸಿಎಂ ಬಸವರಾಜ ಬೊಮ್ಮಾಯಿ ಮೆಚ್ಚಿಕೊಂಡಿದ್ದಾರೆ. ಟ್ರೈಲರ್ ಸಿನಿಮಾಪ್ರಿಯರಲ್ಲಿ ಭಾರೀ ಕುತೂಹಲ ಸೃಷ್ಟಿಸಿದೆ.

ಶ್ರೀಮುರಳಿ ನಟನೆಯ 'ಮದಗಜ' ಚಿತ್ರದ ಟ್ರೇಲರ್ ಅನ್ನು ಸಿಎಂ ಬಸವರಾಜ ಬೊಮ್ಮಾಯಿ ಬಿಡುಗಡೆ ಮಾಡಿದ್ದಾರೆ. ಟ್ರೇಲರ್ ಬಿಡುಗಡೆಯಾದ ಕೆಲವೇ ಕ್ಷಣಗಳಲ್ಲಿ ಭಾರಿ ಮೆಚ್ಚುಗೆಗೆ ಪಾತ್ರವಾಗಿದೆ.

ಟ್ರೇಲರ್ ಬಿಡುಗಡೆ ಮಾಡಿದ ಸಿಎಂ ಬಸವರಾಜ ಬೊಮ್ಮಾಯಿ ಮುಕ್ತ ಕಂಠದಿಂದ ಶ್ರೀಮುರಳಿಯವರನ್ನು ಮೆಚ್ಚಿಕೊಂಡರು. 'ಶ್ರಮದಿಂದ ಕಲಿತಿದ್ದಿ, ಬೆವರು ಹರಿಸಿ ಅನುಭವ ಗಳಿಸಿದ್ದಿ. ಒಳ್ಳೆಯದಾಗಲಿ. ಟ್ರೇಲರ್ ಅದ್ಭುತವಾಗಿದೆ ಎಂದರು.

ಈ ಟ್ರೇಲರ್ ನೋಡಿದಾಗ ಇದೊಂದು ಸೆಂಟಿಮೆಂಟಲ್ ಆಕ್ಷನ್ ಥ್ರಿಲ್ಲರ್ ಅಂತ ಅನ್ನಿಸಿತು. ಸಿನಿಮಾ ಬಿಡುಗಡೆಯಾದಾಗ ಸಿನಿಮಾ ನೋಡಿ ಹೆಚ್ಚು ಮಾತನಾಡುತ್ತೇನೆ' ಎಂದರು.

ನಿರ್ಮಾಪಕ ಉಮಾಪತಿಯವರು ಫ್ಯಾಮಿಲಿ ಚೆನ್ನಾಗಿಟ್ಟುಕೊಂಡರು ಒಳ್ಳೆಯ ಕೆಲಸಗಳನ್ನು ಮಾಡಬಹುದು ಎಂದು ಕುಟುಂಬಕ್ಕೆ ಗೆಲುವನ್ನು ಅರ್ಪಿಸಿದರು. ನಿರ್ದೇಶಕ ಮಹೇಶ್ ಅವಕಾಶ ಕೊಟ್ಟವಿಲ್ಲರಿಗೂ ವಂದಿಸಿದರು.

ಈ ಕಾರ್ಯಕ್ರಮದಲ್ಲಿ ಸಚಿವರಾದ ಡಾ.ಸಿ.ಎನ್. ಅಶ್ವತ್ಥನಾರಾಯಣ ಮತ್ತು ಮುನಿರತ್ನ ಚಿತ್ರತಂಡಕ್ಕೆ ಶುಭ ಹರಸಿದರು. ಕಲಾವಿದರಾದ ಚಿಕ್ಕಣ್ಣ, ಶಿವರಾಜ್ ಕೆ ಆರ್ ಪೇಟೆ, ಆಶಿಕಾ ರಂಗನಾಥ್, ಧರ್ಮಣ್ಣ, ಗರುಡ ರಾಮ್, ಅನಿಲ್ ಮತ್ತು ಚಿತ್ರತಂಡ ಹಾಜರಿತ್ತು.



# ನಿಖಿಲ್ ರೈಡರ್ ತೆರೆಗೆ ರೆಡಿ

ಡಿಸೆಂಬರ್‌ನಲ್ಲಿ ಸಾಲು ಸಾಲು ಸಿನಿಮಾಗಳು ತೆರೆಗೆ ಬರಲು ಸಜ್ಜಾಗಿವೆ. ನಿಖಿಲ್ ಕುಮಾರ್ ನಟನೆಯ ಬಹುನಿರೀಕ್ಷಿತ ಸಿನಿಮಾ 'ರೈಡರ್' ಡಿ.24ಕ್ಕೆ ಬಿಡುಗಡೆಯಾಗಲಿದೆ. ಸೋಮವಾರ ಚಿತ್ರತಂಡವು ಬಿಡುಗಡೆ ದಿನಾಂಕ ಘೋಷಿಸಿದೆನಿಖಿಲ್ ಕುಮಾರ್, ಕಶ್ಮೀರ ಪರದೇಶಿ ಮುಖ್ಯ ಭೂಮಿಕೆಯಲ್ಲಿ ನಟಿಸಿರುವ ಈ ಸಿನಿಮಾವನ್ನು ಲಹರಿ ಪ್ರೊಡಕ್ಷನ್ಸ್ ಹಾಗೂ ಶಿವನಂದಿ ಎಂಟ್ರೈನ್‌ಮೆಂಟ್ಸ್ ನಿರ್ಮಾಣ ಮಾಡಿದೆ. ಸ್ಪೋರ್ಟ್ಸ್ ಆಕ್ಷನ್ ಡ್ರಾಮಾ ಕಥಾಹಂದರವನ್ನು ಚಿತ್ರವು ಹೊಂದಿದ್ದು, ತೆಲುಗಿನ ವಿಜಯ್ ಕುಮಾರ್ ಕೊಂಡ ಇದಕ್ಕೆ ಆಕ್ಷನ್ ಕಟ್ ಹೇಳಿದ್ದಾರೆ. ತೆಲುಗಿನ 'ಒಕ್ಕಾ ಲೈಲಾ ಕೋಸಂ' ಮತ್ತು 'ಗುಂಡೆ ಜಾರಿ ಗಲ್ಲನ್‌ಥೈಯಿಂದೆ' ಸಿನಿಮಾಗಳನ್ನು ನಿರ್ದೇಶಿಸಿದ ಖ್ಯಾತಿ ವಿಜಯ್ ಅವರದ್ದು.ಚಿತ್ರದಲ್ಲಿ ನಿಖಿಲ್ ಅವರದ್ದು ಬ್ಯಾಸ್ಕೆಟ್‌ಬಾಲ್ ಆಟಗಾರನ ಪಾತ್ರ. ಚಿತ್ರಕ್ಕೆ ಅರ್ಜುನ್ ಜನ್ಯಾ ಸಂಗೀತ ಸಂಯೋಜಿಸಿದ್ದಾರೆ. ಶ್ರೀಶ ಕೂದುವಳ್ಳಿ ಅವರ ಛಾಯಾಗ್ರಹಣವಿದೆ. ಸಂಪದ, ದತ್ತಣ್ಣ, ಅಚ್ಯುತ್‌ಕುಮಾರ್, ಚಿಕ್ಕಣ್ಣ, ಶಿವರಾಜ್ ಕೆ.ಆರ್. ಪೇಟೆ ತಾರಾಗಣದಲ್ಲಿದ್ದಾರೆ.



# ಕನ್ನಡಿಗ ಚಿತ್ರದಲ್ಲಿ ಶಿವಣ್ಣ ಹಾಡು

ನಟ ಶಿವರಾಜ್‌ಕುಮಾರ್ ಅವರು ನಟನೆಯ ಜತೆಗೆ ಕೆಲ ಹಾಡುಗಳನ್ನು ಕೂಡ ಹಾಡಿದ್ದಾರೆ. ಅವರ ಕಂಠ ಅನೇಕರಿಗೆ ಇಷ್ಟವಾಗುತ್ತದೆ. ಶಿವಣ್ಣ ಸಾಕಷ್ಟು ಹಾಡುಗಳಿಗೆ ಧ್ವನಿಯಾಗಿದ್ದಾರೆ. ಈಗ ರವಿಚಂದ್ರನ್ ಅಭಿನಯದ 'ಕನ್ನಡಿಗ' ಸಿನಿಮಾದ ಟೈಟಲ್ ಟ್ರ್ಯಾಕ್‌ಅನ್ನು ಶಿವರಾಜ್‌ಕುಮಾರ್‌ಹಾಡಿದ್ದಾರೆ. ಈ ಸಾಂಗ್ ಅದ್ಭುತವಾಗಿ ಮೂಡಿ ಬಂದಿದ್ದು, ಸಿನಿಪ್ರಿಯರಿಗೆ ಇಷ್ಟವಾಗಿದೆ. ಓಂಕಾರ್ ಮೂವೀಸ್ ಬ್ಯಾನರ್ ಅಡಿಯಲ್ಲಿ 'ಕನ್ನಡಿಗ' ಸಿನಿಮಾ ಸಿದ್ಧವಾಗಿದೆ. ಎನ್. ಎಸ್. ರಾಜ್‌ಕುಮಾರ್ ಅವರು ಈ ಸಿನಿಮಾ ನಿರ್ಮಾಣ ಮಾಡುತ್ತಿದ್ದಾರೆ. ಬಿ.ಎಂ. ಗಿರಿರಾಜ್ ಅವರು ಈ ಸಿನಿಮಾದ ಕಥೆಯನ್ನು ಬರೆದು ನಿರ್ದೇಶನ ಮಾಡುತ್ತಿದ್ದಾರೆ. ರವಿಂದ್ರನ್, ಪಾವನಾ, ಜೀವಿಕಾ ಜಗದೀಶ್ ಮೈತ್ರಿ, ಬಾಲಾಜಿ ಮನನೋಹರ್, ಅಚ್ಯುತ್ ಕುಮಾರ್ ಮೊದಲಾದವರು ಸಿನಿಮಾದಲ್ಲಿ ನಟಿಸಿದ್ದಾರೆ.




ಈ ಸಿನಿಮಾದ ಟೈಟಲ್ ಟ್ರ್ಯಾಕ್ ಶಿವರಾಜ್‌ಕುಮಾರ್ ಕಂಠದಿಂದ ಮೂಡಿ ಬಂದಿದೆ. ಖ್ಯಾತ ಸಂಗೀತ ನಿರ್ದೇಶಕ ರವಿ ಬಸ್ರೂರ್ ಅವರು ಈ ಹಾಡಿಗೆ ಸಂಗೀತ ಸಂಯೋಜನೆ ಮಾಡಿದ್ದಾರೆ. 'ಕೆಜಿಎಫ್'ನಂತಹ ಹಿಟ್ ಚಿತ್ರಗಳಿಗೆ ಸಂಗೀತ ಸಂಯೋಜನೆ ಮಾಡಿದ ಖ್ಯಾತಿ ಅವರಿಗೆ ಇದೆ. 'ಕೆಜಿಎಫ್' ಸಿನಿಮಾ ಮೂಲಕ ಅವರ ಜನಪ್ರಿಯತೆ ಹೆಚ್ಚಾಗಿದೆ. ಈಗ 'ಕನ್ನಡಿಗ' ಚಿತ್ರಕ್ಕೂ ಅವರೇ ಸಂಗೀತ ಸಂಯೋಜನೆ ಮಾಡಿದ್ದಾರೆ. ಈ ಹಾಡಿಗೆ ಖ್ಯಾತ ನಿರ್ದೇಶಕ ಸಂತೋಷ್ ಆನಂದ್‌ರಾಮ್ ಅವರು ಸಾಹಿತ್ಯ ಬರೆದಿದ್ದಾರೆ. ರವಿಚಂದ್ರನ್ ಅವರು ಸಾಲುಸಾಲು ಸಿನಿಮಾಗಳನ್ನು ಒಪ್ಪಿಕೊಂಡಿದ್ದಾರೆ. 'ಕನ್ನಡಿಗ' ಚಿತ್ರ ಹೆಸರೇ ಹೇಳುವಂತೆ ಇದೊಂದು ಕನ್ನಡಿಗನ ಕಥೆ ಹೇಳುತ್ತದೆ ಎಂಬುದು ಗೊತ್ತಾಗುತ್ತದೆ. 'ಕನ್ನಡಿಗ' ಯಾವ ರೀತಿಯಲ್ಲಿ ಮೂಡಿ ಬಂದಿದೆ ಎಂಬುದನ್ನು ಕಾದು ನೋಡಬೇಕಿದೆ. ಈ ಸಿನಿಮಾ ಯಾವಾಗ ರಿಲೀಸ್ ಆಗಲಿದೆ ಎನ್ನುವ ವಿಚಾರಕ್ಕೆ ಚಿತ್ರತಂಡದಿಂದಲೇ ಉತ್ತರ ಸಿಗಬೇಕಿದೆ.

# ಗಾನವಿಯ ಭಾವಚಿತ್ರ

ಕಿರುತೆರೆಯ ಜನಪ್ರಿಯ ಧಾರಾವಾಹಿ 'ಮಗಳು ಜಾನಕಿ' ಮೂಲಕ ಜನಪ್ರಿಯಗೊಂಡ ನಟಿ ಗಾನವಿ ಲಕ್ಷ್ಮಣ್ ಅವರು ರಿಷಬ್ ಶೆಟ್ಟಿ ನಟನೆಯ 'ಹೀರೋ' ಚಿತ್ರದ ಮೂಲಕ ನಾಯಕಿಯಾದರು. ಆ ಮೂಲಕ ಬೆಳ್ಳಿತೆರೆಗೂ ಗ್ರ್ಯಾಂಡ್ ಆಗಿಯೇ ಎಂಟ್ರಿ ನೀಡಿದರು. ಇದೀಗ ಅವರು ಮತ್ತೊಂದು ಚಿತ್ರದಲ್ಲಿಯೂ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ಆ ಚಿತ್ರಕ್ಕೆ 'ಭಾವಚಿತ್ರ' ಎಂದು ಹೆಸರಿಡಲಾಗಿದೆ. ಈಚೆಗೆ ಇದರ ಟ್ರೈಲರ್ ಕೂಡ ರಿಲೀಸ್ ಆಗಿ ಎಲ್ಲರ ಗಮನಸೆಳೆದಿದೆ. 'ಭಾವಚಿತ್ರ' ಸಿನಿಮಾಕ್ಕೆ ಗಿರೀಶ್ ಕುಮಾರ್ ನಿರ್ದೇಶನ ಮಾಡಿದ್ದಾರೆ. ಈ ಸಿನಿಮಾದ ಬಗ್ಗೆ ಮಾತನಾಡುವ ನಾಯಕಿ ಗಾನವಿ, 'ಈ ಚಿತ್ರದಲ್ಲಿ ನನ್ನ ಪಾತ್ರ ಚೆನ್ನಾಗಿದೆ. ಇದರ ಕಥೆಯನ್ನು ನಿರ್ದೇಶಕ ಗಿರೀಶ್ ಕುಮಾರ್ ಅವರು 'ಮಗಳು ಜಾನಕಿ'ಧಾರಾವಾಹಿ ಸಮಯದಲ್ಲೇ ನನಗೆ ಹೇಳಿದ್ದರು. ಕಥೆ ತುಂಬ ಇಷ್ಟವಾಗಿತ್ತು. ನಮ್ಮ ಚಿತ್ರಕ್ಕೆ ನಿಮ್ಮೆಲ್ಲರ ಪ್ರೋತ್ಸಾಹವಿರಲಿ' ಎನ್ನುತ್ತಾರೆ ಅವರು. 'ಭಾವಚಿತ್ರ' ಸಿನಿಮಾದಲ್ಲಿ ನಾಯಕರಾಗಿ ಚಕ್ರವರ್ತಿ ಕಾಣಿಸಿಕೊಂಡಿದ್ದಾರೆ. 'ನಾನು ಈ ಚಿತ್ರದಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಆಗಿ ಕಾಣಿಸಿಕೊಂಡಿದ್ದೇನೆ. ಜೊತೆಗೆ ಫೋಟೊಗ್ರಾಫಿ ನನ್ನ ಹವ್ಯಾಸ ಆಗಿರುತ್ತದೆ. ಎಲ್ಲವೂ ಉತ್ತಮವಾಗಿದ್ದು, ಜೀವನ ಚೆನ್ನಾಗಿ ಸಾಗುತ್ತಿರುವಾಗ, ಕೆಲವು ಅನಿರೀಕ್ಷಿತ ತಿರುವುಗಳು ಬರುತ್ತವೆ. ಈ ರೀತಿಯ ವಿಭಿನ್ನ ಕಥೆಯೊಂದಿಗೆ ಚಿತ್ರ ಸಾಗುತ್ತದೆ' ಎನ್ನುತ್ತಾರೆ ಅವರು. 'ಇದೊಂದು ಟೆಕ್ನೋ ಥ್ರಿಲ್ಲರ್, ಸೆಂಟಿಮೆಂಟ್ ಸನ್ನಿವೇಶಗಳನ್ನು ಒಳಗೊಂಡಿರುವ ಚಿತ್ರ. ಭಾವಚಿತ್ರ ಹಾಗೂ ಕ್ಯಾಮೆರಾ ಮೇಲೆ ನಮ್ಮ ಚಿತ್ರದ ಕಥೆ ಸಾಗುತ್ತದೆ. ಇದಷ್ಟೇ ಅಲ್ಲ. ಪ್ರೀತಿಯ ಸನ್ನಿವೇಶಗಳು ನಮ್ಮ ಚಿತ್ರದಲ್ಲಿದೆ. ಇಡೀ ಚಿತ್ರತಂಡದ ಸಹಕಾರದಿಂದ ನಮ್ಮ ಚಿತ್ರ ಉತ್ತಮವಾಗಿ ಮೂಡಿಬಂದಿದೆ' ಎಂದು ಚಿತ್ರದ ಬಗ್ಗೆ ವಿವರಣೆ ನೀಡುತ್ತಾರೆ ನಿರ್ದೇಶಕ ಗಿರೀಶ್ ಕುಮಾರ್. ಈ ಹಿಂದೆ ಬಂದ 'ಆವಾಹಯಾಮಿ' ಚಿತ್ರದ ನಂತರ ಅವರು ನಿರ್ದೇಶಿಸಿರುವ ಚಿತ್ರವಿದು.





KENDHOOLI, Kannada Weekly Printed by, Published by, Owned by & Edited by: T MANJUNATHA, DS MAX SAVVY APARTMENT, PLOT NO 202,2ND FLOOR, JP NAGARA 9TH PHASE, AMRUTHNAGARA MAIN ROAD, ANJANAPURA BANGALORE 560108
Printed at : Brundavan printers, 88/1 1st cross, sameerpura road, Kg nagara Bengaluru-560019
Mob: +91 99161 91222. email: kendhooli18@gmail.com
The Editor is Responsible for selection of news under the PRB Act